# ಕರ್ನಾಟಕ ವಿಧಾನ ಮಂಡಲ

## ಮಾನ್ಯ ಶಾಸಕರುಗಳಿಗೆ

## ‘‘ ತರಬೇತಿ ಶಿಬಿರ ’’

ದಿನಾಂಕ 03-02-2022, ಗುರುವಾರ

ಮತ್ತು

04-02-2022, ಶುಕ್ರವಾರ

ಸ್ಥಳಃ ಕೊಠಡಿ ಸಂಖ್ಯೆ 419, 4 ನೇ ಮಹಡಿ, ವಿಕಾಸ ಸೌಧ,

ಬೆಂಗಳೂರು-560 001

# ಮಾನ್ಯ ಶಾಸಕರುಗಳ ತರಬೇತಿ ಶಿಬಿರ

ದಿನಾಂಕ 03-02-2022 (ಗುರುವಾರ)

## ವಿಷಯಸೂಚಿ (Index)


| ಕ್ರಮ ಸಂಖ್ಯೆ | ವಿಷಯ | ಮಾತನಾಡಿದ ಗಣ್ಯರು | ಪುಟ ಸಂಖ್ಯೆ |
|---|---|---|---|
| 1 | ಸ್ವಾಗತ ಭಾಷಣ | ಶ್ರೀಮತಿ ಕೆ.ಆರ್.ಮಹಾಲಕ್ಷ್ಮಿ<br>ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು | 8 |
| 2 | ಉದ್ಘಾಟನಾ ಭಾಷಣ | ಶ್ರೀ ಜೆ.ಸಿ.ಮಾಧುಸ್ವಾಮಿ<br>ಮಾನ್ಯ ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರ ಮತ್ತು ಶಾಸನ ರಚನಾ ಸಚಿವರು | 9-12 |
| 3 | ವಿಧೇಯಕಗಳು, ವಿತ್ತೀಯ ಕಾರ್ಯಕಲಾಪಗಳು | ಶ್ರೀ ಸಿದ್ಧರಾಮಯ್ಯ<br>ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾಜಿ ಮುಖ್ಯ ಮಂತ್ರಿಗಳು | 13-15 |
| 4 | ರಾಜ್ಯದ ಅಭಿವೃದ್ಧಿಯ ಪಾಲುದಾರನಾಗಿ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಪಾತ್ರ | ಶ್ರೀ ಸಿದ್ಧರಾಮಯ್ಯ<br>ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾಜಿ ಮುಖ್ಯ ಮಂತ್ರಿಗಳು | 16-17 |
| 5 | ವಿಧಾನ ಮಂಡಲದ ಸ್ಥಾಯಿ ಸಮಿತಿಗಳು, ಸದನ ಸಮಿತಿಗಳು ಹಾಗೂ ಅವುಗಳ ಕಾರ್ಯನಿರ್ವಹಣೆ | ಶ್ರೀ ಕೆ.ಆರ್.ರಮೇಶ್‌ಕುಮಾರ್<br>ಮಾನ್ಯ ಶಾಸಕರು, ಕರ್ನಾಟಕ ವಿಧಾನಸಭೆ ಹಾಗೂ ಮಾಜಿ ಸಭಾಧ್ಯಕ್ಷರು | 18-21 |
| 6 | ಅಧಿವೇಶನದ ಕಲಾಪಗಳು:<br>ಪ್ರಶ್ನೋತ್ತರ ವೇಳೆ, ಗಮನ ಸೆಳೆಯುವ ಸೂಚನೆ, ಶೂನ್ಯ ವೇಳೆ, ಸಾರ್ವಜನಿಕ ಮಹತ್ವದ ವಿಷಯಗಳು | ಶ್ರೀ ಬಿ.ಎಲ್.ಶಂಕರ್<br>ಮಾನ್ಯ ಮಾಜಿ ಸಭಾಪತಿಯವರು | 22-26 |

# ಮಾನ್ಯ ಶಾಸಕರುಗಳ ತರಬೇತಿ ಶಿಬಿರ

ದಿನಾಂಕ 04-02-2022 (ಶುಕ್ರವಾರ)

## ವಿಷಯಸೂಚಿ (Index)


| ಕ್ರಮ ಸಂಖ್ಯೆ | ವಿಷಯ | ಮಾತನಾಡಿದ ಗಣ್ಯರು | ಪುಟ ಸಂಖ್ಯೆ |
|---|---|---|---|
| 1 | ಸ್ವಾಗತ ಭಾಷಣ | ಶ್ರೀಮತಿ ಕೆ.ಆರ್.ಮಹಾಲಕ್ಷ್ಮಿ<br>ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು | 30 |
| 2 | ಸಂವಿಧಾನದ ಅಡಿಯಲ್ಲಿ ಜನರ ನಿರೀಕ್ಷೆ ಹಾಗೂ ಶಾಸಕರ ಜವಾಬ್ದಾರಿ | ಶ್ರೀ ವಿಶ್ವೇಶ್ವರಹೆಗಡೆ ಕಾಗೇರಿ<br>ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ | 31-37 |
| 3 | ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ ನಿರ್ವಹಿಸುವಂತಹ ಕಾರ್ಯವೈಖರಿ | ಶ್ರೀಮತಿ ಶಾಲಿನಿ ರಜನೀಶ್<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ | 38-41 |
| 4 | ಸದನದಲ್ಲಿ ಶಾಸಕರ ಜವಾಬ್ದಾರಿಗಳು, ಕರ್ತವ್ಯಗಳು ಮತ್ತು ಹಕ್ಕುಗಳು, ಶಾಸನ ಸಭೆಯ ಪರಿಭಾಷೆ, ಪದಬಳಕೆ, ಸಕಾರಾತ್ಮಕ ಧೋರಣೆಗಳು | ಶ್ರೀ ಕೆ.ಟಿ.ಶ್ರೀಕಂಠೇಗೌಡ<br>ಮಾನ್ಯ ಶಾಸಕರು<br>ಕರ್ನಾಟಕ ವಿಧಾನ ಪರಿಷತ್ತು | 42-46 |
| 5 | ಸದನದಲ್ಲಿ ಕಡ್ಡಾಯ ಹಾಜರಾತಿ ಅವಶ್ಯಕತೆ ಹಾಗೂ ಅನುಸರಿಸಬೇಕಾದ ನಿಯಮಗಳು | ಶ್ರೀ ಡಿ.ಹೆಚ್.ಶಂಕರಮೂರ್ತಿ<br>ಮಾನ್ಯ ಮಾಜಿ ಸಭಾಪತಿಯವರು<br>ಕರ್ನಾಟಕ ವಿಧಾನ ಪರಿಷತ್ತು | 47-48 |
| 6 | ಶಾಸಕರಾಗಿ ಮಾಧ್ಯಮ ನಿರ್ವಹಣೆ | ಶ್ರೀ ಗೋ.ಮಧುಸೂದನ<br>ಮಾಜಿ ಶಾಸಕರು<br>ಕರ್ನಾಟಕ ವಿಧಾನ ಪರಿಷತ್ತು | 49-53 |
| 7 | ತರಬೇತಿ ಶಿಬಿರದ ಬಗ್ಗೆ ಅನಿಸಿಕೆ | (ಅ) ಶ್ರೀ ಎಂ.ಎಲ್.ಅನಿಲ್‌ಕುಮಾರ್<br>ಮಾನ್ಯ ಶಾಸಕರು<br>ಕರ್ನಾಟಕ ವಿಧಾನ ಪರಿಷತ್ತು<br>(ಆ) ಶ್ರೀ ಕೆ.ಎಸ್.ನವೀನ್<br>ಮಾನ್ಯ ಶಾಸಕರು<br>ಕರ್ನಾಟಕ ವಿಧಾನ ಪರಿಷತ್ತು | 54-55<br><br><br>56 |

| | | | |
|---|---|---|---|
| | | (ಇ) ಶ್ರೀ ಡಿ.ತಿಮ್ಮಯ್ಯ<br>ಮಾನ್ಯ ಶಾಸಕರು<br>ಕರ್ನಾಟಕ ವಿಧಾನ ಪರಿಷತ್ತು<br>(ಈ) ಶ್ರೀ ಕುಶಾಲಪ್ಪ ಎಂ.ಪಿ (ಸೂಜಾ)<br>ಮಾನ್ಯ ಶಾಸಕರು<br>ಕರ್ನಾಟಕ ವಿಧಾನ ಪರಿಷತ್ತು<br>(ಉ) ಶ್ರೀ ಸಿ.ಎನ್.ಮಂಜೇಗೌಡ<br>ಮಾನ್ಯ ಶಾಸಕರು<br>ಕರ್ನಾಟಕ ವಿಧಾನ ಪರಿಷತ್ತು | 57<br><br><br>58<br><br><br>64 |
| ೮ | ಸಮಾರೋಪ ನುಡಿ | ಪ್ರೊ. ಪಿ.ಈಶ್ವರಭಟ್ಟ<br>ಕುಲಪತಿಗಳು<br>ಕರ್ನಾಟಕ ಕಾನೂನು ವಿಶ್ವವಿದ್ಯಾಲಯ | 59–63 |
| ೯ | ವಂದನಾರ್ಪಣೆ | ಶ್ರೀಮತಿ ಎಸ್.ನಿರ್ಮಲ<br>ಅಪರ ಕಾರ್ಯದರ್ಶಿ<br>ಕರ್ನಾಟಕ ವಿಧಾನ ಪರಿಷತ್ತು | 65 |

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಿಗೆ ದಿನಾಂಕ 03.02.2022 ರ ಗುರುವಾರದಂದು ಬೆಳಗ್ಗೆ 10.30 ಗಂಟೆಗೆ ಕೊಠಡಿ ಸಂಖ್ಯೆ 419, 4ನೇ ಮಹಡಿ, ವಿಕಾಸ ಸೌಧ, ಬೆಂಗಳೂರು ಇಲ್ಲಿ ಏರ್ಪಡಿಸಿದ್ದ "ತರಬೇತಿ ಶಿಬಿರ" ದ ನಡವಳಿಗಳ ಸಾರಾಂಶ**

## ಸಭೆಯಲ್ಲಿ ಹಾಜರಿದ್ದ ಮಹನೀಯರು:

| | | |
|---|---|---|
| 1. | **ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ** | ಸಭಾಪತಿಯವರು ಮತ್ತು ಅಧ್ಯಕ್ಷರು |
| 2. | **ಶ್ರೀ ಜೆ.ಸಿ. ಮಾಧುಸ್ವಾಮಿ** | ಸಣ್ಣ ನೀರಾವರಿ, ಕಾನೂನು ಸಂಸದೀಯ ವ್ಯವಹಾರ ಮತ್ತು ಶಾಸನ ರಚನಾ ಸಚಿವರು ಮತ್ತು ಉದ್ಘಾಟಕರು |
| 3. | **ಶ್ರೀ ಸಿದ್ದರಾಮಯ್ಯ** | ವಿರೋಧ ಪಕ್ಷದ ನಾಯಕರು ಹಾಗೂ ಮಾಜಿ ಮುಖ್ಯಮಂತ್ರಿಗಳು |
| 4. | **ಶ್ರೀ ಬಿ.ಕೆ. ಹರಿಪ್ರಸಾದ್** | ವಿರೋಧ ಪಕ್ಷದ ನಾಯಕರು, ವಿಧಾನ ಪರಿಷತ್ತು |
| 5. | **ಶ್ರೀ ಕೆ.ಆರ್.ರಮೇಶ್ ಕುಮಾರ್** | ಮಾನ್ಯ ಶಾಸಕರು ಹಾಗೂ ವಿಧಾನ ಸಭೆಯ ಮಾಜಿ ಸಭಾಧ್ಯಕ್ಷರು |
| 6. | **ಶ್ರೀ ಬಿ.ಎಲ್.ಶಂಕರ್** | ವಿಧಾನ ಪರಿಷತ್ತಿನ ಮಾಜಿ ಸಭಾಪತಿಯವರು |

## ಸಭೆಯಲ್ಲಿ ಹಾಜರಿದ್ದ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು

1. **ಶ್ರೀ ಕೆ.ಟಿ. ಶ್ರೀಕಂಠೇಗೌಡ**
2. **ಶ್ರೀ ಅರವಿಂದ ಕುಮಾರ್ ಅರಳಿ**
3. **ಶ್ರೀಮತಿ ಭಾರತಿ ಶೆಟ್ಟಿ**
4. **ಶ್ರೀ ಸಿ.ಎಂ. ಲಿಂಗಪ್ಪ**
5. **ಶ್ರೀ ಕೆ. ಹರೀಶ್ ಕುಮಾರ್**

6. ಶ್ರೀ ಮೋಹನ ಕುಮಾರ್ ಕೊಂಡಜ್ಜಿ

7. ಶ್ರೀ ಪಿ.ಆರ್. ರಮೇಶ್

8. ಶ್ರೀ ಎನ್. ರವಿಕುಮಾರ್

9. ಶ್ರೀ ಎಸ್. ರವಿ

10. ಶ್ರೀ ಅ.ದೇವೇಗೌಡ

11. ಶ್ರೀ ಎಸ್. ರುದ್ರೇಗೌಡ

12. ಡಾ. ತೇಜಸ್ವಿನಿ ಗೌಡ

13. ಶ್ರೀ ಯು.ಬಿ. ವೆಂಕಟೇಶ್

14. ಶ್ರೀ ಹೆಚ್.ಎಂ. ರಮೇಶ್ ಗೌಡ

15. ಶ್ರೀ ಕೆ.ಎ. ತಿಪ್ಪೇಸ್ವಾಮಿ

16. ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.

17. ಶ್ರೀ ಡಿ.ಎಸ್. ಅರುಣ್

18. ಶ್ರೀ ಎಂ.ಎಲ್. ಅನಿಲ್ ಕುಮಾರ್,

19. ಶ್ರೀ ಚಿದಾನಂದ್ ಎಂ. ಗೌಡ

20. ಶ್ರೀ ದಿನೇಶ್ ಗೂಳಿಗೌಡ

21. ಶ್ರೀ ಗೋವಿಂದ ರಾಜು

22. ಶ್ರೀ ಗಣಪತಿ ದುಮ್ಮಾ ಉಳ್ವೇಕರ್

23. ಶ್ರೀ ಹೆಚ್.ಎಸ್. ಗೋಪಿನಾಥ್

24. ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ)

25 ಶ್ರೀ ಮಂಜುನಾಥ ಭಂಡಾರಿ

26 ಶ್ರೀ ಸಿ.ಎನ್. ಮಂಜೇಗೌಡ

27 ಶ್ರೀ ಕೆ.ಎಸ್. ನವೀನ್

28 ಶ್ರೀ ಪಿ.ಹೆಚ್. ಪೂಜಾರ್

29 ಶ್ರೀ ರಾಜೇಂದ್ರ ರಾಜಣ್ಣ

30 ಡಾ. ಡಿ. ತಿಮ್ಮಯ್ಯ

31 ಶ್ರೀ ಶರಣಗೌಡ ಬಯ್ಯಾಪುರ

32 ಶ್ರೀ ವೈ.ಎಂ. ಸತೀಶ್

**<u>ಸಭೆಯಲ್ಲಿ ಹಾಜರಿದ್ದ ಕರ್ನಾಟಕ ವಿಧಾನ ಪರಿಷತ್ತಿನ ಅಧಿಕಾರಿಗಳು:</u>**

| | | |
|---|---|---|
| 1 | **ಶ್ರೀಮತಿ ಕೆ.ಆರ್. ಮಹಾಲಕ್ಷ್ಮಿ** | ಕಾರ್ಯದರ್ಶಿ |
| 2 | **ಶ್ರೀಮತಿ ಎಸ್. ನಿರ್ಮಲ** | ಅಪರ ಕಾರ್ಯದರ್ಶಿ |

## (ತರಬೇತಿ ಶಿಬಿರದ ಕಾರ್ಯಕ್ರಮವನ್ನು ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲಾಯಿತು)

**ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯದರ್ಶಿಗಳಾದ ಶ್ರೀಮತಿ ಕೆ.ಆರ್. ಮಹಾಲಕ್ಷ್ಮಿಯವರು** ಸ್ವಾಗತ ಭಾಷಣದ ಮೂಲಕ, ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲ ಗಣ್ಯರನ್ನು ಹಾಗೂ ನೂತನ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾದ ಶ್ರೀ ಬಿ.ಕೆ.ಹರಿಪ್ರಸಾದ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿರುವಂತಹ ಮಾನ್ಯ ಜೆ.ಸಿ. ಮಾಧುಸ್ವಾಮಿ, ಮಾನ್ಯ ಶಾಸಕರಾದ ಶ್ರೀಮತಿ ಭಾರತಿ ಶೆಟ್ಟಿ, ಡಾ.ತೇಜಸ್ವಿನಿಗೌಡ, ಶ್ರೀಮತಿ ವೀಣಾ ಅಚ್ಚಯ್ಯ ಹಾಗೂ ವಿಧಾನ ಪರಿಷತ್ತಿನ ಕಾರ್ಯದರ್ಶಿಯವರಾದ ಶ್ರೀಮತಿ ಕೆ.ಆರ್.ಮಹಾಲಕ್ಷ್ಮಿಯವರು ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಾಗಾರವನ್ನು ವಿದ್ಯುಕ್ತವಾಗಿ ಉದ್ಘಾಟಿಸಿದರು)**

# ಉದ್ಘಾಟನಾ ಭಾಷಣ

**ಶ್ರೀ ಜೆ.ಸಿ.ಮಾಧುಸ್ವಾಮಿ, ಸಣ್ಣ ನೀರಾವರಿ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು** ಉದ್ಘಾಟನಾ ಭಾಷಣವನ್ನು ಮಾಡುತ್ತಾ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರೇ ಶ್ರೇಷ್ಠ; ಅವರ ಆಸೆ-ಆಕಾಂಕ್ಷೆಗಳನ್ನು ಕಾರ್ಯಕ್ರಮಗಳ ಮೂಲಕ ಮತ್ತು ನೀತಿ-ನಿಯಮಗಳ ಮೂಲಕ ಅನುಷ್ಠಾನ ಮಾಡುವುದು ಶಾಸಕರ ಆದ್ಯ ಕರ್ತವ್ಯವಾಗಿದೆ. ಸ್ಥಳೀಯ ಸಂಸ್ಥೆಗಳ ಜನ ಪ್ರತಿನಿಧಿಗಳಿಂದ ಆಯ್ಕೆಗೊಂಡು, ವಿಧಾನ ಪರಿಷತ್ತಿಗೆ ಬಂದಿರುವಂತಹ ನೂತನ ಸದಸ್ಯರು ಅವರ ಭಾವನೆಗಳಿಗೆ ಸ್ಪಂದಿಸುವುದರ ಜೊತೆಗೆ ಬಹುತೇಕ ಗ್ರಾಮೀಣ ಪ್ರದೇಶದ ಅಭಿವೃದ್ಧಿಯನ್ನೂ ಮನಸ್ಸಿನಲ್ಲಿಟ್ಟುಕೊಂಡು ಕಾರ್ಯನಿರ್ವಹಿಸಬೇಕಾಗುತ್ತದೆ ಎನ್ನುವ ಸಲಹೆಯನ್ನು ನೀಡಿದರು.

ಶಾಸನ ಸಭೆಗಳಲ್ಲಿ ನಡೆಯುವಂತಹ ಚರ್ಚೆಗಳೆಂಬ ಮೊಸರನ್ನು ಕಡೆದಾಗ, ಭಾವನೆಗಳು ಮತ್ತು ತಿಳುವಳಿಕೆಗಳು ಎನ್ನುವ ಬೆಣ್ಣೆ ದೊರೆಯುತ್ತದೆ. ಜೀವನದ ಎಲ್ಲಾ ಆಯಾಮಗಳು ಮತ್ತು ಸ್ಥರಗಳಿಂದ ಆಯ್ಕೆಗೊಂಡು ಬಂದಿರುವವರ ಅನುಭವದ ಆಧಾರದ ಮೇಲೆ ನೀತಿ ನಿರೂಪಿಸುವುದು ಶಾಸನ ಸಭೆಯ ಮುಖ್ಯ ಕರ್ತವ್ಯವೆಂದು ಹೇಳಿದರು.

ಶಾಸನ ಸಭೆಯ ಸದಸ್ಯರಾಗಿ ಆಯ್ಕೆಗೊಂಡವರು ರಾಜ್ಯದ ಸಮಸ್ಯೆಗಳ ಬಗ್ಗೆ, ರಾಜ್ಯದ ಹಿತಾಸಕ್ತಿ ಬಗ್ಗೆ ಮತ್ತು ಅದರ ಆಗು-ಹೋಗುಗಳ ಬಗ್ಗೆ ಹೆಚ್ಚುಹೆಚ್ಚು ಚರ್ಚೆಗಳಲ್ಲಿ ಭಾಗವಹಿಸಿದರೆ ಮಾತ್ರ ರಾಜ್ಯಕ್ಕೆ ಹಿತವಾಗುತ್ತದೆ. ಮೊದಲು speaking to gallery ಎನ್ನಲಾಗುತ್ತಿತ್ತು. ಆದರೆ ಈಗ speaking to media ಎಂದು ಹೇಳಲಾಗುತ್ತಿದೆ. ಪ್ರಚಾರಕ್ಕೋಸ್ಕರ ಮಾತನಾಡುವುದನ್ನು ಬಿಟ್ಟು, ಪೂರ್ವ ತಯಾರಿ ನಡೆಸಿ, ಸದನದೊಳಗೆ ಆತ್ಮಸಾಕ್ಷಿಯಾಗಿ ಮತ್ತು ಬೇರೆಯವರು ಕುಳಿತುಕೊಂಡು ಕೇಳುವ ಸ್ಥಿತಿಯಲ್ಲಿ ಮಾತನಾಡಬೇಕಾಗುತ್ತದೆ. ಸದಸ್ಯರು ಮಾತನಾಡುವ ಪ್ರತಿ ಕ್ಷಣವೂ ಇತಿಹಾಸ ಸೃಷ್ಟಿಯಾಗುತ್ತದೆ. ಏಕೆಂದರೆ, ಮುಂದಿನ ಜನಾಂಗದವರು ನಮ್ಮ ಮಾತು ಹಾಗೂ ವರ್ತನೆಯ ಬಗ್ಗೆ ವ್ಯಾಖ್ಯಾನಿಸುತ್ತಾರೆ ಮತ್ತು ಉಲ್ಲೇಖಿಸುತ್ತಾರೆ ಎನ್ನುವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸದಸ್ಯರುಗಳು ಮಾತನಾಡಬೇಕೆನ್ನುವ ಮಾರ್ಗದರ್ಶನವನ್ನು ನೀಡಿದರು.

ಇದು ಅಂತರ್ಜಾಲ ಯುಗವಾಗಿದೆ. ಅಂತರ್ಜಾಲದ ಮೂಲಕ ಸದಸ್ಯರಿಗೆ ಬೇಕಾಗಿರುವ ವಿಷಯಕ್ಕೆ ಸಂಬಂಧಪಟ್ಟ ಹಲವಾರು ಮಾಹಿತಿಗಳು ಮತ್ತು ಅಂಕಿಅಂಶಗಳು ಲಭ್ಯವಾಗುತ್ತವೆ. ಇವುಗಳನ್ನು ಬಳಸಿಕೊಂಡು ಶಾಸನ ಸಭೆಗಳಿಗೆ ಸದಸ್ಯರುಗಳು ಸಿದ್ಧರಾಗಿ ಬಂದು, ಸಾಮಾನ್ಯವಾಗಿ ಮಾತನಾಡದೇ, ಬಹಳ ನಿಖರವಾಗಿ ಮಾತನಾಡಿದಾಗ ಮಾತ್ರವೇ ಸಭೆಗೆ ನಿಜವಾದ ಮನ್ನಣೆ ದೊರೆಯುತ್ತದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ನಿಯಮ 68 ಮತ್ತು ಗಮನ ಸೆಳೆಯುವ ಸೂಚನೆ ಇತ್ಯಾದಿ ಶೀರ್ಷಿಕೆಗಳಡಿ ವಿಷಯಗಳನ್ನು ಹೇಗೆ ಪ್ರಸ್ತಾಪಿಸಬೇಕು ಮತ್ತು ವಿಷಯವನ್ನು ಮನವರಿಕೆ ಮಾಡಿಕೊಡಲು ಎಷ್ಟು ಮಾತನಾಡಬೇಕು ಎನ್ನುವ ಅಂಶಗಳನ್ನು ಸದಸ್ಯರುಗಳು ಅಳವಡಿಸಿಕೊಳ್ಳಬೇಕು. ಮಾತನಾಡಲು ಕೊಟ್ಟ ಅವಕಾಶವನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಎನ್ನುವುದರ ಬಗ್ಗೆ ಎಲ್ಲ ಸದಸ್ಯರುಗಳು ತಿಳಿದುಕೊಂಡಾಗ ಮಾತ್ರ ಶಾಸನ ಸಭೆಯ ಸಮಯ ಉಳಿತಾಯವಾಗುತ್ತದೆ ಹಾಗೂ ಇದರಿಂದ ಎಲ್ಲ ಸದಸ್ಯರಿಗೂ ಚರ್ಚೆಯಲ್ಲಿ ಭಾಗವಹಿಸುವ ಅವಕಾಶಗಳು ದೊರೆಯುತ್ತದೆ ಎನ್ನುವ ಸಲಹೆಗಳನ್ನು ನೀಡಿದರು.

ಒಂದು ಬಾರಿ ಶಾಸಕರಾಗಿ ಆಯ್ಕೆಗೊಂಡರೆ ನಾವು ಎಲ್ಲರಿಗಿಂತಲೂ ಮೇಲು ಹಾಗೂ ನಮಗೆ ವಿಶೇಷ ಸವಲತ್ತುಗಳು ಸೃಷ್ಟಿಯಾಗಬೇಕು ಎನ್ನುವ ಭಾವನೆ ಇತ್ತೀಚಿನ ದಿನಗಳಲ್ಲಿ ಮೂಡುತ್ತಿದೆ ಹಾಗೂ ವಿಶೇಷ ಸವಲತ್ತುಗಳನ್ನು ಅತ್ಯಧಿಕವಾಗಿ ಬಳಸುವ ಸ್ಥಿತಿ ನಿರ್ಮಾಣವಾಗಿದೆ. ಇದನ್ನು ಯಾರೂ ಸಹ ಸಹಿಸುವುದಿಲ್ಲ. ಜನಪ್ರತಿನಿಧಿಗಳು ಸಾಮಾನ್ಯ ಜನರೊಂದಿಗೆ ಬೆರೆತಾಗ ಮಾತ್ರವೇ ಅವರ ಕಷ್ಟ ಸುಖಗಳನ್ನು ಅರಿತು, ಅವರುಗಳನ್ನು ಪ್ರತಿನಿಧಿಸಿ ಮಾತನಾಡಲು ಮತ್ತು ಸಮಾಜಮುಖಿ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾರ್ಗದರ್ಶನವನ್ನು ನೀಡಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸನ ಸಭೆಗಳು ದೇವಸ್ಥಾನವಿದ್ದಂತೆ. ಶಾಸನ ಸಭೆಗಳಲ್ಲಿ ಶಾಸಕರುಗಳು ತಮ್ಮನ್ನು ತಾವು ಚೆನ್ನಾಗಿ ತೊಡಗಿಸಿಕೊಳ್ಳಬೇಕು; ಕಾರ್ಯಕಲಾಪಗಳು ಪೂರ್ಣಗೊಳ್ಳುವವರೆಗೆ ಸದನದಲ್ಲಿ ಆಸೀನರಾಗಿರಬೇಕು. ನಮ್ಮನ್ನು ನಾವು ಗೌರವಿಸಿಕೊಂಡರೆ ಮಾತ್ರವೇ ನಾವು ಇನ್ನೊಬ್ಬರನ್ನು ಗೌರವಿಸುವುದಕ್ಕೆ ಸಾಧ್ಯವಾಗುತ್ತದೆ. ಯಾವುದೇ ಕಾರಣಕ್ಕೂ ಸದನದೊಳಗೆ ಮತ್ತು ಸದನದ ಹೊರಗೆ ಗೌರವ, ಸಭ್ಯತೆಗಳನ್ನು ಮೀರಿ ಮಾತನಾಡಬಾರದು ಹಾಗೂ

ವರ್ತಿಸಬಾರದು ಇಂತಹ ಪರಿಪಾಠಗಳನ್ನು ಶಾಸಕರು ಅಳವಡಿಸಿಕೊಂಡಲ್ಲಿ ಅವರುಗಳು ಖಂಡಿತವಾಗಿಯೂ ಸಹ ಉನ್ನತ ಸ್ಥಾನಕ್ಕೆ ಏರುತ್ತಾರೆ ಎನ್ನುವ ಹಿತವಚನವನ್ನು ನೀಡಿದರು.

**ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ಸಣ್ಣ ನೀರಾವರಿ ಸಚಿವರು** ನಾಯಕತ್ವದ ಬಗ್ಗೆ ಮಾತನಾಡುತ್ತಾ, ನಾಯಕತ್ವ ಟೊಳ್ಳಾದರೆ, ಇಡೀ ವ್ಯವಸ್ಥೆಯೇ ಟೊಳ್ಳಾಗುತ್ತದೆ. ರಾಜಕೀಯ ವ್ಯವಸ್ಥೆಯನ್ನು ಟೀಕೆ ಮಾಡುವುದು ಸುಲಭ. ಇದರ ಬಗ್ಗೆ ಜನರು ವಿಶ್ವಾಸ, ನಂಬಿಕೆಗಳನ್ನು ಕಳೆದುಕೊಂಡರೆ, ಮುಂದೊಂದು ದಿನ ರಾಜಕೀಯದ ನಾಯಕತ್ವವನ್ನು ವಹಿಸಿಕೊಳ್ಳುವವರು ಯಾರು ಎನ್ನುವ ಪ್ರಶ್ನೆಯು ಉದ್ಭವಿಸುತ್ತದೆ. ಒಬ್ಬ ನಾಯಕನಾದವನಿಗೆ ನಿಖರತೆ, ಸ್ಪಷ್ಟತೆ, ದೃಢತೆ ಮತ್ತು ತೀರ್ಮಾನ ತೆಗೆದುಕೊಳ್ಳುವ ಶಕ್ತಿ ಇರಬೇಕು, ತೀರ್ಮಾನ ತೆಗೆದುಕೊಳ್ಳುವ ಮೊದಲು ಆ ಕುರಿತು ಯೋಚನೆ ಮಾಡುವ ಶಕ್ತಿಯೂ ಇರಬೇಕಾಗುತ್ತದೆ. ಸಮರ್ಪಕವಾಗಿ, ನಿಖರವಾಗಿ ಮತ್ತು ದಿಟ್ಟವಾಗಿ ತೀರ್ಮಾನ ತೆಗೆದುಕೊಳ್ಳುವ ಗುಣಗಳು ನಿರ್ದಿಷ್ಟ ವಿಷಯವನ್ನು ಕಾರ್ಯಗತ ಮಾಡಲು ಸಹಾಯವಾಗುತ್ತವೆ. ***Justice delayed is justice denied*** ಎಂಬ ಮಾತಿದೆ. ಒಂದು ಸಲ ತೀರ್ಮಾನ ತೆಗೆದುಕೊಂಡ ಮೇಲೆ ದೃಢತೆಯಿಂದ ಇರಬೇಕಾಗುತ್ತದೆ. ಯಾರು ಅಶಕ್ತರಾಗಿರುತ್ತಾರೋ, ಯಾರು ಕಷ್ಟದಲ್ಲಿರುತ್ತಾರೋ ಮತ್ತು ಯಾರು ದಲಿತರಾಗಿರುತ್ತಾರೋ ಅವರಿಗೆ ಆದ್ಯತೆ ನೀಡಬೇಕಾಗುತ್ತದೆ ಎನ್ನುವ ಸಲಹೆ ನೀಡಿದರು.

**ಮಾನ್ಯ ಸಚಿವರು** ಮುಂದುವರೆದು ಮಾತನಾಡುತ್ತಾ, ಕಾಲಕ್ಕೆ ಹೆಚ್ಚಿನ ಮಹತ್ವ ಕೊಡಬೇಕಾಗುತ್ತದೆ. ಮುಖ್ಯವಾಗಿ ಕಾಲವನ್ನು ಸದ್ವಿನಿಯೋಗ ಮಾಡಿಕೊಳ್ಳಬೇಕು. ವಿಧಾನ ಪರಿಷತ್ತು ಹಿರಿಯರ ಮನೆಯಾಗಿದೆ. ಶಾಸನಗಳ ಬಗ್ಗೆ ಹೆಚ್ಚು ಪರಿಣಾಮಕಾರಿಯಾಗಿ ಅಭಿಪ್ರಾಯಗಳನ್ನು ನೀಡಲು, ಸರಿ–ತಪ್ಪುಗಳನ್ನು ವಿಂಗಡಿಸಿ ಸರ್ಕಾರಕ್ಕೆ ಉತ್ತಮ ಮಾರ್ಗವನ್ನು ತೋರಿಸಿ; ಸಮಸ್ಯೆಗಳ ಬಗ್ಗೆ ಹೆಚ್ಚು ಬೆಳಕು ಚೆಲ್ಲುವ ಕಾರ್ಯವನ್ನು ಮೇಲ್ಮನೆ ನಿರ್ವಹಿಸುತ್ತದೆ. ಒತ್ತಡದಲ್ಲಿ ಸಿಕ್ಕಿ ಶಾಸನಗಳನ್ನು ತರಾತುರಿಯಲ್ಲಿ ಅಂಗೀಕರಿಸುವುದಕ್ಕೆ ಬದಲಾಗಿ, ಶಾಸನಗಳ ಮೇಲೆ ಹೆಚ್ಚು ಒತ್ತು ನೀಡಿದರೆ ಒಳ್ಳೆಯದಾಗುತ್ತದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಸದಸ್ಯರುಗಳು ಸದನದಲ್ಲಿ ಯಾವುದೇ ವಿಚಾರವನ್ನು ಪ್ರಸ್ತಾಪ ಮಾಡಬೇಕಾದರೂ ನಿಖರವಾಗಿ, ಸ್ಪಷ್ಟವಾಗಿ ಮತ್ತು ಮಾಹಿತಿಗಳನ್ನು ಇಟ್ಟುಕೊಂಡು ಪ್ರಸ್ತಾಪ ಮಾಡಬೇಕಾಗುತ್ತದೆ. ಇಲ್ಲಿ ಯಾರನ್ನೂ,

ಯಾವುದನ್ನೂ ಸಹ ಉತ್ಪ್ರೇಕ್ಷೆ ಮಾಡುವ ಪ್ರಶ್ನೆ ಬರುವುದಿಲ್ಲ. ಶಾಸನ ಸಭೆಯಲ್ಲಿ ಎಲ್ಲಾ ಶಾಸಕರು ಒಂದೇ ಆಗಿರುತ್ತಾರೆ. ಜನರಿಗೋಸ್ಕರ ನಮ್ಮ ಕರ್ತವ್ಯವನ್ನು ಪೂರ್ಣ ರೀತಿಯಲ್ಲಿ ನಿರ್ವಹಿಸಬೇಕು. ಇಡೀ ರಾಜ್ಯದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಹೊಸದಾಗಿ ಆಯ್ಕೆಯಾಗಿರುವ ಶಾಸಕರು ವಿಧಾನ ಪರಿಷತ್ತಿನಲ್ಲಿ ಉತ್ತಮ ಕೆಲಸ ಮಾಡುವ ಸ್ಥಿತಿ ನಿರ್ಮಾಣವಾಗಲಿ. ಸದನದ ಸಮಯವನ್ನು ಸದುಪಯೋಗ ಮಾಡಿಕೊಂಡು, ಉತ್ತಮ ಚರ್ಚೆಗಳ ಮೂಲಕ ನಾಡಿನ ಜನರ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ನಾವೆಲ್ಲರೂ ಸೇರಿ ಸುಂದರ ನಾಡನ್ನು ಕಟ್ಟೋಣ ಎಂದು ಹೇಳುತ್ತಾ, ಅವರಿಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ಅವರ ಮಾತುಗಳನ್ನು ಮುಕ್ತಾಯಗೊಳಿಸಿದರು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ,** ಮಾನ್ಯ ಸಭಾಪತಿಯವರು ಉದ್ಘಾಟನಾ ಭಾಷಣದ ಮೂಲಕ ನೂತನ ಶಾಸಕರಿಗೆ ಹಿತವಚನವನ್ನು ನೀಡಿದಂತಹ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ ಧನ್ಯವಾದಗಳನ್ನು ಅರ್ಪಿಸುತ್ತಾ, ಇಂದು ಮತ್ತು ನಾಳೆ ಮಾಜಿ ಸಭಾಧ್ಯಕ್ಷರಾಗಿ ಅಪಾರ ಅನುಭವ ಹೊಂದಿರುವ ಶ್ರೀ ಕೆ.ಆರ್.ರಮೇಶ್‌ಕುಮಾರ್‌ರವರು, ಸಭಾಧ್ಯಕ್ಷರಾಗಿರುವ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು, ಮಾಜಿ ಸಭಾಪತಿಗಳಾದ ಶ್ರೀ ಡಿ.ಹೆಚ್.ಶಂಕರಮೂರ್ತಿಯವರು, ಮಾಜಿ ಸದಸ್ಯರಾದ ಶ್ರೀ ಗೋ.ಮಧುಸೂದನ್‌ರವರು ಹಾಗೂ ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರಂತಹ ಗಣ್ಯಾತಿಗಣ್ಯರು ಸದರಿ ಕಾರ್ಯಾಗಾರವನ್ನುದ್ದೇಶಿ ತಮ್ಮ ಅಮೂಲ್ಯವಾದ ವಿಚಾರಧಾರೆಗಳನ್ನು ಮಂಡಿಸುವ ಹಿನ್ನೆಲೆಯಲ್ಲಿ ಎಲ್ಲ ಮಾನ್ಯ ಸದಸ್ಯರುಗಳು ಸದರಿ ಕಾರ್ಯಾಗಾರದ ಸದುಪಯೋಗವನ್ನು ಪಡೆದುಕೊಂಡು ಮುಂದೆ ನಡೆಯುವಂತಹ ಅಧಿವೇಶನದಲ್ಲಿ ಪರಿಣಾಮಕಾರಿಯಾಗಿ ಪಾಲ್ಗೊಳ್ಳಬೇಕೆಂದು ಹೇಳಿದರು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಉದ್ಘಾಟನಾ ಭಾಷಣವನ್ನು ಮಾಡಿದಂತಹ ಮಾನ್ಯ ಜೆ.ಸಿ.ಮಾಧುಸ್ವಾಮಿಯವರಿಗೆ ನೆನಪಿನ ಕಾಣಿಕೆ ನೀಡುವ ಮೂಲಕ ಗೌರವಿಸಿದರು ಮತ್ತು ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರನ್ನು ಕಾರ್ಯಾಗಾರವನ್ನುದ್ದೇಶಿಸಿ ಮಾತನಾಡಲು ಸ್ವಾಗತಿಸಿದರು)**

**ವಿಷಯ: ವಿಧೇಯಕಗಳು, ವಿತ್ತೀಯ ಕಾರ್ಯಕಲಾಪಗಳು**

**ಶ್ರೀ ಸಿದ್ಧರಾಮಯ್ಯ, ವಿರೋಧ ಪಕ್ಷದ ನಾಯಕರು ಹಾಗೂ ಮಾಜಿ ಮುಖ್ಯಮಂತ್ರಿಗಳು** ಇವರು ವಿಧೇಯಕಗಳು, ವಿತ್ತೀಯ ಕಾರ್ಯಕಲಾಪಗಳ ಬಗ್ಗೆ ಮಾತನಾಡುತ್ತಾ, ಆಯವ್ಯಯ ಎಂದರೆ, it is an annual financial statement of receipts and expenditure ಎನ್ನುವ ಅರ್ಥ ವಿವರಣೆಯನ್ನು ನೀಡಿದರು. Article 202 to Article 207 of INDIAN CONSTITUTION ನಲ್ಲಿ ಆಯವ್ಯಯವನ್ನು ಹೇಗೆ ನಿರ್ವಹಿಸಬೇಕು, ಹೇಗೆ ಅದನ್ನು ಪಾಸ್ ಮಾಡಿಕೊಳ್ಳಬೇಕು ಎನ್ನುವುದರ ಬಗ್ಗೆ ಪ್ರಸ್ತಾಪವಿದೆ. ಆಯವ್ಯಯವನ್ನು ಹಣಕಾಸು ಸಚಿವರೇ ಮಂಡಿಸಬೇಕೆಂದೇನಿಲ್ಲ. ಯಾರು ಬೇಕಾದರೂ ಮಂಡಿಸಬಹುದು. ಆದರೆ ವಿತ್ತ ಸಚಿವರಾಗಿರುವವರೇ ಆಯವ್ಯಯದ ಮೇಲಿನ ಚರ್ಚೆಗೆ ಉತ್ತರವನ್ನು ನೀಡಬೇಕೆಂದು ಹೇಳಿದರು.

ನಮ್ಮ ರಾಜ್ಯದಲ್ಲಿ 12ನೇ ಶತಮಾನದಲ್ಲಿಯೇ ಕಾಯಕ ಮತ್ತು ದಾಸೋಹ ಎನ್ನುವ ಅಂಶಗಳ ಮೂಲಕ ಆಯವ್ಯಯದ ಪರಿಕಲ್ಪನೆ ಮೂಡಿತ್ತು. ಅದನ್ನೇ ಈಗ Production and distribution ಎಂದು ಕರೆಯಲಾಗುತ್ತಿದೆ. ವೆಚ್ಚಕ್ಕಿಂತ ಆದಾಯದ ಪ್ರಮಾಣ ಹೆಚ್ಚಾದರೆ ಅದನ್ನು ಉಳಿತಾಯದ ಆಯವ್ಯಯ; ಆದಾಯಕ್ಕಿಂತ ವೆಚ್ಚದ ಪ್ರಮಾಣ ಹೆಚ್ಚಾಗಿದ್ದರೆ ಕೊರತೆಯ ಆಯವ್ಯಯ ಎಂದು ಕರೆಯಲಾಗುತ್ತದೆ. ಅನಗತ್ಯ ಖರ್ಚುಗಳನ್ನು ತಡೆಗಟ್ಟಿ Committed Expenditure ಕಡಿಮೆ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಸಾಲ ಜಾಸ್ತಿಯಾಗುತ್ತದೆ. ಹೀಗಾಗಿ ಆರ್ಥಿಕತೆ ಕುಂಠಿತವಾಗುತ್ತದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಮುಂದುವರೆದು ತೆರಿಗೆಗಳ ಬಗ್ಗೆ ಮಾತನಾಡುತ್ತಾ, ರಾಜ್ಯ ಮತ್ತು ರಾಷ್ಟ್ರಗಳು ವಿಧಿಸುವ ತೆರಿಗೆಗಳು ಜೇನುನೊಣ ಹೂವಿನಲ್ಲಿ ಮಕರಂದವನ್ನು ಹೀರಿದಂತಿರಬೇಕೆನ್ನುವ ನಿದರ್ಶನವನ್ನು ನೀಡುತ್ತಾ, ಯಾರಿಗೆ ಆದಾಯವಿದೆಯೋ ಮತ್ತು ಯಾರಿಗೆ ತೆರಿಗೆ ಕೊಡುವುದಕ್ಕೆ ಶಕ್ತಿ ಇದೆಯೋ ಅವರ ಮೇಲೆ ತೆರಿಗೆ ವಿಧಿಸಬೇಕು. ಯಾರಿಗೆ ಆದಾಯವಿಲ್ಲವೋ ಅವರ ಮೇಲೆ ತೆರಿಗೆ ವಿಧಿಸಬಾರದು ಎನ್ನುವುದು ಸಾಮಾನ್ಯ ಜ್ಞಾನ ಮತ್ತು ತಿಳುವಳಿಕೆಯಾಗಿದೆ. ಅದು basic principle of the Budget ಎನ್ನುವ ಮಾತನ್ನು ಸಹ ಹೇಳಿದರು.

ಶ್ರೀ ರಾಜಚೆಲ್ಲಯ್ಯ ಎನ್ನುವ ಆರ್ಥಿಕ ತಜ್ಞರು fiscal deficit should be less than 3% of GDP; there should be revenue surplus and liability should be within 25% of GDP. ಎನ್ನುವ ಮೂರು ಮಾನದಂಡಗಳನ್ನು ಉಲ್ಲೇಖ ಮಾಡಿದ್ದಾರೆ. ಕೋವಿಡ್ ಬಂದ ನಂತರ ಕೇಂದ್ರ ಸರ್ಕಾರದವರು ಶೇ.3 ಇದ್ದುದನ್ನು ಶೇ.5 ಮಾಡಲಿಕ್ಕೆ ಅನುಮತಿಯನ್ನು ಕೊಟ್ಟಿದ್ದಾರೆ ಎನ್ನುವ ಮಾಹಿತಿಯನ್ನು ನೀಡಿದರು.

**ಮಾನ್ಯ ಸಿದ್ಧರಾಮಯ್ಯನವರು** ಮುಂದುವರೆದು ಮಾತನಾಡುತ್ತಾ, ವಿಧೇಯಕಗಳಲ್ಲಿ ಹಣಕಾಸಿನ ವಿಧೇಯಕ, ಸಾಮಾನ್ಯ ವಿಧೇಯಕಗಳು ಮತ್ತು ಖಾಸಗಿ ಸದಸ್ಯರ ವಿಧೇಯಕ ಎಂದು ಮೂರು ರೀತಿಯ ವಿಧೇಯಕಗಳನ್ನು ಕಾಣಬಹುದೆನ್ನುವ ಮಾಹಿತಿಯನ್ನು ನೀಡಿದರು. ಹಣಕಾಸಿನ ವಿಧೇಯಕವನ್ನು ಸರ್ಕಾರ ಮಂಡಿಸಿದ ಮೇಲೆ ಅದು ಎರಡೂ ಮನೆಗಳಲ್ಲಿ ಪಾಸ್ ಆಗಲೇಬೇಕು. ಒಂದು ವೇಳೆ, ಹಣಕಾಸಿನ ವಿಧೇಯಕ ಸದನದಲ್ಲಿ ತಿರಸ್ಕೃತಗೊಂಡರೆ, ಸರ್ಕಾರ ರಾಜಿನಾಮೆ ನೀಡಬೇಕಾಗುವ ಪರಿಸ್ಥಿತಿ ಬರುತ್ತದೆ. ಆಯವ್ಯಯದಲ್ಲಿ ಒಂದು ಸೇವೆಗೆ ಕೊಟ್ಟಿರುವಂತಹ ಹಣ ಸಾಲದೇ ಹೋದರೆ, ಅದನ್ನು ಪೂರ್ಣಗೊಳಿಸುವುದಕ್ಕೆ ಬೇಕಾದಂತಹ ಹಣವನ್ನು ಕೊಡುವುದಕ್ಕೆ As per Article 205(1) of the Constitution, Supplementary Estimates ಅನ್ನು ಮಂಡಿಸುವುದಕ್ಕೆ ಸರ್ಕಾರಕ್ಕೆ ಅವಕಾಶ ಇದೆ ಎನ್ನುವ ವಿವರಣೆಯನ್ನು ನೀಡಿದರು.

ಖಾಸಗಿ ಸದಸ್ಯರ ವಿಧೇಯಕಕ್ಕೆ ವಿಧಾನ ಸಭಾಧ್ಯಕ್ಷರ ಮತ್ತು ವಿಧಾನ ಪರಿಷತ್ತಿನ ಸಭಾಪತಿಯವರ ಅನುಮತಿ ಇರಬೇಕು. ಅದಕ್ಕೆ ಅನುಮತಿ ಇಲ್ಲದೇ ಅದನ್ನು ಮಂಡಿಸುವುದಕ್ಕೆ ಆಗುವುದಿಲ್ಲ. ಖಾಸಗಿ ಸದಸ್ಯರ ವಿಧೇಯಕವನ್ನು ತಂದಿರುವ ಸದಸ್ಯರು ಅದರ ಉದ್ದೇಶವನ್ನು ಮಾನ್ಯ ಸಭಾಧ್ಯಕ್ಷರು ಮತ್ತು ಮಾನ್ಯ ಸಭಾಪತಿಯವರಿಗೆ ತಿಳಿಸಬೇಕು. ಅವರಿಗೆ Private Members' Bill ನ ಪ್ರತಿಯನ್ನು ಸಹ ನೀಡಬೇಕು. ಆಗ ಅವರು ಅನುಮತಿ ಕೊಡುತ್ತಾರೆ. ಅವರು ಅನುಮತಿ ಕೊಟ್ಟ ಮೇಲೆ ಅದನ್ನು ಪ್ರಸ್ತಾಪ ಮಾಡಿ ಅದರ ಮೇಲೆ ಚರ್ಚೆ ಮಾಡಬಹುದು. ನಂತರ ಸದನದಲ್ಲಿ ಎಷ್ಟು ಜನ ಸದಸ್ಯರು ಹಾಜರಿರುತ್ತಾರೆ, ಅವರಲ್ಲಿ ಬಹುಮತ ಬಂದರೆ ಆ ವಿಧೇಯಕ ಅಂಗೀಕಾರಗೊಳ್ಳುತ್ತದೆ, ಇಲ್ಲದಿದ್ದರೆ ತಿರಸ್ಕೃತಗೊಳ್ಳುತ್ತದೆ. ಕೆಲವೊಮ್ಮೆ ಸರ್ಕಾರವೇ ಒಪ್ಪಿಕೊಳ್ಳುತ್ತದೆ.

ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಎಂದು ಮೂರು ಅಂಗಗಳಿವೆ. ಶಾಸಕಾಂಗ ಕಾನೂನು ಮಾಡುತ್ತದೆ. ಕಾರ್ಯಾಂಗ ಅದನ್ನು ಜಾರಿ ಮಾಡುತ್ತದೆ.

ನ್ಯಾಯಾಂಗ ಅದು ಸಂವಿಧಾನ ಬದ್ದವಾಗಿದೆಯೋ ಅಥವಾ ಇಲ್ಲವೋ ಎಂಬುದನ್ನು ನೋಡುತ್ತದೆ. ಈ ಮೂರು ಅಂಗಗಳು ಪರಸ್ಪರ ಪೂರಕವಾಗಿ ಕೆಲಸ ಮಾಡುತ್ತವೆ. ಇತ್ತೀಚಿನ ದಿನಗಳಲ್ಲಿ ನಾಲ್ಕನೆಯ ಅಂಗವಾಗಿ ಪ್ರೆಸ್ ಮೀಡಿಯಾ, ಎಲೆಕ್ಟ್ರಾನಿಕ್ ಮೀಡಿಯಾಗಳು ಕಾರ್ಯನಿರ್ವಹಿಸುತ್ತಿವೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. **"ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳು"** ಹಾಗೂ **"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳು"** ಇವು ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ರಚನೆಯಾಗಿವೆ, ನಮಗೆ ಏನಾದರೂ ಮಾಹಿತಿ ಬೇಕಾದರೆ, M.N.Kaul and S.L.Shakdher ರವರ "Practice and Procedure of Parliament" ಪುಸ್ತಕದ ಮೋರೆ ಹೋಗುತ್ತೇವೆ ಎನ್ನುವ ಮಾತುಗಳನ್ನು ಹೇಳಿದರು.

**ಮಾನ್ಯ ಸಿದ್ಧರಾಮಯ್ಯನವರು** ಮಾತನಾಡುತ್ತಾ, ನೂತನ ಶಾಸಕರು ಕಡ್ಡಾಯವಾಗಿ ಸಂವಿಧಾನ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳು, **Fiscal Responsibility Act, Medium Term Fiscal Plan, Economic Survey ಮತ್ತು ಆಯವ್ಯಯ** ಇವುಗಳನ್ನು ಓದಿಕೊಂಡರೆ, ಅರ್ಥಪೂರ್ಣವಾಗಿ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದಕ್ಕೆ ಮತ್ತು ಸಮಾಜಕ್ಕೆ ನಿಜವಾದ ಕೊಡುಗೆಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಸಲಹೆಗಳನ್ನು ನೀಡುತ್ತಾ, ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿದರು.

**(ವಿಧೇಯಕಗಳು, ವಿತ್ತೀಯ ಕಾರ್ಯಕಲಾಪಗಳಿಗೆ ಸಂಬಂಧಪಟ್ಟ ಉಪನ್ಯಾಸವು ಮಧ್ಯಾಹ್ನ 12 ಗಂಟೆ 25 ನಿಮಿಷಕ್ಕೆ ಮುಕ್ತಾಯಗೊಂಡಿತು. ಚಹಾ ವಿರಾಮದ ನಂತರ ಮಧ್ಯಾಹ್ನ 1-00 ಗಂಟೆಗೆ ತರಬೇತಿ ಕಾರ್ಯಾಗಾರವು ಮತ್ತೆ ಸಮಾವೇಶಗೊಂಡಿತು.)**

**ವಿಷಯ: ರಾಜ್ಯದ  ಅಭಿವೃದ್ಧಿಯ ಪಾಲುದಾರನಾಗಿ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಪಾತ್ರ**

**ಶ್ರೀ ಸಿದ್ಧರಾಮಯ್ಯ, ವಿರೋಧ ಪಕ್ಷದ ನಾಯಕರು ಹಾಗೂ ಮಾಜಿ ಮುಖ್ಯಮಂತ್ರಿಗಳು** ಇವರು ರಾಜ್ಯದ ಅಭಿವೃದ್ಧಿಯ ಪಾಲುದಾರನಾಗಿ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಪಾತ್ರ ಎನ್ನುವ ವಿಚಾರದ ಬಗ್ಗೆ ಮಾತನಾಡುತ್ತಾ, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯು ರಾಜ್ಯದ ಲೆಕ್ಕ ಪರಿಶೀಲನಾ ಸಮಿತಿಯಾಗಿರುತ್ತದೆ. ಸದರಿ ಸಮಿತಿಯು ಪ್ರಮುಖವಾದಂತಹ ಆರ್ಥಿಕ ಸಮಿತಿಯಾಗಿರುತ್ತದೆ. ಯಾವಾಗಲೂ ಕೂಡ ಕಾರ್ಯಾಂಗ ಶಾಸಕಾಂಗಕ್ಕೆ ಉತ್ತರದಾಯಿತ್ವವಾಗಿರಬೇಕು. ಸರ್ಕಾರ ಖರ್ಚು ಮಾಡುವಂತಹ ಹಣಕ್ಕೆ ಶಾಸಕಾಂಗ ಜವಾಬ್ದಾರಿಯಾಗಿರುತ್ತದೆ. ಇದನ್ನು ನೋಡಿಕೊಳ್ಳುವುದಕ್ಕೆ ಒಂದು ವ್ಯವಸ್ಥೆ ಇರುತ್ತದೆ ಅದಕ್ಕೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ಎಂದು ಕರೆಯುತ್ತಾರೆ. ಸದರಿಯವರು ಕರ್ನಾಟಕ ರಾಜ್ಯದಲ್ಲಿರತಕ್ಕಂತಹ ಬಜೆಟ್ ಅನ್ನು ಅವಲೋಕನೆ ಮಾಡಿ, ಪರಿಶೀಲನೆ ಮಾಡಿ ನಾವು ಕೊಟ್ಟಿದ್ದಂತಹ ಹಣ ಸದುಪಯೋಗ ಆಗಿದೆಯೋ ಇಲ್ಲವೋ, ದುರುಪಯೋಗ ಆಗಿದೆಯೋ ಇಲ್ಲವೋ, ಯಾವ ಉದ್ದೇಶಕ್ಕೆ ಹಣ ಕೊಟ್ಟಿದ್ದೇವೆ, ಆ ಉದ್ದೇಶಕ್ಕೆ ಖರ್ಚಾಗಿದೆಯೇ ಇಲ್ಲವೇ, ಬೇರೆ ಉದ್ದೇಶಕ್ಕೆ ಖರ್ಚಾಗಿದೆಯೇ ಇಲ್ಲವೇ ಎಂಬುದನ್ನು ನೋಡಿ ಒಂದು ವರದಿಯನ್ನು ನೀಡುತ್ತಾರೆ. ಅದನ್ನು ರಾಜ್ಯಪಾಲರ ಮೂಲಕ ಎರಡು ಸದನಗಳ ಮುಂದೆ ಮಂಡಿಸುತ್ತಾರೆ. ಅದನ್ನು Public Accounts Committee ಯವರು ಪರಿಶೀಲನೆ ಮಾಡುತ್ತಾರೆ. ಅವರು ವ್ಯಕ್ತಪಡಿಸುವಂತಹ ಆಕ್ಷೇಪಣೆಗಳನ್ನು CAG Objections ಎಂದು ಕರೆಯುತ್ತೇವೆ. ಸರ್ಕಾರ ಅದಕ್ಕೆ ಉತ್ತರ ಕೊಡಬೇಕಾಗುತ್ತದೆ. quasi-judicial body ಗೆ ಇರುವಂತಹ ಅಧಿಕಾರ ಸಿ.ಎ.ಜಿ.ಗೆ ಇರುತ್ತದೆ. ಸಿ.ಎ.ಜಿ.ಯು. summon ಕೊಟ್ಟು ಯಾರನ್ನು ಬೇಕಾದರೂ ಕರೆಸಬಹುದು ಎನ್ನುವ ವಿವರಣೆಯನ್ನು ನೀಡಿದರು.

Political Freedom ಇದ್ದರೆ ಸಾಲದು. Socio economic Freedom ಕೂಡ ಇರಬೇಕು. ಇದು ವಿಶೇಷವಾಗಿ ಕೆಳ ವರ್ಗದ ಜನರಿಗೆ ಸಿಗಬೇಕೆನ್ನುವುದು ಸಂವಿಧಾನದ ಆಶಯ. ನಮ್ಮ

ಬಜೆಟ್ ಕೂಡ ಆ ದಿಕ್ಕಿನಲ್ಲಿ ಸಾಗುತ್ತಿದೆಯೇ ಇಲ್ಲವೇ ಎಂಬುದನ್ನು ನೋಡಿಕೊಳ್ಳುವಂತಹ ಅಧಿಕಾರ ಲೆಕ್ಕಪತ್ರಗಳ ಸಮಿತಿಗಿದೆ. ಈ ಸಮಿತಿ ಬಹಳ ಪ್ರಮುಖವಾದಂತಹ ಸಮಿತಿಯಾಗಿದೆ. ಇಪ್ಪತ್ತು ಜನ ಸದಸ್ಯರು ಇರುತ್ತಾರೆ. ಅದರಲ್ಲಿ ಒಬ್ಬ ಅಧ್ಯಕ್ಷರು ಇರುತ್ತಾರೆ. ಅದರಲ್ಲಿ ಹದಿನೈದು ಜನ ಸದಸ್ಯರು ಕೆಳಮನೆಯಿಂದ ಬಂದಿರುತ್ತಾರೆ. ಐದು ಜನ ಸದಸ್ಯರು ಮೇಲ್ಮನೆಯಿಂದಲೂ ಬಂದಿರುತ್ತಾರೆ. ಎಲ್ಲಾ ಪಕ್ಷಗಳ ಸದಸ್ಯರು ಈ ಸಮಿತಿಯಲ್ಲಿರುತ್ತಾರೆ. ಸರ್ಕಾರ ಖರ್ಚು ಮಾಡುವಂತಹ ಹಣ ದುರುಪಯೋಗವಾಗಿದೆಯೇ-ಸದುಪಯೋಗವಾಗಿದೆಯೇ, ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ಹಣ ಖರ್ಚಾಗಿದೆಯೇ-ಇಲ್ಲವೇ ಎನ್ನುವುದನ್ನೆಲ್ಲ ಪ್ರಮುಖವಾಗಿ ನೋಡಿಕೊಳ್ಳುವಂತಹ ಸಮಿತಿಯೇ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯಾಗಿದೆ. ಇಷ್ಟೊಂದು ಮಹತ್ವವುಳ್ಳ ಸಮಿತಿಗಳಿಗೆ ಮತ್ತು ಅಧಿವೇಶನಕ್ಕೆ ಯಾವ ಸದಸ್ಯರೂ ಗೈರು ಹಾಜರಾಗಬಾರದೆನ್ನುವ ಕಿವಿ ಮಾತನ್ನು ಹೇಳುತ್ತಾ, ಮಾನ್ಯ ಸಿದ್ಧರಾಮಯ್ಯನವರು ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿದರು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ಧರಾಮಯ್ಯನವರಿಗೆ ನೆನಪಿನ ಕಾಣಿಕೆ ನೀಡುವ ಮೂಲಕ ಗೌರವಿಸಿದರು.)**

**(ಈ ಹಂತದಲ್ಲಿ ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 1.30 ಗಂಟೆಗೆ ಮುಂದೂಡಲ್ಪಟ್ಟ ಸಭೆಯು ಮಧ್ಯಾಹ್ನ 2 ಗಂಟೆ 35 ನಿಮಿಷಗಳಿಗೆ ಪುನಃ ಸಮಾವೇಶಗೊಂಡಿತು)**

**ವಿಷಯ: ವಿಧಾನ ಮಂಡಲದ ಸ್ಥಾಯಿ ಸಮಿತಿಗಳು, ಸದನ ಸಮಿತಿಗಳು ಹಾಗೂ ಅವುಗಳ ಕಾರ್ಯನಿರ್ವಹಣೆ**

**ಶ್ರೀ ಕೆ.ಆರ್.ರಮೇಶ್ ಕುಮಾರ್, ಮಾನ್ಯ ಶಾಸಕರು, ಕರ್ನಾಟಕ ವಿಧಾನ ಸಭೆ ಹಾಗೂ ಮಾಜಿ ಸಭಾಧ್ಯಕ್ಷರು** ಇವರು ವಿಧಾನ ಮಂಡಲದ ಸ್ಥಾಯಿ ಸಮಿತಿಗಳು, ಸದನ ಸಮಿತಿಗಳು ಹಾಗೂ ಅವುಗಳ ಕಾರ್ಯನಿರ್ವಹಣೆ ಈ ವಿಚಾರದ ಬಗ್ಗೆ ಮಾತನಾಡುತ್ತಾ, ಸಾಮಾನ್ಯವಾಗಿ ವಿಧಾನ ಮಂಡಲದಲ್ಲಿ ಸ್ಥಾಯಿ ಸಮಿತಿಗಳಿರುತ್ತವೆ ಹಾಗೂ ಕೆಲವೊಂದು ಬಾರಿ ಸದನ ಸಮಿತಿಗಳನ್ನು ಮತ್ತು ಜಂಟಿ ಪರಿಶೀಲನಾ ಸಮಿತಿಗಳನ್ನು ರಚನೆ ಮಾಡಲಾಗುತ್ತದೆ. ಸಭಾಧ್ಯಕ್ಷರು ಮತ್ತು ಸಭಾಪತಿಗಳು ಇಬ್ಬರೂ ಕೂಡಿಕೊಂಡು ಎರಡೂ ಸದನಗಳ ಸದಸ್ಯರನ್ನೊಳಗೊಂಡ ಹಲವು ಸಮಿತಿಗಳನ್ನು ರಚಿಸುತ್ತಾರೆ. ಆ ಪೈಕಿ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯು ಬಹಳ ಪ್ರಮುಖವಾದುದು. ಸಾಮಾನ್ಯ ವೆಚ್ಚಗಳನ್ನೊಳಗೊಂಡಂತೆ ಎಲ್ಲಾ ರೀತಿಯ ಆರ್ಥಿಕ ವಹಿವಾಟುಗಳು ಈ ಸಮಿತಿಯ ವ್ಯಾಪ್ತಿಗೊಳಪಡುತ್ತವೆ. ಇದಲ್ಲದೇ, ಅಂದಾಜುಗಳ ಸಮಿತಿ, ಸಾರ್ವಜನಿಕ ಉದ್ಯಮಗಳ ಸಮಿತಿ, ಸರ್ಕಾರಿ ಭರವಸೆಗಳ ಸಮಿತಿ, ಅರ್ಜಿಗಳ ಸಮಿತಿ, ವಸತಿ ಸಮಿತಿ ಹಾಗೂ ಹಕ್ಕುಬಾಧ್ಯತಾ ಸಮಿತಿಗಳು ಖಾಯಂ ಸಮಿತಿಗಳಾಗಿವೆ. ಆಯಾ ರಾಜ್ಯಗಳಲ್ಲಿ ಅವರವರ ಅಗತ್ಯತೆಗಳಿಗನುಗುಣವಾಗಿ ಕೆಲವು ಹೊಸ ಸಮಿತಿಗಳನ್ನು ರಚಿಸಲಾಗುತ್ತದೆ. ನಮ್ಮ ರಾಜ್ಯದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ, ಅನುಸೂಚಿತ ಜಾತಿ ಮತ್ತು ಪಂಗಡಗಳ ಕಲ್ಯಾಣ ಸಮಿತಿ, ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಮಿತಿ ಇತ್ಯಾದಿ ಸಮಿತಿಗಳಿವೆ. ಇವು ಸಂವಿಧಾನದಡಿಯಲ್ಲಿ ರಚನೆಗೊಂಡು, ಸದನಗಳು ಜೀವಂತವಾಗಿರುವವರೆಗೂ ಇರುತ್ತವೆ ಎನ್ನುವ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಟ್ಟರು.

ಸರ್ಕಾರಿ ಭರವಸೆಗಳ ಸಮಿತಿ, ಅರ್ಜಿಗಳ ಸಮಿತಿ, ಹಕ್ಕುಬಾಧ್ಯತಾ ಸಮಿತಿ, ವಸತಿ ಸಮಿತಿ ಹಾಗೂ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗಳು ಬಹಳ ಪ್ರಮುಖವಾಗಿರುವ ಸಮಿತಿಗಳಾಗಿವೆ. ಮಾನ್ಯ ಮಂತ್ರಿಗಳು ಸದನದಲ್ಲಿ ಏನು ಭರವಸೆಯನ್ನು ಕೊಡುತ್ತಾರೆ ಅದು ಅಲ್ಲಿಂದ ಹಾಗೆಯೇ ರೆಕಾರ್ಡ್ ಆಗುತ್ತದೆ. Periodical ಆಗಿ ಭರವಸೆಗಳ ಸಮಿತಿಯಲ್ಲಿ ಯಾವ ವರ್ಷದಲ್ಲಿ, ಯಾವ ಮಂತ್ರಿ, ಯಾವ ಆಶ್ವಾಸನೆಯನ್ನು ಕೊಟ್ಟಿದ್ದಾರೆ ಅದು ಪೂರ್ಣಗೊಂಡಿದೆಯೇ, ಇಲ್ಲವೇ ಎಂದು ಸಂಬಂಧಪಟ್ಟ ಇಲಾಖೆಯವರನ್ನು ಕರೆದು ತನಿಖೆ ಮಾಡುವುದೇ ಭರವಸೆಗಳ ಸಮಿತಿಯ ಕಾರ್ಯ.

ವಸತಿ ಸಮಿತಿಯಲ್ಲಿ ಶಾಸಕರ ಭವನದಲ್ಲಿ ಶಾಸಕರುಗಳ ವಸತಿ ವ್ಯವಸ್ಥೆಯ ಬಗ್ಗೆ ಮತ್ತು ಶಾಸಕರ ಭವನದಲ್ಲಿರುವ ಕುಂದುಕೊರತೆಗಳ ಬಗ್ಗೆ ಚರ್ಚೆ ನಡೆಸಲಾಗುತ್ತದೆ.

ಅರ್ಜಿಗಳ ಸಮಿತಿಯಲ್ಲಿ ಸಾರ್ವಜನಿಕರಿಂದ ಮತ್ತು ಶಾಸಕರಿಂದಲೂ ದೂರುಗಳು ಬರುತ್ತವೆ. ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕ ಸ್ವರೂಪದ ವಿಚಾರಗಳನ್ನು ಬಿಟ್ಟು ವೈಯಕ್ತಿಕ ವಿಚಾರಗಳ ಬಗ್ಗೆ ಅರ್ಜಿಗಳು ಬರುತ್ತಿವೆ. ಇದರ ಬಗ್ಗೆ ಗಮನಹರಿಸಬೇಕೆನ್ನುವ ಮಾತುಗಳನ್ನು ಹೇಳಿದರು.

ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿ ಯಾವುದೋ ಒಂದು ಯೋಜನೆಯನ್ನು ಯಾವ ವರ್ಷದಲ್ಲಿ ತೆಗೆದುಕೊಳ್ಳಲಾಗಿದೆ. ಎಷ್ಟು ಹಣವನ್ನು ಅದಕ್ಕಾಗಿ ಮೀಸಲಾಗಿಡಲಾಗಿದೆ, ಇಲ್ಲಿಯವರೆಗೆ ಎಷ್ಟು ಕೆಲಸವಾಗಿದೆ, ಎಷ್ಟು ಕೆಲಸ ಬಾಕಿ ಇದೆ. ಆ ಪ್ರಮಾಣದ ಕೆಲಸ ಬಾಕಿ ಉಳಿಯಲು ಕಾರಣಗಳೇನು ಎನ್ನುವ ಬಗ್ಗೆ ಚರ್ಚೆ ನಡೆಸಲಾಗುತ್ತದೆಂದು ಹೇಳಿದರು. 1972ನೇ ಇಸವಿಯಿಂದ 78ನೇ ಇಸವಿಯವರೆಗೆ ಸನ್ಮಾನ್ಯ ಹೆಚ್.ಡಿ.ದೇವೇಗೌಡರು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಅಧ್ಯಕ್ಷರಾಗಿದ್ದಾಗ, ಗೊಬ್ಬರ ಸಾಗಿಸುವ ವಿಚಾರದಲ್ಲಿ ಕೆಲವು ತಪ್ಪುಗಳು ಆಗಿವೆ ಎನ್ನುವ ಹಿನ್ನೆಲೆಯಲ್ಲಿ ಅದನ್ನು ಪರಿಶೀಲನೆ ಮಾಡುವುದಕ್ಕೆ ಆ ಸಮಿತಿಗೆ ವಹಿಸಿಕೊಡಲಾಗಿತ್ತು. ಆಗ ರೆಕಾರ್ಡ್ ಅನ್ನು ಪರಿಶೀಲನೆ ಮಾಡಿ ಆ ವಾಹನದ ನಂಬರ್ ತೆಗೆದುಕೊಂಡು ಆರ್.ಟಿ.ಓ.ದಲ್ಲಿ ಪರಿಶೀಲನೆ ನಡೆಸಿದಾಗ, ಸುವೇಗ ದ್ವಿಚಕ್ರ ವಾಹನದ ಮೇಲೆ ನೂರು ಮೂಟೆ ಯೂರಿಯಾವನ್ನು ಸಾಗಿಸಿದ ಪ್ರಕರಣ ಬೆಳಕಿಗೆ ಬಂದಿತ್ತು. ಅಂದರೆ ಯಾವ ಮಟ್ಟಕ್ಕೆ ಮ್ಯಾನಿಪ್ಯುಲೇಟ್ ಮಾಡುತ್ತಾರೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಯಾವುದೇ ಪಕ್ಷದ ಸರ್ಕಾರ ಆಡಳಿತದಲ್ಲಿದ್ದರೂ ಸಹ ಅಧಿಕಾರದಲ್ಲಿರುವವರಿಗೆ ಪಂಚೇಂದ್ರಿಯಗಳು ತಮ್ಮದಾಗಿರಬೇಕು ಎನ್ನುವ ಹಿತ ನುಡಿಯನ್ನಾಡಿದರು.

ಸದನದ ಹೊರಗೆ ಮಾನ್ಯ ಶಾಸಕರುಗಳ ಹಕ್ಕಿಗೆ ಚ್ಯುತಿಯುಂಟು ಮಾಡುವ ಪ್ರಸಂಗಗಳು ನಡೆದಂತಹ ಸಂದರ್ಭದಲ್ಲಿ ಸಂಬಂಧಪಟ್ಟ ಶಾಸಕರು ಆ ವಿಚಾರವನ್ನು ಸದನದೊಳಗೆ ಪ್ರಸ್ತಾಪಿಸಿದಂತಹ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರು ಅಥವಾ ಮಾನ್ಯ ಸಭಾಧ್ಯಕ್ಷರು ಸೂಕ್ತ ರೀತಿಯಲ್ಲಿ ಅದನ್ನು ಪರಿಶೀಲಿಸಿದ ನಂತರ ಸದರಿ ವಿಚಾರವನ್ನು ಹಕ್ಕುಬಾಧ್ಯತಾ ಸಮಿತಿಗೆ ವಹಿಸಿಕೊಡಲಾಗುತ್ತದೆ. ಇಲ್ಲಿ ಆಮೂಲಾಗ್ರವಾಗಿ ಆ ಪ್ರಕರಣವನ್ನು ಪರಾಮರ್ಶಿಸಿ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳಲಾಗುತ್ತದೆ ಎನ್ನುವುದರ ಬಗ್ಗೆ ತಿಳಿಸಿದರು. ಒಂದು ಸಲ ಡೆಕ್ಕನ್ ಹೆರಾಲ್ಡ್ ಪತ್ರಿಕೆಯ Chief Editor Pothan Joseph ಎನ್ನುವವರು, ವಿಧಾನ ಪರಿಷತ್ತಿನ ಕಲಾಪಗಳ ಬಗ್ಗೆ ಹಗುರವಾಗಿ ಬರೆದಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರುಗಳಾಗಿದ್ದ J.B. Mallaradhya ಮತ್ತು ಎಂ.ಪಿ.ಎಲ್. ಶಾಸ್ತ್ರಿಯವರು ಅವರ ಮೇಲೆ

ಪ್ರಿವಿಲೇಜ್ ಮೂವ್ ಮಾಡಿದಾಗ, Pothan Joseph ಅವರನ್ನು ಸಭೆಗೆ ಕರೆಸಿ, ಕಟಕಟೆಯಲ್ಲಿ ನಿಲ್ಲಿಸಿ ವಾಗ್ದಂಡನೆ ಮಾಡಿದ ಉದಾಹರಣೆಯನ್ನು ನೀಡಿದರು.

ಜಂಟಿ ಸದನ ಸಮಿತಿಗಳ ಬಗ್ಗೆ ಮಾತನಾಡುತ್ತಾ, ಈ ಸಮಿತಿಗಳು ಶಾಶ್ವತ ಸಮಿತಿಗಳಲ್ಲ, ಇವು ಯಾವ ಉದ್ದೇಶಕ್ಕಾಗಿ ಜನ್ಮ ತಳೆದಿರುತ್ತವೆ, ಆ ಕಾರ್ಯ ಪೂರ್ಣಗೊಂಡ ನಂತರ ಈ ಸಮಿತಿಗಳ ಕಾರ್ಯಾವಧಿ ಮುಕ್ತಾಯಗೊಳ್ಳುತ್ತದೆ. ವ್ಯಾಪಕ ಚರ್ಚೆ, ವಿಮರ್ಶೆ ಅಥವಾ ಬದಲಾವಣೆಗಳ ಅವಶ್ಯಕತೆ ಇರುವಂತಹ ವಿಚಾರಗಳಿಗೆ ಸಂಬಂಧಪಟ್ಟಂತೆ, ಸದನದಲ್ಲಿ ಪರಿಣತಿ ಇರುವ ಸದಸ್ಯರನ್ನು ಅಥವಾ ಶಾಸಕಾಂಗ ಪಕ್ಷಗಳ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾನ್ಯ ಸಭಾಪತಿಯವರು ಅಥವಾ ಮಾನ್ಯ ಸಭಾಧ್ಯಕ್ಷರು ಜಂಟಿ ಸದನ ಸಮಿತಿಯನ್ನು ರಚನೆ ಮಾಡುತ್ತಾರೆಂದು ಹೇಳುವ ಮೂಲಕ ಸಮಿತಿಗಳ ಕಾರ್ಯವೈಖರಿಯ ಬಗ್ಗೆ ಸಂಕ್ಷಿಪ್ತ ವಿವರಣೆಯನ್ನು ನೀಡಿದರು. 1973ನೇ ಇಸವಿಯಲ್ಲಿ ಭೂಸುಧಾರಣಾ ಕಾಯಿದೆಯನ್ನು ಕರ್ನಾಟಕದಲ್ಲಿ ಜಾರಿಗೊಳಿಸಿದಂತಹ ಸಂದರ್ಭದಲ್ಲಿ ಶ್ರೀಯುತ ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದು, ಶ್ರೀ ಹುಚ್ಚಮಾಸ್ತಿಗೌಡರು ಕಂದಾಯ ಮಂತ್ರಿಗಳಾಗಿದ್ದಾಗ, ಜಂಟಿ ಸದನ ಸಮಿತಿಯನ್ನು ರಚನೆ ಮಾಡಿದಂತಹ ಉದಾಹರಣೆಯನ್ನು ಉಲ್ಲೇಖ ಮಾಡಿದರು.

**ಶ್ರೀ ಕೆ.ಆರ್.ರಮೇಶ್ ಕುಮಾರ್**ರವರು ಸಮಿತಿ ಸಭೆಗೆ ಹಾಜರಾಗುವ ಅಧಿಕಾರಿಗಳಲ್ಲಿ ಕೆಲವರು ಅಲಕ್ಷ್ಯ ಮನೋಭಾವನೆಯನ್ನು ಹೊಂದಿರುತ್ತಾರೆ. ಇದು ಪ್ರಜಾಸತ್ತೆಗೆ ಆಗುವಂತಹ ದೊಡ್ಡ ಅಪಮಾನವಾಗಿದೆ. ಸಮಿತಿಗಳ ವೈಶಿಷ್ಟ್ಯವೆಂದರೆ, ಇಲ್ಲಿ ಪಕ್ಷಬೇಧವಿರುವುದಿಲ್ಲ, ವೈಯಕ್ತಿಕ ವಿಚಾರಗಳು ಅಪ್ರಸ್ತುತ ಮತ್ತು ಸಾರ್ವಜನಿಕರ ಹಿತ ಪ್ರಮುಖವಾಗಿರುತ್ತದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಯಾವುದೇ ಸಮಿತಿಯಾಗಿರಬಹುದು ಬಹಳ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ. ಏಕೆಂದರೆ, ವಿಶ್ವದ ಇತಿಹಾಸದಲ್ಲಿ ಸಮಿತಿ ವರದಿಯ ಹಿನ್ನೆಲೆಯಲ್ಲಿ ಹಲವಾರು ಸರ್ಕಾರಗಳು ಪತನಗೊಂಡಿವೆ ಎನ್ನುವ ಎಚ್ಚರಿಕೆಯ ನುಡಿಗಳನ್ನಾಡಿದರು.

ಹೆಚ್ಚು ಸಾರ್ವಜನಿಕರ ಅವಹೇಳನಕ್ಕೆ ಗುರಿಯಾಗಿರುವ ಕ್ಷೇತ್ರವೆಂದರೆ ರಾಜಕೀಯ ಕ್ಷೇತ್ರವಾಗಿದೆ. ಆದ್ದರಿಂದ ಸಾರ್ವಜನಿಕ ಜೀವನದಲ್ಲಿರುವಂತಹ ಶಾಸಕರು ಹೆಚ್ಚು ಘನತೆ ಮತ್ತು ಗೌರವಗಳಿಂದ ನಡೆದುಕೊಳ್ಳುವ ಮೂಲಕ ಸಾರ್ವಜನಿಕ ಬದುಕಿಗೆ ಹೆಚ್ಚು ಶಕ್ತಿಯನ್ನು ತುಂಬುವಂತಹ

ಕೆಲಸವಾಗಬೇಕೆನ್ನುವ ಹಿತವಚನವನ್ನು ನೀಡುವ ಮೂಲಕ ಮಾನ್ಯ ಕೆ.ಆರ್.ರಮೇಶ್‌ಕುಮಾರ್‌ರವರು ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿದರು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ವಿಧಾನಸಭೆಯ ಮಾಜಿ ಸಭಾಧ್ಯಕ್ಷರಾದ ಮಾನ್ಯ ಕೆ.ಆರ್.ರಮೇಶ್‌ಕುಮಾರ್‌ರವರಿಗೆ ನೆನಪಿನ ಕಾಣಿಕೆ ನೀಡುವ ಮೂಲಕ ಗೌರವಿಸಿದರು.)**

**(ಸಭೆಯನ್ನು ಮಧ್ಯಾಹ್ನ 3 ಗಂಟೆ 25 ನಿಮಿಷಕ್ಕೆ ಚಹಾ ವಿರಾಮಕ್ಕಾಗಿ ಮುಂದೂಡಲ್ಪಟ್ಟು, ಪುನಃ ಮಧ್ಯಾಹ್ನ 03 ಗಂಟೆ 55 ನಿಮಿಷಗಳಿಗೆ ಸಮಾವೇಶಗೊಂಡಿತು)**

**ವಿಷಯ: ಅಧಿವೇಶನದ ಕಲಾಪಗಳು, ಪ್ರಶ್ನೋತ್ತರ ವೇಳೆ, ಗಮನ ಸೆಳೆಯುವ ಸೂಚನೆ, ಶೂನ್ಯವೇಳೆ, ಸಾರ್ವಜನಿಕ ಮಹತ್ವದ ವಿಷಯಗಳು**

**ಶ್ರೀ. ಬಿ.ಎಲ್.ಶಂಕರ್, ಮಾನ್ಯ ಮಾಜಿ ಸಭಾಪತಿ** ಇವರು ಅಧಿವೇಶನದ ಕಲಾಪಗಳು, ಪ್ರಶ್ನೋತ್ತರ ವೇಳೆ, ಗಮನ ಸೆಳೆಯುವ ಸೂಚನೆ, ಶೂನ್ಯವೇಳೆ, ಸಾರ್ವಜನಿಕ ಮಹತ್ವದ ವಿಷಯಗಳು ಎನ್ನುವ ವಿಚಾರಗಳ ಮೇಲೆ ಮಾತನಾಡುತ್ತಾ, ಸದನ ವ್ಯವಸ್ಥಿತವಾಗಿ ನಡೆಯಬೇಕೆನ್ನುವ ಕಾರಣದ ಹಿನ್ನೆಲೆಯಲ್ಲಿ ಭಾರತದ ಸಂವಿಧಾನದ ಆಧಾರದ ಮೇಲೆ ಕೆಲವೊಂದು ನಿಯಮಾವಳಿಗಳನ್ನು ರಚನೆ ಮಾಡಿಕೊಳ್ಳಲಾಗಿದೆ. ಪ್ರಪಂಚದಲ್ಲಿ ಸಣ್ಣಪುಟ್ಟ ರಾಷ್ಟ್ರಗಳೂ ಸೇರಿ ಸುಮಾರು 192 ರಿಂದ 200-212ರವರೆಗೆ ರಾಷ್ಟ್ರಗಳಿವೆ. ಅವುಗಳಲ್ಲಿ ಸುಮಾರು 120 ದೇಶಗಳು ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಿವೆ. ರಷ್ಯಾ, ಚೀನಾ, ವಿಯೆಟ್ನಾಂ ಮುಂತಾದ ಕಮ್ಯುನಿಸ್ಟ್ ದೇಶಗಳನ್ನು ಹೊರತುಪಡಿಸಿ 120 ದೇಶಗಳು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿವೆ. ಅಂದರೆ ಇಡೀ ಪ್ರಪಂಚದ ಜನಸಂಖ್ಯೆಯ ಸುಮಾರು 58.2ರಷ್ಟು ಜನ ಈ ಸಂಸದೀಯ ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಿದ್ದಾರೆ. ಸಾಮಾಜಿಕ ವ್ಯವಸ್ಥೆಗೆ ಒಂದು ಬಲಿಷ್ಠ ತಳಹದಿಯನ್ನು ಹಾಕಿದಂತಹ ಪ್ಲೇಟೋ ಹಾಗೂ ಸಾಕ್ರೆಟಿಸ್ ಇವರುಗಳ ಕೊಡುಗೆಯನ್ನು ಸ್ಮರಿಸಿಕೊಂಡರು.

ಸದನದಲ್ಲಿ ಪ್ರಶ್ನೆ ಕೇಳುವ ಬಗ್ಗೆ ಮಾತನಾಡುತ್ತಾ, ಪ್ರಶ್ನೆ ಮಾಡುವ ಪ್ರವೃತ್ತಿ ಅನಾದಿಕಾಲದಿಂದಲೂ ಅಂದರೆ ಮಾನವ ಸಂಘಜೀವಿಯಾಗಿ ಬಾಳುವುದನ್ನು ಕಲಿತ ಕಾಲದಿಂದ ಪ್ರಶ್ನೆ ಮಾಡುವ ಪ್ರವೃತ್ತಿ ಪ್ರಾರಂಭವಾಯಿತು. ರಾಮಾಯಣದ ಕಾಲದಲ್ಲಿ ದಕ್ಷ ಧರ್ಮರಾಯನನ್ನು ಪ್ರಶ್ನೆ ಕೇಳುವ ಪ್ರಸಂಗ, ಬುದ್ಧನ ಧರ್ಮಸಭೆಯಲ್ಲಿ ಮತ್ತು ಬಸವಾದಿ ಶರಣರ ಅನುಭವ ಮಂಟಪದಲ್ಲಿ ಪ್ರಶ್ನೆ ಕೇಳುವ ಉದಾಹರಣೆಗಳನ್ನು ಉಲ್ಲೇಖ ಮಾಡುತ್ತಾ, ಆಧುನಿಕ ಯುಗದಲ್ಲಿ ಪ್ರಶ್ನೆ ಕೇಳುವ ಹಕ್ಕು 1712ರಲ್ಲಿ ಬ್ರಿಟಿಷ್ ಪಾರ್ಲಿಮೆಂಟ್‌ನ ಹೌಸ್ ಆಫ್ ಲಾರ್ಡ್ಸ್‌ನಲ್ಲಿ ಚಾಲ್ತಿಗೆ ಬಂದಿತ್ತು. ಕರ್ನಾಟಕ ರಾಜ್ಯದಲ್ಲಿ 1881ರಲ್ಲಿ ಪ್ರಜಾಪ್ರತಿನಿಧಿ ಸಭೆ ಸ್ಥಾಪನೆಯಾಗಿತ್ತು. ಅಲ್ಲಿ ಪ್ರಶ್ನೆಗಳನ್ನು ಕೇಳುವ ಪ್ರಯತ್ನ ನಡೆದಿತ್ತು.

ಭಾರತದ ಅತ್ಯಂತ ಪುರಾತನ ಸಭೆಗಳಲ್ಲಿ ಕರ್ನಾಟಕ ವಿಧಾನ ಪರಿಷತ್ತು ಒಂದು ಎನ್ನುವ ಉಲ್ಲೇಖವನ್ನು ಮಾಡಿದ್ದರು.

ಚುಕ್ಕೆ ಗುರುತಿನ ಪ್ರಶ್ನೆ ಮತ್ತು ಚುಕ್ಕೆ ರಹಿತ ಪ್ರಶ್ನೆ ಎಂದು ಎರಡು ವಿಧವಿದೆ. ಚುಕ್ಕೆ ಗುರುತಿನ ಪ್ರಶ್ನೆಯನ್ನು ಹಾಕುವಂತಹ ಸಂದರ್ಭದಲ್ಲಿ ನಿಯಮಾವಳಿಗಳಲ್ಲಿ ಉಲ್ಲೇಖ ಮಾಡಿರುವಂತಹ 26 ನಿಬಂಧನೆಗಳನ್ನು ಅನುಸರಿಸಿ ಪ್ರಶ್ನೆಯನ್ನು ಹಾಕಬೇಕಾಗುತ್ತದೆ. ಕೇಳಿದಂತಹ ಪ್ರಶ್ನೆಗೆ ಸಂಬಂಧಪಟ್ಟ ಉಪ ಪ್ರಶ್ನೆಗಳ ವಿಚಾರದಲ್ಲಿ ಸಂಬಂಧ ಇಲ್ಲದೇ ಇರುವಂತಹ ವಿಷಯದ ಬಗ್ಗೆ ಮಾತನಾಡುವುದಾಗಲೀ ಅಥವಾ ಆ ವಿಚಾರದಲ್ಲಿ ಭಾಷಣ ಮಾಡುವುದಕ್ಕೆ ಅವಕಾಶವಿರುವುದಿಲ್ಲ ಎನ್ನುವ ಅಂಶಗಳನ್ನು ಮಾನ್ಯ ಸದಸ್ಯರುಗಳು ಗಮನದಲ್ಲಿಟ್ಟುಕೊಳ್ಳಬೇಕೆನ್ನುವ ಅಂಶವನ್ನು ಉಲ್ಲೇಖಿಸಿದರು.

ಸಾಮಾನ್ಯವಾಗಿ ಪ್ರಶ್ನೋತ್ತರ ಅವಧಿಗೆ 01 ಗಂಟೆ ಕಾಲಾವಕಾಶ ಇದ್ದು, ಅದರಲ್ಲಿ ಒಟ್ಟು 15 ಪ್ರಶ್ನೆಗಳಿದ್ದು, ಒಬ್ಬ ಸದಸ್ಯ ಒಂದು ಪ್ರಶ್ನೆ ಕೇಳುವುದಕ್ಕೆ 3 ರಿಂದ 4 ನಿಮಿಷಗಳ ಕಾಲಾವಕಾಶ ದೊರೆಯುತ್ತದೆ. ಮಾನ್ಯ ಸದಸ್ಯರು ಉಪ ಪ್ರಶ್ನೆಗೆ ಅವಕಾಶ ಇಲ್ಲದಿರುವ ರೀತಿಯಲ್ಲಿ ಪ್ರಶ್ನೆ ಕೇಳಬೇಕು. ಆ ಪ್ರಶ್ನೆಗೆ ಉತ್ತರ ನೀಡುವಂತಹ ಸಂದರ್ಭದಲ್ಲಿ ಮತ್ತೆ ಸಮಜಾಯಿಷಿಗೆ ಅಥವಾ ಅರ್ಧಗಂಟೆ ಚರ್ಚೆಗೆ ಅವಕಾಶವಿಲ್ಲದಿರುವ ರೀತಿಯಲ್ಲಿ ಉತ್ತರ ಇರಬೇಕಾಗುತ್ತದೆ ಎನ್ನುವ ವಿವರಣೆಯನ್ನು ನೀಡಿದರು.

ಪ್ರಶ್ನೆಗೆ ಸರಿಯಾದಂತಹ ಉತ್ತರ ಬಾರದಿದ್ದರೆ, ಅದಕ್ಕೆ ಸಭಾಪತಿಯವರು ಅದರ ಮೇಲೆ ಅರ್ಧಗಂಟೆ ಕಾಲದ ಚರ್ಚೆಗೆ ಅವಕಾಶವನ್ನು ಕೊಟ್ಟರೆ, ವಾರದಲ್ಲಿ ಎರಡು ದಿವಸಗಳ ಕಾಲ ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶವನ್ನು ನೀಡಬಹುದಾಗಿದೆ ಎನ್ನುವ ವಿಚಾರವನ್ನು ವ್ಯಕ್ತಪಡಿಸಿದರು.

ಒಂದು ದಿವಸದಲ್ಲಿ 230 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳನ್ನು ಕೇಳಲು ಅವಕಾಶವಿದೆ. ಬಹಳಷ್ಟು ಮಾಹಿತಿಗಳು ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಸಿಗುತ್ತದೆ. ಕೆಲವು ಸಾರಿ ಚುಕ್ಕೆ ಗುರುತಿನ ಪ್ರಶ್ನೆಗಳಿಗಿಂತ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಲ್ಲಿ ಬೇಕಾದಷ್ಟು ಮಾಹಿತಿ ಸಿಗುತ್ತದೆ ಎನ್ನುವ ಸಲಹೆಯನ್ನು ನೀಡಿದರು.

ಶೂನ್ಯವೇಳೆ ಬಗ್ಗೆ ಪ್ರಸ್ತಾಪ ಮಾಡುತ್ತಾ, ಶೂನ್ಯ ವೇಳೆ ಬಗ್ಗೆ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ಪುಸ್ತಕದಲ್ಲಿ ಎಲ್ಲಿಯೂ ಉಲ್ಲೇಖವಿಲ್ಲ. ಈಗ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳಲ್ಲಿ, ನಿಯಮ 58A ಎಂದು 2018ನೇ ಇಸವಿಯಲ್ಲಿ ಸೇರಿಸಿಕೊಳ್ಳಲಾಗಿದೆ. ನಿನ್ನೆ ಸದನ ಮುಕ್ತಾಯಗೊಂಡು ಇವತ್ತು ಸದನ ಪ್ರಾರಂಭವಾಗುವುದರೊಳಗೆ ಯಾವುದಾದರೊಂದು ಮಹತ್ವದ ಘಟನೆ ನಡೆದಿದ್ದರೆ, ನಿಯಮದ ಪ್ರಕಾರ ನೋಟೀಸ್ ಕೊಡುವಷ್ಟು ಸಮಯವಿಲ್ಲದಿರುವ ಸಂದರ್ಭದಲ್ಲಿ ತುರ್ತಾಗಿ ವಿಷಯವನ್ನು ಸದನದ ಗಮನಕ್ಕೆ ತರುವಂತಹ ಒಂದು ವಿಧಾನ ಶೂನ್ಯವೇಳೆಯ ನೋಟೀಸ್ ಆಗಿದೆ. ಒಂದು ವಿಷಯವನ್ನು ಬಿಟ್ಟು ಇನ್ನೊಂದು ವಿಷಯಕ್ಕೆ ಹೋಗಬೇಕಾದರೆ, ಮದ್ಯದಲ್ಲಿ ಶೂನ್ಯವೇಳೆ ಎಂದು ಯಾವಾಗ ಬೇಕಾದರೂ ಪ್ರಸ್ತಾಪ ಮಾಡಬಹುದು. ಸಾಮಾನ್ಯವಾಗಿ ಪ್ರಶ್ನೋತ್ತರ ವೇಳೆ ಮುಗಿದ ನಂತರ ಬೇರೆ ಬೇರೆ ಕಲಾಪ ತೆಗೆದುಕೊಳ್ಳುವ ಮುಂಚೆ ಶೂನ್ಯವೇಳೆ ಪ್ರಸ್ತಾಪ ಮಾಡುವ ಪದ್ಧತಿ ಇದೆ. ಇದಕ್ಕೆ ಸರ್ಕಾರ ಉತ್ತರ ಕೊಡಬೇಕಾದಂತಹ ಅನಿವಾರ್ಯತೆ ಇದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಸಾರ್ವಜನಿಕ ಮಹತ್ವದ ವಿಷಯದ ಬಗ್ಗೆ ಗಮನ ಸೆಳೆಯುವ ವಿಧಾನವೆಂದರೆ, ಯಾರೇ ಒಬ್ಬ ಸದಸ್ಯರು ಪೂರ್ವಭಾವಿಯಾಗಿ ಮಾನ್ಯ ಸಭಾಪತಿಯವರ ಅನುಮತಿಯನ್ನು ತೆಗೆದುಕೊಂಡು ಸಾರ್ವಜನಿಕ ಮಹತ್ವದ ಯಾವುದಾದರೂ ಜರೂರು ವಿಚಾರವನ್ನು ಸಚಿವರ ಗಮನಕ್ಕೆ ತರಬಹುದು ಮತ್ತು ಸಚಿವರು ಸಂಕ್ಷಿಪ್ತವಾಗಿ ಒಂದು ಹೇಳಿಕೆಯನ್ನು ಕೊಡಬಹುದು ಅಥವಾ ಸ್ವಲ್ಪ ಸಮಯದ ನಂತರ ಅಥವಾ ಇನ್ನೊಂದು ದಿನ ತಮ್ಮ ಹೇಳಿಕೆ ನೀಡಲು ಕಾಲಾವಕಾಶವನ್ನು ನೀಡಬೇಕೆಂದು ಕೇಳಿಕೊಳ್ಳಬಹುದು ಎನ್ನುವ ಮಾಹಿತಿಯನ್ನು ನೀಡಿದರು.

**ಮಾನ್ಯ ಬಿ.ಎಲ್.ಶಂಕರ್‌ರವರು** ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ನಿಲುವಳಿ ಸೂಚನೆ ತರುವುದರ ಬಗ್ಗೆ ಪ್ರಸ್ತಾಪಿಸುತ್ತಾ, ಸಾರ್ವಜನಿಕವಾಗಿ ಅತ್ಯಂತ ಮಹತ್ವವುಳ್ಳ ಸಂವಿಧಾನ ಮತ್ತು ಕಾನೂನಿನಲ್ಲಿ ನಿರ್ದೇಶಿಸಲಾಗಿರುವ ಕರ್ತವ್ಯಗಳನ್ನು ಜಾರಿಗೊಳಿಸಲು ಸರ್ಕಾರದ ವೈಫಲ್ಯತೆ ಕಂಡುಬಂದಲ್ಲಿ ಅಂತಹ ಒಂದು ನಿರ್ದಿಷ್ಟ ವಿಷಯದ ಮೇಲೆ ಚರ್ಚೆ ನಡೆಸುವ ಉದ್ದೇಶಕ್ಕಾಗಿ ಮಾನ್ಯ ಸಭಾಪತಿಯವರ ಅನುಮತಿಯೊಂದಿಗೆ ನಿಲುವಳಿ ಸೂಚನೆಯನ್ನು ಪ್ರಶ್ನೋತ್ತರ ಅಥವಾ ಶೂನ್ಯವೇಳೆಯ

ನಂತರ ತರಬಹುದು. ಒಂದು ನಿಲುವಳಿ ಸೂಚನೆಯಲ್ಲಿ ಒಂದಕ್ಕಿಂತ ಹೆಚ್ಚು ವಿಷಯ ಚರ್ಚಿಸಕೂಡದು ಮತ್ತು ನಿಲುವಳಿ ಸೂಚನೆಯು ಇತ್ತೀಚೆಗೆ ನಡೆದ ನಿರ್ದಿಷ್ಟ ವಿಷಯಕ್ಕಷ್ಟೇ ಸೀಮಿತವಾಗಿರಬೇಕು ಎನ್ನುವಂತಹ ನಿಬಂಧನೆಗಳು ಇವೆ ಎನ್ನುವ ಅಂಶಗಳನ್ನು ಮಾನ್ಯ ಶಾಸಕರುಗಳ ಗಮನಕ್ಕೆ ತಂದರು.

ಚುಕ್ಕೆ ಗುರುತಿನ ಪ್ರಶ್ನೆ, ಚುಕ್ಕೆ ಗುರುತಿಲ್ಲದ ಪ್ರಶ್ನೆ ಅಥವಾ ಗಮನ ಸೆಳೆಯುವ ಸೂಚನೆ ಆಗಿರಲಿ ಅಥವಾ ಸಾರ್ವಜನಿಕ ಮಹತ್ವದ ವಿಷಯ ಆಗಿರಲಿ ಇವೆಲ್ಲವೂ ಸಹ ಸರ್ಕಾರದಿಂದ ಬೇಕಾಗಿರತಕ್ಕಂತಹ ಮಾಹಿತಿಯನ್ನು ಪಡೆಯುವುದಕ್ಕೆ ನಿಯಮಾವಳಿಗಳಲ್ಲಿ ಮಾಡಿಕೊಟ್ಟಿರುವಂತಹ ಅವಕಾಶವಾಗಿರುತ್ತದೆ. ಮೇಲ್ಮನೆ ನಿಯಮಾವಳಿಗಳ ಪ್ರಕಾರ ಕಾರ್ಯನಿರ್ವಹಿಸಿ ವಿಷಯ ಪ್ರಸ್ತಾಪ ಮಾಡುವುದಕ್ಕೆ ಪ್ರಾರಂಭ ಮಾಡಿದರೆ, ಅದ್ಭುತವಾದ ಚರ್ಚೆಗಳು ನಡೆಯಬಹುದು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಸಂವಿಧಾನದಲ್ಲಿ ಮೇಲ್ಮನೆಯನ್ನು ಪ್ರತಿ ರಾಜ್ಯದಲ್ಲಿಯೂ ಸ್ಥಾಪನೆ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ನೀಡಬೇಕಾಗಿತ್ತು. ಆದರೆ, ಮೇಲ್ಮನೆಯನ್ನು ರಚನೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ರಾಜ್ಯಗಳಿಗೆ ಬಿಟ್ಟಿರುವುದರಿಂದ ಇಷ್ಟವಾದವರು ಮೇಲ್ಮನೆಯನ್ನು ಇಟ್ಟುಕೊಳ್ಳುತ್ತಾರೆ, ಇಲ್ಲದವರು ಮೇಲ್ಮನೆಯನ್ನು ರದ್ದುಗೊಳಿಸುತ್ತಾರೆ. ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಎನ್.ಟಿ.ರಾಮರಾವ್‌ರವರು ಮತ್ತು ತಮಿಳುನಾಡಿನ ಮುಖ್ಯಮಂತ್ರಿಗಳಾಗಿದ್ದ ಶ್ರೀಮತಿ ಜಯಲಲಿತರವರು ಆ ರಾಜ್ಯದಲ್ಲಿ ಅಸ್ತಿತ್ವದಲ್ಲಿದ್ದ ಮೇಲ್ಮನೆಯನ್ನು ರದ್ದುಗೊಳಿಸಿದ ಉದಾಹರಣೆಗಳನ್ನು ನೀಡುತ್ತಾ, ಉತ್ತರ ಪ್ರದೇಶದ ಮುಖ್ಯಮಂತ್ರಿಗಳಾಗಿರುವ ಮಾನ್ಯ ಯೋಗಿ ಆದಿತ್ಯನಾಥ್‌ರವರು, ಬಿಹಾರದ ಮುಖ್ಯಮಂತ್ರಿಗಳಾದ ಶ್ರೀ ನಿತೀಶ್‌ಕುಮಾರ್ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಗಳಾಗಿರುವ ಶ್ರೀ ಉದ್ಧವ್ ಠಾಕ್ರೆ ಇವರುಗಳು ಮೇಲ್ಮನೆಯ ಕೊಡುಗೆಗಳಾಗಿದ್ದಾರೆ. ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲಿ ಶ್ರೀ ರಾಮಕೃಷ್ಣ ಹೆಗಡೆಯವರು ಮತ್ತು ಮಾನ್ಯ ಡಿ.ವಿ.ಸದಾನಂದಗೌಡರು ಮೇಲ್ಮನೆಯ ಸದಸ್ಯರಾಗಿ ಮುಖ್ಯಮಂತ್ರಿಗಳಾಗಿದ್ದವರು. ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಹೆಚ್.ಡಿ.ದೇವೇಗೌಡರು ರಾಜ್ಯಸಭಾ ಸದಸ್ಯರಾಗಿಯೇ ಪ್ರಧಾನಮಂತ್ರಿಗಳಾಗಿದ್ದರು. ಇಂತಹ ಮಹತ್ವದ ಕೊಡುಗೆಯನ್ನು ಮೇಲ್ಮನೆ ಮತ್ತು ರಾಜ್ಯಸಭೆ ನೀಡಿದೆ ಎಂದು ಉಲ್ಲೇಖ ಮಾಡಿದರು.

**ಮಾನ್ಯ ಬಿ.ಎಲ್.ಶಂಕರ್‌ರವರು,** ಕರ್ನಾಟಕ ರಾಜ್ಯದ ಮೇಲ್ಮನೆಗೆ ಒಂದು ಶತಮಾನಕ್ಕೂ ಹೆಚ್ಚಿನ ಇತಿಹಾಸವಿದೆ. ಶ್ರೀ ಎಂ.ಪಿ.ಎಲ್ ಶಾಸ್ತ್ರೀ. ಶ್ರೀಮತಿ ಪದ್ಮಾವತಿ ವಿಠ್ಠಲ್‌ರಾವ್, ಶ್ರೀ ವೆಂಕಟರಾವ್, ಡಾ॥ ಎಂ.ಆರ್.ತಂಗಾ, ಶ್ರೀ ಎ.ಕೆ.ಸುಬ್ಬಯ್ಯ, ಡಾ॥ ವಿ.ಎಸ್.ಆಚಾರ್ಯ, ಡಾ॥ ಹೆಚ್.ನರಸಿಂಹಯ್ಯ, ಶ್ರೀ ಕೆ.ಹೆಚ್.ಶ್ರೀನಿವಾಸ್, ಡಾ॥ಎಂ.ಪಿ.ನಾಡಗೌಡ, ಶ್ರೀ ಎಂ.ಸಿ.ನಾಣಯ್ಯ, ಡಾ॥ ಚಂದ್ರಶೇಖರ ಕಂಬಾರ, ದಲಿತಕವಿ ಡಾ॥ ಸಿದ್ಧಲಿಂಗಯ್ಯ, ಪ್ರೊ॥ ದೊಡ್ಡರಂಗೇಗೌಡ, ಶ್ರೀ ಡಿ.ಹೆಚ್.ಶಂಕರಮೂರ್ತಿ ಮತ್ತು ಪ್ರಸ್ತುತ ಸಭಾಪತಿಗಳಾಗಿರುವ ಮಾನ್ಯ ಬಸವರಾಜ ಹೊರಟ್ಟಿಯವರಂತಹ ಒಬ್ಬರಿಗಿಂತ ಒಬ್ಬರು ಉತ್ತಮ ವ್ಯಕ್ತಿತ್ವವುಳ್ಳ ಪ್ರಬುದ್ಧರು ಮತ್ತು ಮೇಧಾವಿಗಳು ಈ ಮನೆಯ ಪ್ರತಿಷ್ಠೆಯನ್ನು ಹೆಚ್ಚಿಸಿದ್ದಾರೆ. ಈ ಸದನದ ಪ್ರತಿಷ್ಠೆ, ಇತಿಹಾಸ ಮತ್ತು ಪರಂಪರೆಯನ್ನು ಮತ್ತಷ್ಟು ಹೆಚ್ಚಿಸುವ ಅವಕಾಶಗಳು ನೂತನವಾಗಿ ಆಯ್ಕೆಗೊಂಡಿರುವ ಮಾನ್ಯ ಸದಸ್ಯರುಗಳಿಗೆ ದೊರೆಯಲಿ ಎಂದು ಹಾರೈಸುವ ಮೂಲಕ ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿದರು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ವಿಧಾನ ಪರಿಷತ್ತಿನ ಮಾಜಿ ಸಭಾಪತಿಗಳಾದ ಮಾನ್ಯ ಬಿ.ಎಲ್.ಶಂಕರ್‌ರವರಿಗೆ ನೆನಪಿನ ಕಾಣಿಕೆ ನೀಡುವ ಮೂಲಕ ಗೌರವಿಸಿದರು)**

**(ತರಬೇತಿ ಕಾರ್ಯಾಗಾರವು ಸಂಜೆ 5 ಗಂಟೆ 15 ನಿಮಿಷಗಳಿಗೆ ಮುಕ್ತಾಯಗೊಂಡು, ಪುನಃ 4ನೇ ಫೆಬ್ರವರಿ 2022ರ ಶುಕ್ರವಾರದಂದು ಬೆಳಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

*************

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಿಗೆ ದಿನಾಂಕ 04.02.2022ರ ಶುಕ್ರವಾರದಂದು ಬೆಳಗ್ಗೆ 11.00 ಗಂಟೆಗೆ ಕೊಠಡಿ ಸಂಖ್ಯೆ: 419, 4ನೇ ಮಹಡಿ, ವಿಕಾಸಸೌಧ, ಬೆಂಗಳೂರು, ಇಲ್ಲಿ ಏರ್ಪಡಿಸಲಾಗಿದ್ದ "ತರಬೇತಿ ಶಿಬಿರ"ದ ನಡವಳಿಯ ಸಾರಾಂಶ:**

ಸಭೆಯ ಅಧ್ಯಕ್ಷತೆಯನ್ನು ವಹಿಸಿದವರು

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ : ಮಾನ್ಯ ಸಭಾಪತಿಯವರು

ತರಬೇತಿ ಶಿಬಿರಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದವರು

1) ಶ್ರೀ ವಿಶ್ವೇಶ್ವರಹೆಗಡೆ ಕಾಗೇರಿ : ಮಾನ್ಯ ಸಭಾಧ್ಯಕ್ಷರು, ವಿಧಾನಸಭೆ
2) ಶ್ರೀ ಕೆ.ಟಿ.ಶ್ರೀಕಂಠೇಗೌಡ : ವಿಧಾನ ಪರಿಷತ್ತಿನ ಸದಸ್ಯರು
3) ಶ್ರೀಮತಿ ಶಾಲಿನಿ ರಜನೀಶ್ : ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಸಭೆಯಲ್ಲಿ ಹಾಜರಿದ್ದ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು:

ಶ್ರೀಯುತರುಗಳಾದ:

1) ಆಯನೂರು ಮಂಜುನಾಥ್
2) ಅಲ್ಲಂ ವೀರಭದ್ರಪ್ಪ
3) ಕೆ.ಟಿ.ಶ್ರೀಕಂಠೇಗೌಡ
4) ಶಶೀಲ್ ಜಿ.ನಮೋಶಿ
5) ಅರವಿಂದ ಕುಮಾರ ಅರಳಿ

6) ಶ್ರೀಮತಿ ಭಾರತಿ ಶೆಟ್ಟಿ

7) ಅ.ದೇವೇಗೌಡ

8) ಕೆ.ಗೋವಿಂದರಾಜ್

9) ಲಹರ್ ಸಿಂಗ್ ಸಿರೋಯಾ

10) ಮೋಹನ ಕುಮಾರ್ ಕೊಂಡಜ್ಜಿ

11) ನಸೀರ್ ಅಹಮದ್

12) ಪ್ರಾಣೇಶ್ ಎಂ.ಕೆ

13) ನಿರಾಣಿ ಹಣಮಂತ ರುದ್ರಪ್ಪ

14) ಪ್ರತಾಪ ಸಿಂಹ ನಾಯಕ್ ಕೆ

15) ಪಿ.ಆರ್.ರಮೇಶ್

16) ಎಸ್.ರವಿ

17) ಎನ್.ರವಿಕುಮಾರ್

18) ಹೆಚ್.ಎಂ.ರಮೇಶ್ ಗೌಡ

19) ಸುನೀಲ್ ವಲ್ಯಾಪುರ್

20) ಡಾ: ತೇಜಸ್ವಿನಿ ಗೌಡ

21) ಕೆ.ಎ.ತಿಪ್ಪೇಸ್ವಾಮಿ

22) ಶ್ರೀಮತಿ ಎಸ್. ವೀಣಾ ಅಚ್ಚಯ್ಯ

23) ಯು.ಬಿ.ವೆಂಕಟೇಶ್

24) ಶಾಂತಾರಾಮ್ ಬುಡ್ನ ಸಿದ್ದಿ

25) ಶರಣಗೌಡ ಬಯ್ಯಾಪುರ

26) ವೈ.ಎಂ.ಸತೀಶ್

27) ಡಾ:ತಳವಾರ್ ಸಾಬಣ್ಣ

28) ಮುನಿರಾಜು ಗೌಡ ಪಿ.ಎಂ

29) ಡಾ.ಡಿ.ತಿಮ್ಮಯ್ಯ

30) ಎಸ್.ರುದ್ರೇಗೌಡ

31) ರಾಜೇಂದ್ರ ರಾಜಣ್ಣ

32) ಸಿ.ಎನ್.ಮಂಜೇಗೌಡ

33) ಕೆ.ಎಸ್.ನವೀನ್

34) ಪಿ.ಹೆಚ್.ಪೂಜಾರ್

35) ಗಣಪತಿ ದುಮ್ಮಾ ಉಳ್ವೇಕರ್

36) ಹೆಚ್.ಎಸ್.ಗೋಪಿನಾಥ್

37) ಕುಶಾಲಪ್ಪ ಎಂ.ಪಿ(ಸುಜಾ)

38) ಮಂಜುನಾಥ್ ಭಂಡಾರಿ

39) ಡಿ.ಎಸ್. ಅರುಣ್

40) ಎಂ.ಎಲ್.ಅನಿಲ್ ಕುಮಾರ್

41) ಡಾ:ಚಂದ್ರಶೇಖರ್ ಬಿ.ಪಾಟೀಲ್

42) ಚನ್ನರಾಜ್ ಬಸವರಾಜ್ ಹಟ್ಟಿಹೊಳಿ

43) ದಿನೇಶ್ ಗೂಳಿಗೌಡ

44) ಗೋವಿಂದ ರಾಜು

**ಸಭೆಯಲ್ಲಿ ಹಾಜರಿದ್ದ ಕರ್ನಾಟಕ ವಿಧಾನ ಪರಿಷತ್ತಿನ ಅಧಿಕಾರಿಗಳು:**

| | | |
|---|---|---|
| 1 | **ಶ್ರೀಮತಿ ಕೆ.ಆರ್. ಮಹಾಲಕ್ಷ್ಮಿ** | ಕಾರ್ಯದರ್ಶಿ |
| 2 | **ಶ್ರೀಮತಿ ಎಸ್. ನಿರ್ಮಲ** | ಅಪರ ಕಾರ್ಯದರ್ಶಿ |

# ಸ್ವಾಗತ ಭಾಷಣ

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯದರ್ಶಿಯವರಾದ ಶ್ರೀಮತಿ ಕೆ.ಆರ್.ಮಹಾಲಕ್ಷ್ಮಿಯವರು ವಿಧಾನಸಭೆಯ ಸಭಾಧ್ಯಕ್ಷರಾದ ಮಾನ್ಯ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರನ್ನು ಸ್ವಾಗತಿಸಿದರು ಹಾಗೂ ಸಂವಿಧಾನದ ಅಡಿಯಲ್ಲಿ ಜನರ ನಿರೀಕ್ಷೆ ಹಾಗೂ ಶಾಸಕರ ಜವಾಬ್ದಾರಿ ಕುರಿತು ನೂತನ ಶಾಸಕರಿಗೆ ತಿಳಿಸಿಕೊಡಲು ಕೋರಿದರು.

# ಸಂವಿಧಾನದ ಅಡಿಯಲ್ಲಿ ಜನರ ನಿರೀಕ್ಷೆ ಹಾಗೂ ಶಾಸಕರ ಜವಾಬ್ದಾರಿ

**ವಿಧಾನಸಭೆಯ ಸಭಾಧ್ಯಕ್ಷರಾದ ಮಾನ್ಯ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು,** ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಗಳಾದ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರನ್ನು, ನೂತನವಾಗಿ ಆಯ್ಕೆಯಾಗಿ ಬಂದಿದ್ದಂಥ ಶಾಸಕರುಗಳನ್ನು, ಎಲ್ಲಾ ಅಧಿಕಾರಿ-ಸಿಬ್ಬಂದಿಗಳನ್ನು ಸ್ವಾಗತಿಸಿದರು ಮತ್ತು ಭಾರತದ ಸಂವಿಧಾನದ ಪ್ರಸ್ತಾವನೆಯನ್ನು ಬೋಧಿಸಿದರು. ಶಿಕ್ಷಣ ಪಡೆದವರಿಂದ ಹಿಡಿದು, ಇನ್ನೂ ಪ್ರಾಥಮಿಕ ಹಂತದಲ್ಲಿ ಇರುವವರು ಸದರಿ ಪ್ರಸ್ತಾವನೆಯಲ್ಲಿ ಹೆಚ್ಚಿನ ನಂಬಿಕೆ, ವಿಶ್ವಾಸ ಬರುವ ನಿಟ್ಟಿನಲ್ಲಿ ಎಲ್ಲರೂ ಪ್ರಯತ್ನ ಮಾಡಬೇಕು ಎಂದು ತಿಳಿಸಿದರು. ಹಿಂದೆ ನೈತಿಕ ಜವಾಬ್ದಾರಿಯಿಂದಲೇ ಎಲ್ಲಾ ವ್ಯವಸ್ಥೆಗಳು ನಡೆಯುತ್ತಿತ್ತು; ಆ ಮೂಲಕ ಆ ಜ್ಞಾನದ ಬೆಳಕು ಭಾರತ ದೇಶದಲ್ಲಿ ನಿರ್ಮಾಣವಾಗಿ ಭಾರತ ಗುರುವಿನ ಸ್ಥಾನದಲ್ಲಿತ್ತು. ಆದರೆ, ಕಾಲಾಂತರದಲ್ಲಿ ಅನೇಕ ಪರಿವರ್ತನೆಗಳಾಗಿ, ಜನತೆಯಲ್ಲೂ ಅನೇಕ ರೀತಿಯ ಅಪೇಕ್ಷೆಗಳು ನಿರ್ಮಾಣವಾಯಿತಲ್ಲದೇ, ರಾಜರ ಕಾಲದಲ್ಲಿದ್ದ ಕೆಟ್ಟ ಅಂಶಗಳು, ದೋಷ-ದೌರ್ಬಲ್ಯಗಳಿಂದಾಗಿ ಬ್ರಿಟಿಷರು, ಮೊಗಲರು, ಫ್ರೆಂಚರು, ಡಚ್ಚರು ಮತ್ತು ಶಕರು ಭಾರತವನ್ನು ಆಳುವಂತಾಯಿತು ಎಂಬ ವಿಷಯವನ್ನು ತಿಳಿಸಿದ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು, ಎಲ್ಲಾ ಕಾಲದಲ್ಲಿಯೂ ನಿರಂತರವಾದ ಒಂದು ಆಡಳಿತ ವ್ಯವಸ್ಥೆ ಇತ್ತೆಂದು, ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದ ಮೇಲೆ, ನಂತರದ ಆಡಳಿತ ವ್ಯವಸ್ಥೆ ಹೇಗಿರಬೇಕು ಎಂಬ ವಿಷಯ ಚರ್ಚೆಯಾಗಲು ಪ್ರಾರಂಭವಾದಾಗ, 1927ರಲ್ಲಿ ಮುಂಬೈನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ನಮ್ಮ ದೇಶಕ್ಕೆ ಒಂದು ಸಂವಿಧಾನ ಬೇಕು ಎನ್ನುವ ನಿರ್ಣಯ ಮಾಡಿ ಅದನ್ನು ಅಂಗೀಕರಿಸಿದರು ಎನ್ನುವ ವಿಚಾರವನ್ನು ಸಭೆಗೆ ತಿಳಿಸಿದರು.

ನಂತರ, 1933ನೇ ಸಾಲಿನಲ್ಲಿ ಮಾನ್ಯ ಮೋತಿಲಾಲ್ ನೆಹರುರವರು ಒಂದು ವರದಿಯನ್ನು ಕೊಟ್ಟ ಹಿನ್ನೆಲೆಯಲ್ಲಿ, ಹರಿಹರಪುರ ಮತ್ತು ರಾಮಘಡದಲ್ಲಿ ಕಾಂಗ್ರೆಸ್ ಸಮ್ಮೇಳನಗಳು ನಡೆದು,

ಪ್ರಜಾಪ್ರತಿನಿಧಿಗಳ ಸಮಿತಿಯನ್ನು ರಚಿಸುವ ಮೂಲಕ ಸಂವಿಧಾನದ ರಚನೆ ಮಾಡಬೇಕೆಂದು ನಿರ್ಣಯ ಮಾಡಲಾಯಿತು ಹಾಗೂ ಇದರ ನಂತರ ಸೈಮನ್ ವರದಿ, Cripps ಆಯೋಗದ ರಚನೆ, Cabinet Mission ವಿಷಯದಲ್ಲಿ ಸಮಿತಿಯಾಯಿತು ಎಂಬ ವಿಚಾರವನ್ನು ತಿಳಿಸಿಕೊಟ್ಟರು.

1945ನೇ ಸಾಲಿನಲ್ಲಿ 2ನೇ ಮಹಾ ಯುದ್ಧವು ಮುಕ್ತಾಯವಾಗುತ್ತಿದ್ದ ಸಂದರ್ಭದಲ್ಲಿ, ಭಾರತಕ್ಕೆ ಸ್ವಾತಂತ್ರ್ಯ ಕೊಡುವ ನಿರ್ಣಯವಾಗಿ ಸಂವಿಧಾನ ರಚನೆಗೆ ಚಾಲನೆ ಕೊಡಲಾಯಿತು ಮತ್ತು 1947ರಲ್ಲಿ ಸ್ವಾತಂತ್ರ್ಯ ಬಂತು. ಇದಕ್ಕೆ ಮುಂಚೆ, 6ನೇ ಡಿಸೆಂಬರ್ 1946ರಲ್ಲಿ 389 ಸದಸ್ಯರನ್ನು ಹೊಂದಿದಂತಹ ಒಂದು ಸಮಿತಿ ರಚನೆಯಾಗಿ ಅದರ ಅಧ್ಯಕ್ಷತೆಯನ್ನು ಶ್ರೀ ಸಚ್ಚಿದಾನಂದ ಸಿನ್ಹಾರವರು ವಹಿಸಿಕೊಂಡರೂ ಅನಾರೋಗ್ಯದ ಕಾರಣ ಡಾ:ರಾಜೇಂದ್ರ ಪ್ರಸಾದ್‌ರವರು ಸಂವಿಧಾನ ಸಮಿತಿಯ ಅಧ್ಯಕ್ಷರಾಗಿ, ಬೇರೆ ಬೇರೆ province ನ 4 ಜನ Provincial Chief Commissioner ಗಳು, 93 ರಾಜ ಪ್ರತಿನಿಧಿಗಳು ಭಾಗವಹಿಸಿದ್ದರೆಂದು, ಶ್ರೀ ಜವಾಹರ್‌ಲಾಲ್ ನೆಹರು, ಡಾ: ರಾಜೇಂದ್ರ ಪ್ರಸಾದ್, ಶ್ರೀ ಸರ್ದಾರ್ ವಲ್ಲಭಬಾಯಿ ಪಟೇಲ್, ಶ್ರೀ ಮೌಲಾನಾ ಅಬ್ದುಲ್ ಕಲಂ, ಶ್ರೀ ಶ್ಯಾಮಪ್ರಸಾದ್ ಮುಖರ್ಜಿ, ಶ್ರೀ ಬೆನಗಲ್ ನರಸಿಂಗರಾಯರು, ಡಾಃ ಅಂಬೇಡ್ಕರ್‌ರವರು, ಶ್ರೀ ಕಲಾಡಿ ಕೃಷ್ಣರಾಯರು, ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ ಇತ್ಯಾದಿ ಅನೇಕ ಮಹನೀಯರುಗಳು ಚರ್ಚೆ ಮಾಡಿ ಡಾಃ ಅಂಬೇಡ್ಕರ್‌ರವರ ನೇತೃತ್ವದ ಕರಡು ಸಮಿತಿ ರಚನೆಯಾಯಿತು; ಅದರ ಸದಸ್ಯರುಗಳಾಗಿದ್ದ ಶ್ರೀ ಖೈತಾನ್, ಶ್ರೀ ಕೃಷ್ಣಸ್ವಾಮಿ ಅಯ್ಯಂಗಾರ್, ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್, ಶ್ರೀ ಮುನ್ಷಿ ಇವರೆಲ್ಲರೂ ಸೇರಿ 2 ವರ್ಷ 11 ತಿಂಗಳು 18 ದಿನಗಳ ಕಾಲಾವಕಾಶವನ್ನು ತೆಗೆದುಕೊಂಡು ಕರಡನ್ನು ಸಿದ್ಧಪಡಿಸಿದರು ಮತ್ತು 4 ಅಧಿವೇಶನಗಳಲ್ಲಿ ಈ ಕುರಿತು ಚರ್ಚೆಯಾಗಿ ಅಂತಿಮವಾಗಿ 1949ರ ನವೆಂಬರ್ ತಿಂಗಳಿನಲ್ಲಿ ಸರ್ಕಾರದಿಂದ ಅಂಗೀಕರಿಸಲ್ಪಟ್ಟಿತು ಎಂಬುದನ್ನು ಶಿಬಿರಾರ್ಥಿಗಳಿಗೆ ತಿಳಿಸಿಕೊಟ್ಟರು.

ಈ ದಿನವನ್ನು "ರಾಷ್ಟ್ರೀಯ ಕಾನೂನು ದಿವಸ್" ಎಂದು ಆಚರಿಸಲಾಗುತ್ತಿದ್ದುದನ್ನು 2015ರಲ್ಲಿ ಪ್ರಧಾನ ಮಂತ್ರಿಗಳಾದ ಮಾನ್ಯ ಮೋದಿಯವರು, ಡಾಃ ಅಂಬೇಡ್ಕರ್‌ರವರ 125ನೇ ವರ್ಷದ ಕಾರ್ಯಕ್ರಮ ಜಾರಿಯಾಗಿದ್ದ ಹಿನ್ನೆಲೆಯಲ್ಲಿ ನವೆಂಬರ್ ತಿಂಗಳ 26ನೇ ದಿನಾಂಕವನ್ನು "ಸಂವಿಧಾನ ದಿನ"ವೆಂದು ಆಚರಿಸಲು ಕರೆಕೊಟ್ಟರು ಎನ್ನುವ ವಿಷಯವನ್ನು ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರಹೆಗಡೆ ಕಾಗೇರಿಯವರು ತಿಳಿಸಿಕೊಟ್ಟರು.

ನಮ್ಮ ಸಂವಿಧಾನ ಲಿಖಿತ ಸಂವಿಧಾನವಾಗಿದ್ದು, ಮೊದಲು ಇದ್ದ 22 ಅಧ್ಯಾಯಗಳ ಜಾಗದಲ್ಲಿ ಈಗ 25 ಅಧ್ಯಾಯಗಳು, 395 ವಿಷಯಗಳಿಂದ 448 ವಿಷಯಗಳು, 8 ಅನುಸೂಚಿಗಳ ಬದಲು 12 ಅನುಸೂಚಿಗಳಿದ್ದು ಒಟ್ಟು 1,17,396 ಶಬ್ದಗಳಿವೆ ಎಂದು ಸನ್ಮಾನ್ಯರು ತಿಳಿಸಿಕೊಟ್ಟರು.

ಕರಡು ಸಮಿತಿಯಲ್ಲಿ ಸದಸ್ಯರುಗಳಾಗಿದ್ದ ಅನೇಕರ ಆರೋಗ್ಯ ಕೆಟ್ಟಾಗಲೂ ಸಮಿತಿಯ ಅಧ್ಯಕ್ಷರಾಗಿದ್ದ ಡಾಃ ಅಂಬೇಡ್ಕರ್‌ರವರು ನೇತೃತ್ವ ವಹಿಸಿ, 13 ಉಪಸಮಿತಿಗಳನ್ನು ಮಾಡಿ, ಚರ್ಚೆಯ ಸಾರಾಂಶವನ್ನು ಕ್ರೋಡೀಕರಿಸಿ ಅಂತಿಮ ರೂಪ ಕೊಟ್ಟರು. ಡಾಃ ಅಂಬೇಡ್ಕರ್‌ರವರಿಗೆ ಎಷ್ಟೇ ಗೌರವ ಸೂಚಿಸಿದರೂ ಅದು ಕಡಿಮೆಯೇ ಆಗುತ್ತದೆ ಎನ್ನುವ ಮಾತನ್ನು ಹೇಳಿದರು.

ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವದ ಕಲ್ಪನೆಗಳನ್ನು ಫ್ರಾನ್ಸ್ ದೇಶದ ಸಂವಿಧಾನದಿಂದಲೂ, ಪಂಚವಾರ್ಷಿಕ ಯೋಜನೆಗಳ ಕಲ್ಪನೆಯನ್ನು ಸೋವಿಯತ್ ಒಕ್ಕೂಟದಿಂದ, ರಾಜ್ಯ ನಿರ್ದೇಶನ ತತ್ವಗಳನ್ನು ಐರ್ಲ್ಯಾಂಡ್ ದೇಶದಿಂದ, ಸುಪ್ರೀಂ ಕೋರ್ಟ್‌ನ ಕಾರ್ಯನಿರ್ವಹಣೆ ವಿಷಯವನ್ನು ಜಪಾನ್ ದೇಶದಿಂದ, ಸಂಸದೀಯ ಸ್ವರೂಪ, ಪೌರತ್ವ ವಿಷಯಗಳನ್ನು ಬ್ರಿಟನ್‌ನಿಂದ, ರಾಜ್ಯಗಳ ಒಕ್ಕೂಟ ಇತ್ಯಾದಿ ವಿಷಯಗಳನ್ನು ಕೆನಡಾ ದೇಶದಿಂದ, ಮೂಲಭೂತ ಹಕ್ಕು ಮತ್ತು ರಾಷ್ಟ್ರಪತಿ ಅಧಿಕಾರದ ವ್ಯವಸ್ಥೆಯನ್ನು ಅಮೆರಿಕಾ ದೇಶದಿಂದಲೂ ಹೀಗೆ ಎಲ್ಲಾ ದೇಶಗಳ ಸಂವಿಧಾನಗಳನ್ನು ಅಧ್ಯಯನ ಮಾಡಿ ಅವುಗಳನ್ನು ನಮ್ಮ ಸಂವಿಧಾನದಲ್ಲಿ ಅಳವಡಿಸಿರುವ ವಿಷಯವನ್ನು ಮಾನ್ಯ ವಿಶ್ವೇಶ್ವರಹೆಗಡೆ ಕಾಗೇರಿಯವರು ತಿಳಿಸಿಕೊಟ್ಟರು.

ಸದನದಲ್ಲಿ ಸಂವಿಧಾನದ ಮೇಲೆ ವಿಶೇಷ ಚರ್ಚೆ ನಡೆಯಬೇಕೆಂದು ಮಾನ್ಯ ಸಭಾಪತಿಗಳು ಮತ್ತು ತಾವು ತೀರ್ಮಾನಿಸಿ, ಅದಕ್ಕೆ ಅವಕಾಶ ಮಾಡಿಕೊಟ್ಟಾಗ, 5 ದಿನಗಳ ಕಾಲ ಚರ್ಚೆ ನಡೆದು ಕೆಳಮನೆಯ 50 ಸದಸ್ಯರು ಮತ್ತು ಮೇಲ್ಮನೆಯ 25 ಸದಸ್ಯರು ಭಾಗವಹಿಸಿದ್ದರು ಎನ್ನುವ ವಿಷಯವನ್ನು ತಿಳಿಸಿ, ಯಾವ ಯಾವ ದೇಶಗಳು ಕಾಲಕ್ಕೆ ತಕ್ಕಂತೆ ತಮ್ಮ ಸಂವಿಧಾನವನ್ನು ಬದಲಾವಣೆ ಮಾಡಿಕೊಂಡರು ಎನ್ನುವ ಉದಾಹರಣೆ ಕೊಟ್ಟು, ಭಾರತ ದೇಶ ಸಂವಿಧಾನವನ್ನು ಅಂಗೀಕರಿಸಿ 73 ವರ್ಷ ಕಳೆದಿದ್ದರೂ, ಸಣ್ಣಪುಟ್ಟ ತಿದ್ದುಪಡಿಗಳನ್ನು ಹೊರತುಪಡಿಸಿ, ಸಂವಿಧಾನವನ್ನೇ ಬದಲಾವಣೆ ಮಾಡಬೇಕೆಂಬ ಮಾತು ಕೇಳಿ ಬರಲಿಲ್ಲವೆಂದು, ಈ ಹಿನ್ನೆಲೆಯಲ್ಲಿ ನೋಡಿದಾಗ ನಮ್ಮ ಸಂವಿಧಾನ ಶ್ರೇಷ್ಠತೆಯನ್ನೊಳಗೊಂಡಿದೆ; ಸತ್ವಯುತವಾಗಿದೆ ಎಂಬ ವಿಷಯವನ್ನು ತಿಳಿಸಿದರು.

ಐತಿಹಾಸಿಕವಾಗಿ, ಪಾರಂಪರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಭಗವದ್ಗೀತೆಯನ್ನು ಶ್ರೇಷ್ಠ ಗ್ರಂಥವೆಂದು ಭಾವಿಸಿರುವ ಹಾಗೆ, ಆಡಳಿತದ ದೃಷ್ಟಿಯಿಂದ ನಮ್ಮ ಸಂವಿಧಾನ ಕೂಡ ಶ್ರೇಷ್ಠವಾದುದಾಗಿದೆ, ಸಂವಿಧಾನದ ಆಶಯದ ವಿರುದ್ಧ ಒಂದು ಸಣ್ಣ ಅಕ್ಷರವೂ ಸಹ ಆಚೆ–ಈಚೆ ಹೋಗುವುದಕ್ಕೆ ಸಾಧ್ಯವಿಲ್ಲವೆಂದು, ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ವಿಧೇಯಕಗಳಿಗೆ ಅಂಗೀಕಾರ ದೊರಕಿದ ಮೇಲೂ ಅದು ಕಾನೂನು ಆಗಬೇಕಾದರೆ, ರಾಜ್ಯಪಾಲರ ಒಪ್ಪಿಗೆ ಸಿಗಬೇಕು; ರಾಷ್ಟ್ರಪತಿಗಳು ಅದನ್ನು ಅಂಗೀಕರಿಸಿದ ಮೇಲೆ ಅದು ಅನುಷ್ಠಾನಕ್ಕೆ ಬರುತ್ತದೆ ಎಂಬ ವಿಚಾರವನ್ನು ತಿಳಿಸಿದರು.

ಸ್ವಾತಂತ್ರ್ಯ ಬಂದ ಪ್ರಾರಂಭದ ದಿನಗಳಲ್ಲಿ ಹೊರ ದೇಶಗಳಿಂದ ಗೋಧಿಯನ್ನು ಆಮದು ಮಾಡಿಕೊಳ್ಳುತ್ತಿದ್ದ ನಾವು, ನಂತರ ಎಲ್ಲಾ ಕೊರತೆಗಳನ್ನು, ಸಮಸ್ಯೆಗಳನ್ನು ಮೀರಿ ಶ್ರೇಷ್ಠ ರಾಷ್ಟ್ರವಾಗಿ ಹೊರಹೊಮ್ಮುವುದಕ್ಕೆ ನಮ್ಮ ಸಂವಿಧಾನ ಕೂಡ ಕಾರಣವೆಂದು ಹೇಳಿದರು.

ಸಂವಿಧಾನದ ಪ್ರಸ್ತಾವನೆಯನ್ನು ಕೆಲವರು "ಸಂವಿಧಾನದ ಒಡವೆ" ಎಂದು, "ರಾಜಕೀಯ ಜಾತಕ" ಎಂದು, "ಸಂವಿಧಾನದ ಹೃದಯ ಮತ್ತು ಆತ್ಮ" ಎಂದು, ಸಾರ್ವಭೌಮ ರಾಷ್ಟ್ರವಾದ ಭಾರತ "ಜಾತ್ಯಾತೀತ ರಾಷ್ಟ್ರ" ಎಂದು "ಜನರಿಂದ ಜನರಿಗಾಗಿ ಮತ್ತು ಜನರಿಗೋಸ್ಕರ" ಇರುವ ಹಾಗೂ ವಾಕ್ ಸ್ವಾತಂತ್ರ್ಯ, ಧರ್ಮ ಸ್ವಾತಂತ್ರ್ಯ, ನಂಬಿಕೆ ಮತ್ತು ಉಪಾಸನಾ ಸ್ವಾತಂತ್ರ್ಯಗಳಿಗೆ ಮುಕ್ತವಾದ ಅವಕಾಶ ಕಲ್ಪಿಸಿರುವುದರ ಬಗ್ಗೆ, ವ್ಯಕ್ತಿಗೆ ಘನತೆ ಮತ್ತು ಗೌರವ ಮುಖ್ಯವಾಗಿರುವುದರಿಂದ ಜಾತಿ ಅಥವಾ ಶ್ರೀಮಂತಿಕೆಯ ಆಧಾರದ ಮೇಲೆ ಭೇದಭಾವ ಇರಬಾರದು ಎನ್ನುವುದು ಪ್ರಸ್ತಾವನೆಯಲ್ಲಿ ಇದೆ ಎಂದು ಮಾಹಿತಿ ಕೊಟ್ಟರು.

ಪಾರ್ಲಿಮೆಂಟರಿ ಪದ್ಧತಿಯಲ್ಲಿ ಸಂಸತ್ತು ಪರಮಾಧಿಕಾರವನ್ನು ಹೊಂದಿದೆ ಎಂದು, ಸಂಯುಕ್ತ ಪದ್ಧತಿಯ ಆಧಾರದ ಮೇಲೆ ರಾಜ್ಯಮಟ್ಟದಲ್ಲಿ ಸರ್ಕಾರಗಳು ರಚನೆಯಾಗಲು ನಮ್ಮ ಸಂವಿಧಾನದಲ್ಲಿ ಅವಕಾಶವಿದೆ ಎಂದು ತಿಳಿಸಿದರು.

ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ ಇರಬಹುದು, ಅಖಿಲ ಭಾರತ ಸೇವೆಗಳು ಇರಬಹುದು, ಕೆಲವು ವರ್ಗಗಳಿಗೆ ವಿಶೇಷ ನಿಯಮಗಳನ್ನು ಸಂವಿಧಾನದ ಒಂದು ಭಾಗವನ್ನಾಗಿ ಮಾಡಿದ್ದೇವೆ; ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳ ವ್ಯವಸ್ಥೆಗೆ ಸಂಬಂಧಪಟ್ಟಂತೆ ಸಂವಿಧಾನವು ಅಧಿಕಾರದ ವ್ಯಾಖ್ಯೆಯನ್ನು ನೀಡುವುದಲ್ಲದೆ ಅವುಗಳ ಜವಾಬ್ದಾರಿಯನ್ನೂ

ಖಚಿತಗೊಳಸುತ್ತದೆ. ನಮ್ಮ ಹಕ್ಕುಗಳು ಮತ್ತು ಕರ್ತವ್ಯಗಳ ಬಗ್ಗೆ ಅನುಚ್ಛೇದ 51a ರಲ್ಲಿ ಕೊಡಲಾಗಿದೆ. ಒಂದು ಕಡೆ ಎಲ್ಲಾ ರೀತಿಯ ಸ್ವಾತಂತ್ರ್ಯ ಕೊಟ್ಟರೂ ಸಂವಿಧಾನದ ರೀತ್ಯ ಇತಿಮಿತಿಗಳು ಇರುತ್ತವೆ ಎಂದು ತಿಳಸಿದರು.

ಪ್ರಬುದ್ಧವಾದ ಸಂವಿಧಾನವನ್ನು ಅಳವಡಿಸಿಕೊಂಡಿರುವಂತಹ ದೇಶದವರಾದ ನಾವು ಜನಪ್ರತಿನಿಧಿಗಳು, ನ್ಯಾಯಾಂಗದವರು, ಕಾರ್ಯಾಂಗದವರು ಮತ್ತು ಪ್ರಜಾಪ್ರಭುತ್ವದ ನಾಲ್ಕನೇ ಅಂಗ ಎಂದು ಕರೆಸಿಕೊಳ್ಳುವ ಮಾಧ್ಯಮದವರನ್ನು ಸೇರಿಸಿ, ನಮ್ಮ ಜವಾಬ್ದಾರಿಗಳ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ತಿಳಸಿದರು.

ಇತ್ತೀಚಿನ ಚುನಾವಣಾ ವ್ಯವಸ್ಥೆ ಹೇಗಿದೆ ಎನ್ನುವುದರ ಬಗ್ಗೆ ಮಾತನಾಡುತ್ತಾ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಗ್ರಾಮ ಪಂಚಾಯಿತಿ, ನಗರಸಭೆ, ಪುರಸಭೆ, ವಿಧಾನಸಭೆ, ಲೋಕಸಭಾ ಚುನಾವಣೆಗಳು ಯಾವ ರೀತಿ ನಡೆಯುತ್ತದೆ, ಅಭ್ಯರ್ಥಿಗಳು ಯಾವ ರೀತಿ ಚುನಾವಣೆ ಎದುರಿಸುತ್ತಾರೆ ಎಂಬುದನ್ನು ತಿಳಸಿದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚರ್ಚೆಯಾಗದೆ ಪರಿಹಾರ ಸಿಗುವುದಿಲ್ಲವೆಂದು, ಅದರಲ್ಲೂ ಮೇಲ್ಮನೆಯ ಸದಸ್ಯರು ಹಿರಿಯರು ಮತ್ತು ಅನುಭವಿಗಳಾಗಿರುತ್ತಾರೆ, ಆದ್ದರಿಂದ ಅವರು ನೀತಿ ನಿರೂಪಣೆಗಳನ್ನು ರೂಪಿಸಿ ಸರಕಾರಕ್ಕೆ ಮತ್ತು ಕೆಳಮನೆಗೆ ಮಾರ್ಗದರ್ಶಕರಾಗಬೇಕು ಎಂದು ತಿಳಸಿದರು.

ಕರ್ನಾಟಕ ವಿಧಾನ ಪರಿಷತ್ತಿಗೆ ಶತಮಾನಗಳ ಇತಿಹಾಸವಿದೆ ಎಂದು, ಅದು ವೈಚಾರಿಕವಾಗಿ ಎತ್ತರದಲ್ಲಿದೆ ಎಂದು, ಒಂದು ವಿಷಯ ಬಂದರೆ ಹತ್ತು ಮುಖಗಳಂದ ವಿಶ್ಲೇಷಿಸುತ್ತದೆ ಎಂದು ಅದರ ಹೊಣೆಗಾರಿಕೆ ಬಗ್ಗೆ ಪ್ರಸ್ತಾಪ ಮಾಡಿದರು.

ಶಾಸಕಾಂಗ ಮಾತ್ರವಲ್ಲದೆ ನ್ಯಾಯಾಂಗ ಹೇಗೆ ಭ್ರಮನಿರಸನಗೊಳಸುವ ಸ್ಥಿತಿ ತಲುಪಿದೆ, ಕಾರ್ಯಾಂಗದವರು ತಮ್ಮ ಬೇಜವಾಬ್ದಾರಿತನದ ವರ್ತನೆ ತೋರಿಸುವುದು, ಈ ಪರಿಸ್ಥಿತಿಗೆ ಎಲ್ಲರೂ ಹೊಣೆಗಾರರಾಗಿದ್ದಾರೆ. ಹಾಗಾಗಿ ಈ ಕುರಿತು ಆತ್ಮಾವಲೋಕನ ಸಭೆಯನ್ನು ಏರ್ಪಡಿಸಲಾಗಿತ್ತು. ಸಂಸದೀಯ ವ್ಯವಸ್ಥೆಗಳ ಮೌಲ್ಯ ಕಾಪಾಡಿಕೊಳ್ಳುವ ಬಗ್ಗೆ, ಚುನಾವಣಾ ಸುಧಾರಣೆ ವ್ಯವಸ್ಥೆಯ ಬಗ್ಗೆ ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ಚರ್ಚಿಸಬೇಕೆಂದು, ಆ ಕುರಿತು ಸದನದಲ್ಲಿ ಚರ್ಚಿಸಲು ಎರಡು ದಿನಗಳ ಕಾಲಾವಕಾಶ ಮಾಡಿಕೊಡಬೇಕೆಂದು ಮಾನ್ಯ ಸಭಾಪತಿಯವರನ್ನು ಕೇಳಕೊಂಡರು.

ಮತದಾರರ ಆಶಯಕ್ಕೆ ತಕ್ಕಂತೆ ಸರಕಾರದ ಆಡಳಿತ ವ್ಯವಸ್ಥೆ ಇರಬೇಕು, ಸರಕಾರದ ಯೋಜನೆಯ ಫಲ ಅರ್ಹರಿಗೆ ಕಾಲಮಿತಿಯೊಳಗೆ ಸಿಗುವಂತಾಗಬೇಕು, ಹಾಗೆ ಮಾಡದೇ ಇದ್ದರೆ ಸರ್ಕಾರದ ಮೇಲೆ ಜನ ವಿಶ್ವಾಸ ಕಳೆದುಕೊಳ್ಳುತ್ತಾರೆ ಎಂದು ತಿಳಿಸಿದರು. ಪಕ್ಷದ ಆಂತರಿಕ ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತಾ, ಒಬ್ಬ ಕಾರ್ಯಕರ್ತನನ್ನು ಅಥವಾ ಪದಾಧಿಕಾರಿಯನ್ನು ನಾಯಕನನ್ನಾಗಿ ಸಿದ್ಧಪಡಿಸಬೇಕು, ಆ ನಿಟ್ಟಿನಲ್ಲಿ ಅವನಿಗೆ ತರಬೇತಿ ಕೊಡಬೇಕು, ಪಕ್ಷದಲ್ಲಿ ಅವರನ್ನು ಶಿಸ್ತಿನಿಂದ ಬೆಳೆಸಿದರೆ ಒಳ್ಳೆಯ ಜನ ಪ್ರತಿನಿಧಿ ಆಗುವ ಸಾಧ್ಯತೆ ಇರುತ್ತದೆ ಎಂದು ತಿಳಿಸಿದರು .

ಆಯ್ಕೆಯಾಗುವ ಜನಪ್ರತಿನಿಧಿಗಳು ಒಂದು ಕ್ಷೇತ್ರಕ್ಕೆ, ಜಾತಿಗೆ ಮಾತ್ರ ಎಂದು ಅಂದುಕೊಳ್ಳದೆ ಸಮಸ್ತ ಜನತೆಯ ಪರವಾಗಿರಬೇಕು ಎನ್ನುವ ಭಾವನೆ ಇಟ್ಟುಕೊಳ್ಳಬೇಕು, ಈ ವ್ಯವಸ್ಥೆಯನ್ನು ಮುನ್ನಡೆಸುವುದಕ್ಕೆ ತನ್ನ ಜವಾಬ್ದಾರಿ ಮುಖ್ಯವಾಗಿರುತ್ತದೆ ಎಂಬುದನ್ನು ಅರಿತಿರಬೇಕು ಎಂದು ತಿಳಿಸಿದರು.

ಚಹಾ ಮಾರುತ್ತಿದ್ದ ನರೇಂದ್ರ ಮೋದಿ ಅವರಂಥವರು ದೇಶದ ಪ್ರಧಾನಿಯಾಗುತ್ತಾರೆ, ಸಾಮಾನ್ಯರಲ್ಲಿ ಸಾಮಾನ್ಯರಾಗಿ ಇರುವಂಥವರು ರಾಷ್ಟ್ರದ ಅಧ್ಯಕ್ಷರಾಗುತ್ತಾರೆ ಎಂದರೆ ಅದು ನಮ್ಮ ಸಂವಿಧಾನದ ಕೊಡುಗೆಯಾಗಿದೆ. ಇಂತಹ ಶ್ರೇಷ್ಠ ಸಂವಿಧಾನದಲ್ಲಿ ಬೆಳೆಯುತ್ತಿರುವ ನಮಗೆ ನಮ್ಮ ವ್ಯಕ್ತಿತ್ವವನ್ನು ಉತ್ತಮಪಡಿಸಿಕೊಳ್ಳುವುದಕ್ಕೆ ಅವಕಾಶವಿರುತ್ತದೆ, ಆ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ರಾಜ್ಯದಲ್ಲಿ 224 ಜನ ವಿಧಾನಸಭಾ ಸದಸ್ಯರು, 75 ಜನ ವಿಧಾನ ಪರಿಷತ್ತಿನ ಸದಸ್ಯರು ಇದ್ದೇವೆ. ಒಟ್ಟು ಆರೂವರೆ ಕೋಟಿ ಜನರಲ್ಲಿ ನಾವು ಆಯ್ಕೆಯಾಗಿ ಬಂದಿದ್ದೇವೆ. ನಾವು ಮಾಡಬೇಕಾದಂತಹ ಕೆಲಸವನ್ನು ಬೇರೆ ಯಾರೂ ಮಾಡುವುದಕ್ಕೆ ಆಗುವುದಿಲ್ಲ. ಯಾವುದೇ ಒಂದು ಕಾನೂನು ಅಂಗೀಕಾರವಾಗಬೇಕಾದರೆ ಅದು ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಪಾಸಾಗಬೇಕು. ಹೈಕೋರ್ಟ್ ಅಥವಾ ಸುಪ್ರೀಂಕೋರ್ಟ್ ಯಾವುದಾದರೂ ವಿಷಯ ಹೇಳಿದರೂ ಅದು ಕಾನೂನು ಆಗುವುದಿಲ್ಲ. ಕಾಯಿದೆಗಳನ್ನು ಮಾಡುವ ಅವಕಾಶ ನಮಗೆ ಸಿಕ್ಕಿದೆ. ಬಜೆಟನ್ನು ಕೂಡ

ನಾವೇ ಅಂಗೀಕಾರ ಮಾಡಬೇಕಾಗುತ್ತದೆ. ಆಡಳಿತವನ್ನು ಸುಗಮವಾಗಿ, ಜನಪರವಾಗಿ ರೂಪಿಸಲು ಬೇಕಾದಂತಹ ಕೆಲಸವನ್ನು ಮಾಡುವುದು ಸಹ ನಮ್ಮದೇ ಜವಾಬ್ದಾರಿಯಾಗಿರುತ್ತದೆ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ನಡೆದ ಕೆಲವು ಘಟನೆಗಳಿಂದ ವಿಧಾನಪರಿಷತ್ತು ಇರಬೇಕೋ ಬೇಡವೋ ಎಂದು ಸಮಾಜದಲ್ಲಿ ಚರ್ಚೆ ಶುರುವಾಗಿದ್ದು, ನಮ್ಮ-ನಿಮ್ಮ ಪ್ರಾಮುಖ್ಯತೆಯ ಬಗ್ಗೆ ಸಮಾಜ ಚರ್ಚಿಸುವಂತಹ ಸ್ಥಿತಿಯನ್ನು ನಾವೇ ತಂದುಕೊಟ್ಟಿರುವುದು ವಿಷಾದನೀಯ; ಈ ರೀತಿ ಆಗಬಾರದು ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಕೊನೆಯದಾಗಿ, "ಎಷ್ಟೇ ಶ್ರೇಷ್ಠ ಸಂವಿಧಾನವಾದರೂ ಅನುಷ್ಠಾನಗೊಳಿಸುವ ವ್ಯಕ್ತಿಗಳು ಅದರಲ್ಲಿ ವಿಫಲವಾದರೆ ಸಂವಿಧಾನವನ್ನು ದೂಷಿಸಬಾರದು; ಅದನ್ನು ಅನುಷ್ಠಾನಗೊಳಿಸುವ ವ್ಯಕ್ತಿಗಳ ದೋಷ-ದೌರ್ಬಲ್ಯ ಎಂದು ಭಾವಿಸಿ ಅದನ್ನು ಸರಿ ಮಾಡಬೇಕು" ಎಂದು ಡಾ: ಬಿ.ಆರ್. ಅಂಬೇಡ್ಕರ್ ಅವರು ಹೇಳಿದ ಮಾತುಗಳನ್ನು ಪ್ರಸ್ತಾಪಿಸುತ್ತಾ **ಮಾನ್ಯ ಸಭಾಧ್ಯಕ್ಷರು** ತಮ್ಮ ಮಾತುಗಳನ್ನು ಮುಗಿಸಿದರು.

# ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ ನಿರ್ವಹಿಸುವಂತಹ ಕಾರ್ಯವೈಖರಿ

**ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರಾದ ಶ್ರೀಮತಿ ಶಾಲಿನಿ ರಜನೀಶ್ ಅವರು** ವಿವಿಧ ಯೋಜನೆಗಳ ಸಂಬಂಧ ನಿರ್ವಹಿಸುವಂತಹ ಕಾರ್ಯವೈಖರಿಯನ್ನು ವಿವರಿಸಿದರು.

**ಶ್ರೀಮತಿ ಶಾಲಿನಿ ರಜನೀಶ್ ಅವರು** ಮಾತನಾಡುತ್ತಾ, ಯೋಜನಾ ಇಲಾಖೆಯು ಫಲಿತಾಂಶ ಆಧಾರಿತ ಯೋಜನೆಯನ್ನು ತಯಾರಿಸಲು ಹಾಗೂ ಆಯವ್ಯಯವನ್ನು ತಯಾರಿಸಲು ನೀತಿ ಆಯೋಗದ ಮಾರ್ಗದರ್ಶನದಲ್ಲಿ ಏನೇನು ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎನ್ನುವ ವಿಷಯವನ್ನು ತಿಳಿಸಿದರು. "ಅವಲೋಕನ" ಎನ್ನುವ ತಂತ್ರಾಂಶದ ಮೂಲಕ ಜಿಲ್ಲಾ ಪಂಚಾಯತ್ ಯೋಜನೆಗಳಲ್ಲಿ ಒಟ್ಟು ಎಷ್ಟು ಆಯವ್ಯಯ ಇದೆ, ಎಷ್ಟು ಖರ್ಚಾಗಿದೆ, ಎಷ್ಟು ಬಾಕಿ ಇದೆ ಎನ್ನುವುದರ ಬಗ್ಗೆ ಒಂದು ಪಕ್ಷಿನೋಟ ಕಾಣಬಹುದು ಎಂದು ತಿಳಿಸಿದರು.

ಯೋಜನಾ ಇಲಾಖೆಯಿಂದ ಮಾಡಲಾಗುವ ಮತ್ತೊಂದು ಮುಖ್ಯವಾದ ಕೆಲಸವೆಂದರೆ "ಮೌಲ್ಯಮಾಪನ" ವೆಂದು, ಆಯವ್ಯಯದಲ್ಲಿ ಒದಗಿಸಿರುವ ಯಾವುದೇ ಯೋಜನೆ ಇದ್ದರೂ ಅದರ ಮೌಲ್ಯಮಾಪನ ಆಗಬೇಕು; ಅದರಿಂದ ಉದ್ದೇಶ ಈಡೇರಿದೆಯೇ ಇಲ್ಲವೇ ಎಂದು ನಾವು ವರದಿಯನ್ನು ಕೊಡುತ್ತೇವೆ, ಆ ವರದಿಯನ್ನು ವೆಬ್‌ಸೈಟ್‌ನಲ್ಲಿ ಹಾಕುತ್ತೇವೆ; ಅದರಲ್ಲಿ ಏನಾದರೂ ಬದಲಾವಣೆ ಇದ್ದರೆ ಇಲಾಖೆಯಿಂದಲೇ ಆ ಬದಲಾವಣೆಯನ್ನು ಮಾಡಲಾಗುತ್ತದೆ ಎಂಬ ವಿಷಯವನ್ನು ತಿಳಿಸಿದರು.

ಇಡೀ ವಿಶ್ವದಲ್ಲೇ ಸಮಾನತೆ ಬರಬೇಕು ಎಂದು, 193 ದೇಶಗಳು 17 ಗುರಿಗಳನ್ನು ಸಾಧಿಸಬೇಕು ಎಂದೇನು ನಿಗದಿಮಾಡಲಾಗಿದೆಯೋ, ಆ ದಿಸೆಯಲ್ಲಿ ಕೇಂದ್ರ ಸರ್ಕಾರದಿಂದ ಸ್ಥಾಪಿತವಾಗಿರುವ ನೀತಿ ಆಯೋಗವು ಸುಸ್ಥಿರ ಅಭಿವೃದ್ಧಿಯ ಗುರಿಗಳನ್ನು ನಿಗದಿಪಡಿಸಿರುವ ಅಂಶಗಳ ಬಗ್ಗೆ ತಿಳಿಸಿದರು.

ನಮ್ಮ ರಾಷ್ಟ್ರದ ನೀತಿ ಆಯೋಗವು ಪ್ರತಿ ವರ್ಷ ಕೊಡುವ rank ನ ಪ್ರಕಾರ ಕರ್ನಾಟಕ ಮೂರನೆಯ ಸ್ಥಾನದಲ್ಲಿದೆ ಎಂದು, ಶೇಕಡಾ 17 ರಷ್ಟು ಜನ ಏನು ಬಡತನದಲ್ಲಿದ್ದಾರೋ ಆ ಸ್ಥಿತಿಯನ್ನು

ದಾಟಿ ಬಡತನವನ್ನು ನಿರ್ಮೂಲನೆ ಮಾಡಲು umbrella scheme ರೂಪಿಸಬೇಕು; ಅದೇ ರೀತಿ, ಅಪೌಷ್ಟಿಕತೆ ಸರಿಪಡಿಸುವ ದೃಷ್ಟಿಯಲ್ಲಿ "ಆಯುಷ್ಮಾನ್" ನಂತಹ ಯೋಜನೆಗಳನ್ನು ಬಳಸಿಕೊಳ್ಳಲು ಸೂಚಿಸಿದರು. ಹೆಚ್ಚು ಬಡತನವಿರುವ ಕಲ್ಯಾಣ ಕರ್ನಾಟಕದ ಭಾಗದಲ್ಲಿ ಬಡತನ ನಿರ್ಮೂಲನೆ ಮಾಡಲು ಯೋಜನೆಗಳನ್ನು focus ಮಾಡಬೇಕೆಂದು, ಮಕ್ಕಳಲ್ಲಿನ ಪೌಷ್ಟಿಕಾಂಶ, ಮಕ್ಕಳ ಮರಣ, ಹೆಣ್ಣು ಮಕ್ಕಳ ಮರಣ, ಅವರ ಆರೋಗ್ಯ, ಶೌಚಾಲಯ, ಕುಡಿಯುವ ನೀರು, ವಸತಿ ಇವೆಲ್ಲ ಸೇರಿ 10 ಅಂಶಗಳನ್ನು ಗಣನೆಗೆ ತೆಗೆದುಕೊಂಡು ಬಡತನದ ವ್ಯಾಖ್ಯಾನವನ್ನು ಮಾಡಲಾಗುತ್ತದೆ; ಉತ್ತಮ ಕೃಷಿ ಸುಧಾರಣೆಯ ಕ್ರಮಗಳನ್ನು ತೆಗೆದುಕೊಂಡು, ಒಟ್ಟಾರೆ ಉತ್ಪಾದಕತೆ ಮತ್ತು ಉತ್ಪಾದನೆಯನ್ನು ತಲುಪಿದಾಗ ರಾಜ್ಯವನ್ನು ಹಸಿವು ಮುಕ್ತವನ್ನಾಗಿ ಮಾಡಬಹುದು ಎಂಬುದನ್ನು ತಿಳಿಸಿಕೊಟ್ಟರು.

ಮಕ್ಕಳ ಕಲಿಕಾ ವಿಷಯಕ್ಕೆ ಸಂಬಂಧಪಟ್ಟಂತೆ, 22 ಜಿಲ್ಲೆಗಳನ್ನು ಬಿಟ್ಟು, ಕಡಿಮೆ ಕಲಿಕಾ ಫಲಿತಾಂಶ ಅಥವಾ ಹೆಚ್ಚು dropout ಎಲ್ಲಿದೆಯೋ ಅಲ್ಲಿ ಹೆಚ್ಚಿನ ಫೋಕಸ್ ಮಾಡಲು ಶಿಕ್ಷಣ ಇಲಾಖೆಗೆ ಮಾಹಿತಿ ಕೊಟ್ಟಿರುವುದಾಗಿ ತಿಳಿಸಿದರು. ಲಿಂಗ ಅಸಮಾನತೆ ಎಂದು ಬಂದಾಗ, ಹೆಣ್ಣು ಮಕ್ಕಳ ಆಸ್ತಿ ಹಕ್ಕು, ಶಿಕ್ಷಣ, ಆರೋಗ್ಯ ಇವುಗಳನ್ನು ಪರಿಗಣಿಸಿ, ಸರಿಪಡಿಸುವ ನಿಟ್ಟಿನಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಜೊತೆ ಇತರ ಇಲಾಖೆಗಳವರೂ ಬದಲಾವಣೆ ತರುವ ಪ್ರಯತ್ನ ಮಾಡಬೇಕೆಂದು ತಿಳಿಸಿಕೊಟ್ಟರು.

"ಆಕಾಂಕ್ಷ" ತಂತ್ರಾಂಶದ ಬಗ್ಗೆ ವಿವರಿಸುತ್ತಾ, ಇದರಲ್ಲಿ ಸಿಎಸ್‌ಆರ್ ಮೂಲಕ, ಆಯವ್ಯಯದಲ್ಲಿ ಯಾವ ಇಲಾಖೆಗೆ ಎಷ್ಟು ಹಣ ಮೀಸಲಿಡಲಾಗಿದೆ ಎಂದು ತಿಳಿಯಲು ಮತ್ತು ವಿನೂತನ ಯೋಜನೆಗಳಿಗೆ ಹೆಚ್ಚಿನ ಹಣವನ್ನು ಬಳಸುವ ನಿಟ್ಟಿನಲ್ಲಿ ಒಂದು single portal ಮಾಡಿದ್ದೇವೆ. ಇದರಲ್ಲಿ, 2 ಸಾವಿರ Corporate companies ಗಳ ಮತ್ತು ಸುಮಾರು 5 ಸಾವಿರ ಎನ್.ಜಿ.ಓ ಗಳ ವಿವರಗಳನ್ನು ತಾಲ್ಲೂಕು ಮಟ್ಟದ ಎಲ್ಲಾ ಇಲಾಖೆಗಳ ಅಧಿಕಾರಿಗಳಿಗೆ ಲಿಂಕ್ ಮಾಡಿ ಕೊಡಲಾಗಿರುತ್ತದೆ ಎಂದು ತಿಳಿಸಿದರು. ಯಾವುದೇ ಒಂದು ಇಲಾಖೆಗೆ ಸಂಬಂಧಪಟ್ಟಂತೆ, ಅದರ ಅಡಿ ಬರುವ ಸಂಸ್ಥೆಗಳು ತಮ್ಮ ಉದ್ದೇಶಿತ ಬೇಡಿಕೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿ ಹಾಕಿದಾಗ, ಆಸಕ್ತಿ ಇರುವ ಕಾರ್ಪೋರೇಟರ್‌ಗಳು ಅದಕ್ಕೆ ಸ್ಪಂದಿಸಿ, ಗೈಡ್‌ಲೈನ್ಸ್ ಪ್ರಕಾರ ಒಟ್ಟಿಗೆ ಆನ್‌ಲೈನ್ ಮೂಲಕ MoU ಮಾಡಿಕೊಂಡು, ಆ ಸಂಬಂಧ ಹಣ ಬಿಡುಗಡೆ ಮಾಡಲಾಗುತ್ತದೆ ಮತ್ತು ನಿರ್ದಿಷ್ಟ ಕೆಲಸ ಕಾರ್ಯಗತ ಆಗುತ್ತದೆ. ಅದರ ಫೋಟೋ,

ವಿಡಿಯೋ, ಮೊತ್ತ, ಎಲ್ಲವೂ ಆನ್‌ಲೈನ್‌ನಲ್ಲಿ ಇರುತ್ತದೆ ಎಂದು ತಿಳಿಸಿದರು. ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸಂಬಂಧಪಟ್ಟ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ Akanksh Portal ಪಾಸ್‌ವರ್ಡ್ ನೀಡಲಾಗಿರುತ್ತದೆ ಎಂದು, ಅದನ್ನು ಬಳಸಿದಾಗ ಸಿಎಸ್‌ಆರ್ ಪಾರ್ಟ್ನರ್‌ಗಳನ್ನು ಒಂದೇ ಕೋಟಾದಿಂದ ಆಯ್ಕೆ ಮಾಡಬಹುದು ಮತ್ತು ಫಾಲೋ-ಅಪ್ ಮಾಡಬಹುದೆಂಬ ಮಾಹಿತಿ ಕೊಟ್ಟರು.

ಅಪರ ಮುಖ್ಯ ಕಾರ್ಯದರ್ಶಿಯವರು ತಮ್ಮ ಮಾತುಗಳನ್ನು ಮುಂದುವರೆಸುತ್ತಾ, ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಪಟ್ಟಂತೆ "ಗಾಂಧಿ ಸಾಕ್ಷಿ ತಂತ್ರಾಂಶ"ದ ಕಾರ್ಯವೈಖರಿ ಬಗ್ಗೆ ಮಾಹಿತಿ ಕೊಟ್ಟರು. ಶಾಸಕರು ತಮ್ಮ ಪ್ರಸ್ತಾವನೆಯನ್ನು ಕೊಟ್ಟಾಗ, ಅದರ ಜೊತೆ ನಮೂದು ಮಾಡಿರಬಹುದಾದ ಮೊತ್ತದ ವಿವರ ಕೂಡ ಡಿ.ಸಿ. ಕಚೇರಿಯಲ್ಲಿ ಎಂಟರ್ ಆಗುತ್ತದೆ. ಅಲ್ಲದೇ ಅದು PRED ಮತ್ತು ಹಳ್ಳಿಯ ಹೆಸರನ್ನು ನಮೂದು ಮಾಡಿದ್ದರೆ, low-down ಯಾವ ಎಇಇ ಇರುತ್ತಾರೋ ಅವರಿಗೂ ಮಾಹಿತಿ ಹೋಗುತ್ತದೆ. ಅವರು ಸ್ಥಳ ಪರಿಶೀಲನೆ ಮಾಡಿ, ಲೈನ್ ಎಸ್ಟಿಮೇಟ್ ಮಾಡಿ ಜಿಲ್ಲಾಧಿಕಾರಿಯವರಿಗೆ ಕಳುಹಿಸಿದಾಗ ಅವರು ಆಡಳಿತಾತ್ಮಕ ಅನುಮೋದನೆ ನೀಡುತ್ತಾರೆ. ಕೆಲಸ ಮುಗಿದ ಮೇಲೆ ಅದರ ಒಂದು ಫೋಟೋವನ್ನು ಅಪ್‌ಲೋಡ್ ಆದಮೇಲೆ ಡಿ.ಸಿ. ಅಥವಾ ಎ.ಸಿ. ಕಚೇರಿಯಿಂದ ಉಳಿದ ಮೊತ್ತ ಪಾವತಿ ಆಗುತ್ತದೆ ಎಂಬ ವಿವರಗಳನ್ನು ಸಭೆಗೆ ತಿಳಿಸಿಕೊಟ್ಟರು.

ಹಿಂದಿನ ಕೆಲವು ವರ್ಷಗಳಲ್ಲಿ ಅನುದಾನ ಕೊಟ್ಟಿಲ್ಲ ಮತ್ತು ಅದನ್ನು ಖರ್ಚು ಮಾಡುತ್ತಿಲ್ಲ; ಪಿ.ಡಿ. ಅಕೌಂಟ್‌ನಲ್ಲೇ ಹಣ ಇದೆ ಎನ್ನುವ ಮಾತುಗಳು ಶಾಸಕರ ಕಡೆಯಿಂದ ಬಂದಾಗ, ಮಾನ್ಯ ಸಭಾಪತಿಯವರ ಮುಂದಾಳತ್ವದಲ್ಲಿ ಆರ್ಥಿಕ ಇಲಾಖೆಯ ಜೊತೆ ಸಭೆ ನಡೆಸಲಾಗಿ, ಹಣ ಬಿಡುಗಡೆ ಮಾಡಲು ಒಪ್ಪಿದರಲ್ಲದೇ, ಕೋವಿಡ್-19ರ ಕಾರಣದಿಂದ ಎರಡು ವರ್ಷಗಳನ್ನು ಬಿಟ್ಟರೆ ಪ್ರತಿಯೊಬ್ಬ ಶಾಸಕರಿಗೆ 2 ಕೋಟಿ ರೂ. ಅನುದಾನ ಕೊಡುವುದಕ್ಕೆ ಬದ್ಧರಿದ್ದೇವೆ; ಈಗ ಯಾವುದೇ ಕಂತುಗಳನ್ನು ಸಹ ಕಡಿತ ಮಾಡುತ್ತಿಲ್ಲ; ಹಣವನ್ನು ಖರ್ಚು ಮಾಡಿದರೆ ಅದಕ್ಕೆ ಹೆಚ್ಚುವರಿ ಫಂಡ್ ಕೊಡುತ್ತೇವೆ ಎಂದು ಆರ್ಥಿಕ ಇಲಾಖೆಯವರು ಲಿಖಿತವಾಗಿ ನೀಡಿರುವುದರ ಬಗ್ಗೆ ಮಾಹಿತಿ ಕೊಟ್ಟರು.

ನೀತಿ ಆಯೋಗದವರು, "**ಮುನ್ನೋಟ : 2020-30**" ಎನ್ನುವ ಪುಸ್ತಕ ತಂದಿದ್ದು, ಸದರಿ ಅವಧಿಯಲ್ಲಿ ಪ್ರತಿಯೊಂದು ಕ್ಷೇತ್ರದ ಯೋಜನೆಯನ್ನು ವರ್ಷ-ವರ್ಷ ಯಾವರೀತಿ ಸಾಧನೆ ಮಾಡಬೇಕು

ಎಂಬ ವಿವರ ಅದರಲ್ಲಿ ಕೊಟ್ಟಿದ್ದಾರೆ. ಈ ಗುರಿಯನ್ನು ಮುಟ್ಟಿದಾಗ ಮಾತ್ರ ಫಲಿತಾಂಶ ಆಧಾರಿತ ಅಡಳಿತವನ್ನು ನೀಡಬಹುದು ಎನ್ನುವ ಅಂಶವನ್ನು ಶಿಬಿರಾರ್ಥಿಗಳಿಗೆ ತಿಳಿಸಿದರು.

ಕೆಲವು ಶಾಸಕರುಗಳು ತಮ್ಮ ಪ್ರಸ್ತಾವನೆಯನ್ನು ಕಳುಹಿಸದೇ ಇದ್ದಾಗ ಅಥವಾ ಶಾಸಕರು ತಮ್ಮ ಪ್ರಸ್ತಾವನೆಯನ್ನು ಮಾರ್ಗಸೂಚಿಯ ಪ್ರಕಾರ ಜೂನ್ ಮತ್ತು ಜುಲೈ ತಿಂಗಳ ಒಳಗೆ ಕಳುಹಿಸಿ, ಆಗಸ್ಟ್ ತಿಂಗಳಿನಲ್ಲಿ ಕೆಲಸ ಪೂರ್ಣ ಆಗಬೇಕೆಂಬ ನಿಯಮವಿದ್ದ ಹಿನ್ನೆಲೆಯಲ್ಲಿ ಬಿಡುಗಡೆಯಾದ ಹಣ ಪಿ.ಡಿ. ಖಾತೆಯಲ್ಲಿ ಉಳಿಯುತ್ತಿತ್ತು. ಆದರೆ ಈ ವರ್ಷದಿಂದ ಈ ನೀತಿಯನ್ನು ಬದಲಾವಣೆ ಮಾಡಿ, ಹಣವನ್ನು ಶಾಸಕವಾರು ಹಂಚದೇ, ಆಯಾ ಜಿಲ್ಲೆಗಳಿಗೆ ಕೊಡಲಾಗುತ್ತದೆ. ಜಿಲ್ಲೆಯಲ್ಲಿ ಎಂ.ಎಲ್.ಎ ಮತ್ತು ಎಂ.ಎಲ್.ಸಿ ಸೇರಿ 10 ಜನ ಇದ್ದರೆ ತಲಾ 2 ಕೋಟಿ ರೂ.ಗಳಂತೆ ಆ ಜಿಲ್ಲೆಗೆ 20 ಕೋಟಿ ರೂ.ಗಳನ್ನು ನೀಡಲಾಗುತ್ತದೆ. ಆಗ 2 ಕೋಟಿ ರೂ.ಗಳನ್ನು ಶಾಸಕರು ಯಾವುದೇ ಅಡಚಣೆ ಇಲ್ಲದೇ ಉಪಯೋಗಿಸಬಹುದೆಂದು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಆರ್ಥಿಕ ಇಲಾಖೆಯಿಂದ ನಿರ್ದೇಶನ ನೀಡಲಾಗಿದೆ ಎನ್ನುವ ಮಾಹಿತಿ ಕೊಡುತ್ತಾ ಮಾನ್ಯ ಶಾಲಿನಿ ರಜನೀಶ್‌ರವರು ವಿರಮಿಸಿದರು.

**(ಈ ಹಂತದಲ್ಲಿ ಯೋಜನೆ, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯು ಪ್ರದರ್ಶಿಸಿದ Power Point Presentation ನ ಉಪನ್ಯಾಸವು ಮಧ್ಯಾಹ್ನ 12 ಗಂಟೆ 45 ನಿಮಿಷಕ್ಕೆ ಮುಕ್ತಾಯಗೊಂಡಿತು)**

## ಸದನದಲ್ಲಿ ಶಾಸಕರ ಜವಾಬ್ದಾರಿಗಳು, ಕರ್ತವ್ಯಗಳು ಮತ್ತು ಹಕ್ಕುಗಳು, ಶಾಸನ ಸಭೆಯ ಪರಿಭಾಷೆ, ಪದಬಳಕೆ, ಸಕಾರಾತ್ಮಕ ಧೋರಣೆಗಳು

ಪ್ರಾರಂಭದಲ್ಲಿ, ಕಾರ್ಯಕ್ರಮದ ರೂವಾರಿಗಳಾದಂತಹ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರಿಗೆ, ವಿಧಾನ ಪರಿಷತ್ತಿನ ಕಾರ್ಯದರ್ಶಿಯವರಿಗೆ, ಸಹೋದ್ಯೋಗಿಗಳನ್ನು, ಮಾಧ್ಯಮ ಮಿತ್ರರನ್ನು ಹಾಗೂ ನೂತನವಾಗಿ ವಿಧಾನ ಪರಿಷತ್ತಿಗೆ ಆಯ್ಕೆಯಾದಂತಹ ಶಾಸಕರುಗಳಿಗೆ **ಮಾನ್ಯ ಶಾಸಕರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರು** ಅಭಿನಂದನೆ ಸಲ್ಲಿಸಿದರು.

ಅಧಿವೇಶನದಲ್ಲಿ ಪಾಲ್ಗೊಳ್ಳುವ ನೂತನ ಸದಸ್ಯರಿಗೆ ತಾಲೀಮಿನ ಅವಶ್ಯಕತೆ ಇರುತ್ತದೆ ಎಂದು 2349 ವರ್ಷಗಳ ಹಿಂದೆ, ರಾಜಕೀಯ ವಿಜ್ಞಾನದ ಪಿತಾಮಹ ಎಂದು ಹೇಳುವಂತಹ ಗ್ರೀಸ್ ದೇಶದ ಅರಿಸ್ಟಾಟಲ್‌ರವರು "ದಿ ಪಾಲಿಟಿಕ್ಸ್" ಎಂಬ ಕೃತಿಯನ್ನು ಬರೆದಿರುವ ಬಗ್ಗೆಯೂ, ಆತನ ಗುರುವಾಗಿದ್ದ ಪ್ಲೇಟೋ, "ದಿ ರಿಪಬ್ಲಿಕ್" ಕೃತಿಯನ್ನು ರಚಿಸಿ ಆದರ್ಶ ರಾಜ್ಯ ಹೇಗಿರಬೇಕು ಎಂದು ಹೇಳಿರುವ ಬಗ್ಗೆ ಶಿಬಿರಾರ್ಥಿಗಳಿಗೆ ತಿಳಿಸಿಕೊಟ್ಟರು.

ಇವತ್ತಿನ ದಿವಸಗಳಲ್ಲಿ ಅಧ್ಯಕ್ಷೀಯ ಮಾದರಿ ಮತ್ತು ಸಂಸದೀಯ ಮಾದರಿ ಎನ್ನುವಂತಹ 2 ಪ್ರಜಾಪ್ರಭುತ್ವ ವ್ಯವಸ್ಥೆಗಳಿದ್ದು, ನಾವು ಸಂಸದೀಯ ಮಾದರಿಯ ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಿದ್ದೇವೆ. ಸಂಸದೀಯ ವ್ಯವಸ್ಥೆಯಲ್ಲಿ ಸಂಸತ್ತೇ ಶ್ರೇಷ್ಠವೆಂದು ಮತ್ತು ರಾಜ್ಯದ ಮಟ್ಟದಲ್ಲಿ ವಿಧಾನ ಮಂಡಲವೇ ಶ್ರೇಷ್ಠವಾಗಿದ್ದು ತನ್ನದೇ ಆದ ಘನತೆ, ಗೌರವ ಹೊಂದಿರುವುದರ ಬಗ್ಗೆ ತಿಳಿಸಿದರು. ಕೇಂದ್ರದಲ್ಲಿ ರಾಜ್ಯಸಭೆ ಮತ್ತು ರಾಜ್ಯಗಳಲ್ಲಿ ವಿಧಾನ ಪರಿಷತ್ತು ಮೇಲ್ಮನೆಗಳಾಗಿದ್ದು ಶಾಶ್ವತ ಸದನಗಳಾಗಿರುತ್ತವೆ; ಪ್ರತಿ ಎರಡು ವರ್ಷಕ್ಕೊಮ್ಮೆ ಮೂರನೇ ಒಂದು ಭಾಗದಷ್ಟು ಸದಸ್ಯರನ್ನು ನಿರಂತರವಾಗಿ ಆಯ್ಕೆ ಮಾಡುವುದರಿಂದ ವಿಧಾನ ಪರಿಷತ್ತು ನಿರಂತರವಾಗಿ, ಶಾಶ್ವತವಾಗಿ ನಡೆಯುತ್ತದೆ ಎಂಬ ಬಗ್ಗೆ ಮಾಹಿತಿ ಕೊಟ್ಟರು.

ಇಡೀ ದೇಶದಲ್ಲಿ ಪ್ರಸ್ತುತ 6 ರಾಜ್ಯಗಳಲ್ಲಿ ಮಾತ್ರ ವಿಧಾನ ಪರಿಷತ್ತು ಇದ್ದು, ಇವು ಸಂವಿಧಾನದ 169ನೇ ವಿಧಿಯ ಅಡಿಯಲ್ಲಿ ಅಸ್ತಿತ್ವಕ್ಕೆ ಬರುತ್ತದೆ. ವಿಧಾನ ಮಂಡಲದಲ್ಲಿ ವಿಧಾನ ಪರಿಷತ್ತು ಬೇಕು ಎಂದು ನಿರ್ಣಯ ಮಾಡಿದ ಮೇಲೆ, ಸಂಸತ್ತಿನ ಎರಡು ಸದನಗಳಲ್ಲಿಯೂ ಸಹ ಅದು ಅಂಗೀಕಾರ

ಆಗಬೇಕಾಗುತ್ತದೆ. ಸಂವಿಧಾನವೇ ರಾಜ್ಯಸಭೆಯ ಅಸ್ತಿತ್ವಕ್ಕೆ ಅವಕಾಶ ಮಾಡಿಕೊಟ್ಟಿದ್ದು, ವಿಧಾನ ಪರಿಷತ್ತು ಎನ್ನುವುದು ವಿಧಾನಸಭೆಯ ಸೃಷ್ಟಿ ಆಗಿರುತ್ತದೆ ಎಂಬ ಮೂಲ ವಿಚಾರವನ್ನು ಶಿಬಿರಾರ್ಥಿಗಳಿಗೆ ತಿಳಿಸಿಕೊಟ್ಟರು.

ಕರ್ನಾಟಕ ವಿಧಾನ ಪರಿಷತ್ತಿಗೆ ಸಂಬಂಧಪಟ್ಟಂತೆ "ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳು" ಈ ಪುಸ್ತಕ ಸಂವಿಧಾನದ ೨೦೮ (i) ನೇ ಅನುಚ್ಛೇದದ ಪ್ರಕಾರ ಮುದ್ರಣ ಆಗಿದ್ದು, ಇದರಲ್ಲಿ ೨೭ ಅಧ್ಯಾಯಗಳಿದ್ದು, ೩೫೦ ನಿಯಮಗಳಿರುತ್ತವೆ ಎಂಬ ಮಾಹಿತಿ ಕೊಟ್ಟರು.

Rules of Procedure and Conduct of Business in the Karnataka Legislative Council ಮತ್ತು ಸಂವಿಧಾನವನ್ನು ಓದುವ ಹಾಗೆ Practice and Procedure of Parliament by Kaul and Shakdhar ಪುಸ್ತಕವನ್ನು ಓದುವ ಹವ್ಯಾಸ ಇಟ್ಟುಕೊಳ್ಳಬೇಕೆಂದು, ಯಾರು ನಿರಂತರ ಅಧ್ಯಯನಶೀಲರಾಗಿರುತ್ತಾರೋ ಮತ್ತು ಸದನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೋ ಅಂಥವರು ಮಾತ್ರ ಒಬ್ಬ ಸಮರ್ಥ ಶಾಸಕನಾಗಿ ರೂಪುಗೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ತಿಳಿಸಿಕೊಟ್ಟರು.

ಸದನಕ್ಕೆ ಬರುವ ಸದಸ್ಯರ ವರ್ತನೆ ಮತ್ತು ನಡವಳಿಕೆಗಳು ಸದನದ ಘನತೆಯನ್ನು ಹೆಚ್ಚಿಸಬೇಕೆಂದು ತಿಳಿಸುತ್ತಾ, ಸದನದ ಒಳಗೆ ಬರುವಾಗ ಮತ್ತು ಹೊರಗೆ ಹೋಗುವಾಗ, ತಮಗೆ ನಿಗದಿಪಡಿಸಿರುವ ಆಸನಗಳಲ್ಲಿ ಕುಳಿತುಕೊಳ್ಳುವಾಗ ಪೀಠಕ್ಕೆ ನಮಸ್ಕರಿಸಬೇಕೆಂದು ತಿಳಿಸಿದರಲ್ಲದೇ, ಸದನದ ಒಳಗೆ ಬರುವಾಗ ಸದನಕ್ಕೆ ಸಂಬಂಧಪಟ್ಟಂಥ ದಾಖಲೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ರೀತಿಯ magazine ತರಬಾರದು ಎಂಬ ಮಾಹಿತಿ ಕೊಟ್ಟರು.

ಸದನದಲ್ಲಿ ಒಬ್ಬ ಸದಸ್ಯರು ಮಾತನಾಡುವಾಗ ಇನ್ನೊಬ್ಬರು ಅವರಿಗೆ ಅಡ್ಡಿ ಉಂಟು ಮಾಡಬಾರದು; ಮಾತನಾಡುವ ಸದಸ್ಯರ ಮುಂದಿನಿಂದ ಹಾದು ಹೋಗದೇ ಹಿಂದಿನಿಂದ ಹೋಗಬೇಕು, ಒಂದು ವೇಳೆ ಅವರ ಮುಂದಿನಿಂದಲೇ ಹೋಗಬೇಕಾದ ಪ್ರಸಂಗ ಇದ್ದಾಗ ಕತ್ತನ್ನು ಬಗ್ಗಿಸಿ ಹೋಗಬೇಕು. ಸದನದಲ್ಲಿ ಇರಬಹುದಾದ ಸಚಿವರು, ಮುಖ್ಯಮಂತ್ರಿಗಳು, ಸಭಾನಾಯಕರು ಅಥವಾ ಸದಸ್ಯರಿಗೆ ಸಂಬಂಧಪಟ್ಟಂತೆ ಕುರಿತು ಏನಾದರೂ ಕೇಳಬೇಕಾದರೆ ಅಥವಾ ಹೇಳಬೇಕಾದರೆ ನೇರವಾಗಿ ಅವರನ್ನೇ ಉದ್ದೇಶಿಸಿ ಹೇಳದೆ ಪೀಠದ ಮೂಲಕವೇ ಹೇಳಬೇಕು. ಒಬ್ಬ ಸದಸ್ಯರು ನಿಂತುಕೊಂಡು

ಮಾತನಾಡುವಾಗ ಕುಳಿತಿರುವ ಸದಸ್ಯರು ಒಬ್ಬರಿಗೊಬ್ಬರು ಮಾತನಾಡಬಾರದು. ಸಭಾಪತಿಯವರು ಒಬ್ಬ ಸದಸ್ಯರಿಗೆ ಮಾತನಾಡಲು ಕರೆದಾಗ ಆತ ತನಗೆ ನಿಗದಿಪಡಿಸಿದ ಆಸನ ಬಿಟ್ಟು ಬೇರೆಯವರ ಆಸನದ ಹತ್ತಿರ ಇದ್ದಾಗ ಅಲ್ಲಿಂದಲೇ ಮಾತನಾಡುವ ಹಾಗಿಲ್ಲ; ಆತ ತನ್ನ ಆಸನಕ್ಕೆ ಹೋಗಿ ಮಾತನಾಡಿದಾಗ ಮಾತ್ರ ಅದು ದಾಖಲೆಗೆ ಹೋಗುತ್ತದೆ. ಅನಾರೋಗ್ಯದಿಂದ ಬಳಲುತ್ತಿರುವ ಸದಸ್ಯನು ಸಭಾಪತಿಯವರ ಅನುಮತಿ ಪಡೆದುಕೊಂಡ ಮೇಲೆ ಕುಳಿತುಕೊಂಡು ಮಾತನಾಡುವುದಕ್ಕೆ ಅವಕಾಶ ಇರುತ್ತದೆ. ಸದನದ ಒಳಗೆ ಫೋನ್‌ಗಳ ಬಳಕೆ ಮಾಡಬಾರದು, ಫೋಟೋಗಳನ್ನು ಕಳುಹಿಸಬಾರದು, ಲೈವ್‌ನ್ನು ನೋಡಬಾರದು. ಪೀಠಕ್ಕೆ ಬೆನ್ನನ್ನು ತೋರಿಸಬಾರದು, ಯಾವುದೇ ವಿಷಯವನ್ನು ನೇರವಾಗಿ ಸಭಾಪತಿಗಳ ಬಳಿ ಹೋಗಿ ತಿಳಿಸದೇ, ಅಧಿಕಾರಿ ಅಥವಾ ಸಿಬ್ಬಂದಿಗಳ ಮೂಲಕ ತಿಳಿಸಬೇಕಾಗುತ್ತದೆ. ಗನ್ ಲೈಸೆನ್ಸ್ ಇದೆ ಎಂದು ಅದನ್ನು ಸದನದ ಒಳಗೆ ತೆಗೆದುಕೊಂಡು ಹೋಗುವುದಕ್ಕಾಗಲಿ ಅಥವಾ ಪ್ರದರ್ಶಿಸುವುದಕ್ಕಾಗಲಿ ಅವಕಾಶ ಇಲ್ಲ. ತನ್ನ ಭಾಷಣವನ್ನು ಮುಗಿಸಿದ ಸದಸ್ಯನು ತಕ್ಷಣವೇ ಸದನವನ್ನು ಬಿಟ್ಟು ಹೊರಗೆ ಹೋಗಬಾರದು. ಸದನದ ಒಳಗೆ ಕಾರ್ಯಕಲಾಪಕ್ಕೆ ಸಂಬಂಧಪಟ್ಟಂತೆ ಹೊರತುಪಡಿಸಿ ಬೇರೆ ಯಾವುದೇ ಕರಪತ್ರಗಳನ್ನು ಸದಸ್ಯರಿಗೆ ಹಂಚುವ ಕೆಲಸ ಮಾಡಬಾರದು. ಪತ್ರಿಕಾಗೋಷ್ಠಿಯನ್ನು ಸದನದ ಮೊಗಸಾಲೆಯಲ್ಲಿ ನಡೆಸದೇ, ನಿಗದಿಗೊಳಿಸಿರುವ ಕೊಠಡಿಯಲ್ಲಿ ಮಾಡಬೇಕು. ಮಾನ್ಯ ಸಚಿವರು ಕೊಡುವ ಉತ್ತರ ಅಸಮಂಜಸವಾಗಿದೆ ಎಂದೆನಿಸಿದರೆ ಆ ಕುರಿತು ಮಾತಿನ ಮೂಲಕವೇ ಪ್ರತಿಭಟಿಸಿಬೇಕೇ ಹೊರತು ಹರಿದು ಹಾಕಬಾರದು. ಯಾರೇ ಒಬ್ಬ ಸದಸ್ಯರು ಮಾತನಾಡುತ್ತಿರುವಾಗ ಇನ್ನೊಬ್ಬ ಸದಸ್ಯರು ಅದಕ್ಕೆ ಪ್ರತಿಕ್ರಿಯೆ ಕೊಡಬಯಸಿದರೆ, ನಿಂತ ಸದಸ್ಯರು ಯೀಲ್ಡ್ ಆಗಬೇಕು ಮತ್ತು ಪೀಠ ಅದಕ್ಕೆ ಅನುಮತಿ ಕೊಟ್ಟಾಗ ಮಾತ್ರ ಮಾತನಾಡಬಹುದಾಗಿರುತ್ತದೆ. ಕೆಲವು ಸಂದರ್ಭಗಳಲ್ಲಿ ಸದನದ ಬಹುತೇಕ ಸದಸ್ಯರು ಎದ್ದು ಒಂದೇ ಸಲ ಮಾತನಾಡುತ್ತಿರುತ್ತಾರೆ, ಆಗ ಮಾನ್ಯ ಸಭಾಪತಿಗಳು ಎದ್ದು ನಿಂತರೇ ಎಲ್ಲಾ ಸದಸ್ಯರು ಕುಳಿತುಕೊಳ್ಳಬೇಕು. ನಿಯಮಗಳ ಪ್ರಕಾರ ಸದನದ ಬಾವಿಯೊಳಗೆ ಹೋಗಬಾರದು, ಯಾವುದೇ ಕಾರಣಕ್ಕೂ ಸತ್ಯಾಗ್ರಹಗಳನ್ನು ಮತ್ತು ಪ್ರತಿಭಟನೆಯನ್ನು ಮಾಡಬಾರದು ಎಂಬಿತ್ಯಾದಿ ವಿಚಾರಗಳನ್ನು ಮಾನ್ಯ ಶ್ರೀ ಕೆ.ಟಿ.ಶ್ರೀಕಂಠೇಗೌಡರು ಶಿಬಿರಾರ್ಥಿಗಳಿಗೆ ತಿಳಿಸಿಕೊಟ್ಟರು.

ತಮ್ಮ ಮಾತುಗಳನ್ನು ಮುಂದುವರೆಸಿ, ಸದನ ಮತ್ತು ಸಮಿತಿಗಳಲ್ಲಿ ಮಹತ್ವದ ವಿಚಾರಗಳ ಬಗ್ಗೆ ಚರ್ಚೆ ಆದಾಗ ಅದನ್ನು ಬೇರೆಯವರೊಂದಿಗೆ ಹಂಚಿಕೊಂಡು ಸರ್ಕಾರವನ್ನು ಮುಜುಗರಕ್ಕೆ

ಒಳಪಡಿಸಬಾರದು. ಶಾಸಕರು ತಮ್ಮ ಸ್ವಾರ್ಥಕ್ಕಾಗಿ ಅಥವಾ ತನ್ನ ಯಾವುದೋ ಸಂಸ್ಥೆಗಾಗಿ ಅಧಿಕಾರವನ್ನು ಬಳಸಬಾರದು. ಸಮಿತಿಗಳು ಅಧ್ಯಯನ ಪ್ರವಾಸಕ್ಕೆ ಹೋದಾಗ, ಸ್ಥಳೀಯರು ಕೊಡುವ ಉಡುಗೊರೆಯನ್ನು ತೆಗೆದುಕೊಳ್ಳಬಾರದು. ಸದನದಲ್ಲಿ ಯಾವುದೇ ಅಧಿಕಾರಿಗಳ ಮೇಲೆ, ಸರ್ಕಾರದ ಮೇಲೆ ಅಥವಾ ಮಾನ್ಯ ಸಚಿವರ ಮೇಲೆ ಆಪಾದನೆ ಮಾಡಬೇಕಾದರೆ ಪೂರ್ವಭಾವಿಯಾಗಿ ಅನುಮತಿ ಪಡೆಯಬೇಕು. ವಿದೇಶಗಳಿಗೆ ಅಧ್ಯಯನ ಪ್ರವಾಸಕ್ಕೆಂದು ಹೋಗುವ ಸಂದರ್ಭದಲ್ಲಿ ಪ್ರೆಸ್‌ನವರು ಕೇಳುವ ಪ್ರಶ್ನೆಗೆ ಸಮಿತಿಯ ಅಧ್ಯಕ್ಷರೇ ಉತ್ತರಿಸಬೇಕು.

ಮಾನ್ಯ ಸದಸ್ಯರುಗಳು ಆಯ್ಕೆಯಾಗಿ ಬರುವುದು ನಿರ್ದಿಷ್ಟ ಕ್ಷೇತ್ರದಿಂದ ಎಂಬುದನ್ನು ಬಿಟ್ಟರೆ ಅವರು ಎಲ್ಲಾ ಕ್ಷೇತ್ರಗಳ ಸಮಸ್ಯೆಗಳಿಗೆ ಸ್ಪಂದಿಸಬೇಕಾಗುತ್ತದೆ. ಕೆಳಮನೆ ಮತ್ತು ಮೇಲ್ಮನೆಯ ಒಟ್ಟು ೩೦೦ ಜನ ಶಾಸಕರು ರಾಜ್ಯಕ್ಕೆ ಅಗತ್ಯವಾದಂತಹ ಕಾನೂನುಗಳನ್ನು ರಚಿಸುವ ಜವಾಬ್ದಾರಿ ಹೊಂದಿದ್ದು, ಯಾವ ಯಾವ ಬಾಬ್ತುಗಳಿಗೆ ಎಷ್ಟು ವೆಚ್ಚವನ್ನು ಮಾಡಬೇಕು, ಯಾವ ಇಲಾಖೆಗಳ ಯಾವ ಯೋಜನೆಗಳಿಗೆ ಆದ್ಯತೆ ಕೊಡಬೇಕು ಎನ್ನುವ ಅಧಿಕಾರ ಇರುತ್ತದೆ ಎಂದು ತಿಳಿಸಿದರು.

ಶಾಸಕರ ಹಕ್ಕುಚ್ಯುತಿಯ ಬಗ್ಗೆ ಹೇಳುತ್ತಾ, ಶಾಸಕರ ಮೇಲೆ ಯಾವುದೋ ಒಂದು ಕೇಸ್ ದಾಖಲಾಗಿದೆ ಎಂದು ಪೋಲೀಸ್‌ನವರು ಬಂದು ಸಭಾಪತಿಯವರ ಅನುಮತಿ ಇಲ್ಲದೇ ಅರೆಸ್ಟ್ ಮಾಡುವ ಹಾಗಿಲ್ಲ ಮತ್ತು ಸದನದ ಹೊರಗೆ ಇಂತಹ ಸ್ಥಿತಿ ಬಂದಾಗಲೂ ಆ ಕುರಿತು ಸಭಾಪತಿಯವರಿಗೆ ತಿಳಿಸಬೇಕಾಗುತ್ತದೆ. ಶಿಷ್ಟಾಚಾರದ ಪ್ರಕಾರ ಒಂದು ಸಂಘ ಸಂಸ್ಥೆ ಉದ್ಘಾಟನಾ ಸಮಾರಂಭ ಇತ್ಯಾದಿಗಳಿಗೆ ಆಹ್ವಾನ ನೀಡದಿದ್ದಾಗ ಆ ಕುರಿತು ಸದನ ಪ್ರಾರಂಭವಾಗುವುದಕ್ಕೆ ಒಂದು ಗಂಟೆ ಮುಂಚಿತವಾಗಿ ಸಭಾಪತಿಯವರಿಗೆ ಮನವಿ ಕೊಟ್ಟು ಸದರಿ ವಿಯಷಕ್ಕೆ ಸಂಬಂಧಪಟ್ಟಂತೆ ಮಾತನಾಡುವ ಹಕ್ಕಿರುತ್ತದೆ ಎಂಬುದನ್ನು ತಿಳಿಸಿದರು. ಹಕ್ಕುಚ್ಯುತಿಯ ಸಂಬಂಧ ಕ್ರಮ ಕೈಗೊಳ್ಳಬಹುದು ಅಥವಾ ಹಕ್ಕುಬಾಧ್ಯತಾ ಸಮಿತಿಗೆ ವಹಿಸಿ ವರದಿ ತರಿಸಿಕೊಂಡು ಮುಂದಿನ ಕ್ರಮ ಕೈಗೊಳ್ಳುವ ಅವಕಾಶ ಇರುತ್ತದೆ ಎಂಬುದನ್ನು ತಿಳಿಸಿಕೊಟ್ಟರು.

ಸದನದಲ್ಲಿ ಶಾಸಕರ ಪರಿಭಾಷೆ ಹೇಗಿರಬೇಕು ಎಂದು ತಿಳಸುತ್ತಾ, ರಾಜ್ಯ ಅಥವಾ ರಾಷ್ಟ್ರ ವಿರೋಧಿ ಮಾತುಗಳು, ಸಮುದಾಯ, ಜಾತಿ, ಧರ್ಮ, ವರ್ಗ ಅಥವಾ ವೃತ್ತಿಗೆ ಅವಮಾನ ಆಗುವಂತಹ ಮಾತುಗಳನ್ನು ಆಡಬಾರದೆಂದು, ಸಮಾಜವು ಒಪ್ಪಿಕೊಂಡ ಮೌಲ್ಯಗಳಿಗೆ ಧಕ್ಕೆ ತರುವಂತಹ,

ಅಸಂಬದ್ಧ, ಅಸಂಸದೀಯ ಪದಗಳನ್ನು ಅಂದರೆ, ಬುಡಬುಡಿಕೆ, ಬೇವರ್ಸಿ, ಕೊಲೆಗಡುಕ, ಹಜಾಮತಿ, ಅಗಸ ಇತ್ಯಾದಿ ಜಾತಿ ವಾಚಕ ಪದಗಳನ್ನು ಬಳಸಬಾರದು ಎಂದು ಹೇಳಿದರು.

ಶಾಸಕರು ನೇಮಿಸಿಕೊಳ್ಳುವ ಆಪ್ತ ಸಹಾಯಕರಿಗೆ, ವಿಧಾನ ಮಂಡಲದ ಕಾರ್ಯಕಲಾಪಗಳ ಅರಿವು ಹಾಗೂ ಸಂಸದೀಯ ಜ್ಞಾನ ಇರಬೇಕು, ಶಾಸಕರು ಸದನದಲ್ಲಿ ಭಾಗವಹಿಸಲು ಬೇಕಾದಂತಹ ಅಗತ್ಯ ಮಾಹಿತಿಗಳನ್ನು ಸಂಬಂಧಪಟ್ಟವರಿಂದ ಪಡೆದುಕೊಂಡು ಒದಗಿಸುವ ಚಾಕಚಕ್ಯತೆ ಇರಬೇಕೆಂದು ತಿಳಿಸಿದರು.

ಶಾಸಕರು ಸದನದಲ್ಲಿ ಪ್ರಸ್ತಾಪಿಸ ಬಯಸುವ ವಿಷಯದ ಬಗ್ಗೆ ಅಧ್ಯಯನ ಮಾಡಿಕೊಂಡು ಬರಬೇಕು, ನಿಯಮಾವಳಿಗಳ ಪುಸ್ತಕವನ್ನು ಓದಿಕೊಂಡು ಬರಬೇಕು, ಆಗ ಮಾತ್ರ ವಿವಿಧ ಶೀರ್ಷಿಕೆಗಳಡಿ ಗಂಭೀರವಾಗಿ ಮಾತನಾಡಬಹುದು ಎಂಬ ಮಾಹಿತಿ ಕೊಟ್ಟು, ಸದನದ ಕಲಾಪಗಳಲ್ಲಿ ಹೆಚ್ಚು ಭಾಗವಹಿಸುವವರು ಗೌರವಕ್ಕೆ ಪಾತ್ರರಾಗುತ್ತಾರೆ ಮತ್ತು ಆ ಮೂಲಕ ಸದನದ ಘನತೆ-ಗೌರವ ಕೂಡ ಹೆಚ್ಚಾಗುತ್ತದೆ ಎನ್ನುವ ಅಂಶವನ್ನು ಶಿಬಿರಾರ್ಥಿಗಳಿಗೆ ಮನದಟ್ಟು ಮಾಡಿಕೊಟ್ಟರು.

ಶಾಸಕರ ಬಳಿ ತಮ್ಮ ಸಮಸ್ಯೆಗಳನ್ನು ತರುವ ಸಾರ್ವಜನಿಕರಿಗೆ ಪ್ರಾಮಾಣಿಕವಾಗಿ ಸ್ಪಂದಿಸಿ, ಅದಕ್ಕೆ ಪರಿಹಾರ ಕೊಡಿಸುವ ದಿಸೆಯಲ್ಲಿ ಸದನವನ್ನು ಅಸ್ತ್ರವನ್ನಾಗಿ ಬಳಸಿಕೊಳ್ಳಬೇಕು ಎನ್ನುವ ಮಾತುಗಳನ್ನು ಹೇಳಿ ವಿರಮಿಸಿದರು.

**(ಭೋಜನದ ವಿರಾಮಕ್ಕೆಂದು 1 ಗಂಟೆ 40 ನಿಮಿಷದಿಂದ ಮೂಂದೂಡಲ್ಪಟ್ಟ ಶಿಬಿರವು ಮತ್ತೆ ಮಧ್ಯಾಹ್ನ 2 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು)**

# ಸದನದಲ್ಲಿ ಕಡ್ಡಾಯ ಹಾಜರಾತಿ ಅವಶ್ಯಕತೆ ಹಾಗೂ ಅನುಸರಿಸರಿಸಬೇಕಾದ ನಿಯಮಗಳು

**ಮಾಜಿ ಸಭಾಪತಿಗಳಾದ ಸನ್ಮಾನ್ಯ ಡಿ.ಹೆಚ್.ಶಂಕರಮೂರ್ತಿಯವರು** ಮಾತನಾಡುತ್ತಾ, ವಿಧಾನ ಪರಿಷತ್ತು ಏಕೆ ಬೇಕು ಎಂದು ಟೀಕೆ ಮಾಡುವವರಿಗೆ ಉತ್ತರ ಎಂಬಂತೆ, ವಿಧಾನಸಭೆ ಮತ್ತು ವಿಧಾನ ಪರಿಷತ್ತು ಎಂಬ ಎರಡು ಸಭೆಗಳು ಏಕೆ ಬೇಕು ಎಂದು, ವಿಧಾನಸಭೆಯಲ್ಲಿ ವಿಧಾನ ಪರಿಷತ್ತು ಏಕೆ ಬೇಕು ಎನ್ನುವುದರ ಬಗ್ಗೆ ಮಹಾನ್ ವ್ಯಕ್ತಿಗಳು ವಿಶೇಷವಾಗಿ ಮಾತನಾಡಿರುವಂತಹ ಸಿ.ಡಿ.ಯನ್ನು ಸಭಾಪತಿಯಾಗಿದ್ದಾಗ ಪಡೆದುಕೊಂಡು ತಮ್ಮ ಚೇಂಬರ್‌ನಲ್ಲಿ ಇಟ್ಟಿರುವುದಾಗಿ, ಆಸಕ್ತರು ಅದನ್ನು ಕೇಳಬೇಕು ಎಂದು ಮನವಿ ಮಾಡಿಕೊಂಡರು.

ವೇದಗಳ ಕಾಲದಲ್ಲಿ ಸಭೆ ನಡೆಯುತ್ತಿದ್ದಾಗ ಸಭಾ ಪೀಠದಲ್ಲಿ ಕುಳಿತಿರುವವರಿಗೆ "ಸಭಾಪತಿ" ಎಂದು ಕರೆಯಲಾಗುತ್ತಿತ್ತು ಮತ್ತು ಅದೇ ಪದವನ್ನು ಮೇಲ್ಮನೆಯ ಸಭಾ ಪೀಠದಲ್ಲಿ ಕುಳಿತಿರುವವರನ್ನು ಸಂಬೋಧಿಸುವುದು ಗೌರವಯುತವಾದುದು ಎಂಬುದನ್ನು ತಿಳಿಸಿದರು.

ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಕೆಲಸಗಳು ಬೇರೆ ಬೇರೆ ಎಂದು ತಿಳಿಸಲು, ಹಿಂದೆ ಕೆಳಮನೆಯಲ್ಲಿ ಒಂದು ಎಜುಕೇಷನ್ ಬಿಲ್ ತಂದು ಅಲ್ಲಿ ಪಾಸ್ ಆಗಿ, ಅದು ವಿಧಾನ ಪರಿಷತ್ತಿಗೆ ಬಂದಾಗ ಅದರಲ್ಲಿರುವ ಲೋಪ-ದೋಷಗಳನ್ನು ತೋರಿಸಿದ್ದಲ್ಲದೇ ಅದನ್ನು ಒಪ್ಪಿದ ಸರ್ಕಾರ ಮತ್ತೆ ಸೂಕ್ತ ರೀತಿಯಲ್ಲಿ ತಿದ್ದುಪಡಿ ಮಾಡಿತ್ತು ಎನ್ನುವ ಉದಾಹರಣೆ ಕೊಟ್ಟರು ಮತ್ತು ಮಕ್ಕಳ ಹಕ್ಕುಗಳ ಬಗ್ಗೆ ಮೇಲ್ಮನೆಯಲ್ಲಿ ಮಾತ್ರ ಮಾತನಾಡಲು ಅವಕಾಶ ಕೊಟ್ಟಾಗ ಆ ಚರ್ಚೆಯಲ್ಲಿ 75 ಜನರ ಪೈಕಿ 60 ಜನ ಶಾಸಕರು ಭಾಗವಹಿಸಿ ಅದರ ವರದಿ ಪ್ರಕಟವಾದಾಗ ಯುನೈಟೆಡ್ ನೇಷನ್‌ನಿಂದ ಕರ್ನಾಟಕ ವಿಧಾನ ಪರಿಷತ್ತಿಗೆ ಒಂದು complimentary letter ಬಂದಿತ್ತು ಎನ್ನುವ ವಿಚಾರವನ್ನು ಶಿಬಿರಾರ್ಥಿಗಳಿಗೆ ತಿಳಿಸಿಕೊಟ್ಟರು.

ತಾವು ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಸಂದರ್ಭದಲ್ಲಿ, ಶ್ರೀಮತಿ ಗಂಗೂಬಾಯಿ ಹಾನಗಲ್, ಶ್ರೀ ಮಲ್ಲಿಕಾರ್ಜುನ ಮನ್ಸೂರ್, ಶ್ರೀ ಹೆಚ್.ನರಸಿಂಹಯ್ಯ, ಡಾ: ಎಂ.ಸಿ.ಮೋದಿ ಇವರುಗಳಂತಹ

ಮಹಾನ್ ವ್ಯಕ್ತಿಗಳಿದ್ದರೆಂದು, ತಮ್ಮ ಪಕ್ಕದಲ್ಲೇ ಶ್ರೀಮತಿ ಗಂಗೂಬಾಯಿ ಹಾನಗಲ್‌ರವರು ಕುಳಿತುಕೊಳ್ಳುತ್ತಿದ್ದುದು ತಮ್ಮ ಅದೃಷ್ಟವೆಂದು, ಒಂದು ಸಲ ತಾವು ಧ್ವನಿ ಏರಿಸಿ ಮಾತನಾಡಿದಾಗ, ಹಾಗೆ ಮಾತನಾಡಬಾರದೆಂದು ಬುದ್ಧಿ ಮಾತು ಹೇಳಿದ್ದನ್ನು ನೆನಪಿಸಿಕೊಂಡರು.

ವಿಧಾನ ಪರಿಷತ್ತಿನಲ್ಲಿ ಪದವೀಧರ ಮತ್ತು ಶಿಕ್ಷಕರ ಕ್ಷೇತ್ರದಿಂದ ಒಟ್ಟು 14 ಜನ ಆಯ್ಕೆಯಾಗಿ ಬರುತ್ತಿದ್ದುದರಿಂದ ಸದನದಲ್ಲಿ ಯಾವಾಗಲೂ ಶಿಕ್ಷಕರ ಬಗ್ಗೆಯೇ ಚರ್ಚೆ ಆಗುತ್ತದೆ ಎಂಬ ಮಾತುಗಳು ಕೇಳಿ ಬರುತ್ತಿತ್ತು. ಆಗ, ಎರಡು ದಿವಸಗಳ ಕಾಲ ಕೇವಲ ಶಿಕ್ಷಣದ ಬಗ್ಗೆ ಮಾತನಾಡಲು ಅವಕಾಶ ಕೊಟ್ಟಿದ್ದರಿಂದ ಅನೇಕ ಹೊಸ ವಿಷಯಗಳು ಹೊರಗೆ ಬಂತೆಂದು ಸನ್ಮಾನ್ಯರು ತಿಳಿಸಿಕೊಟ್ಟರು.

ತಾವು ಸದಸ್ಯರಾಗಿ ಬರುವುದಕ್ಕೆ ಮುಂಚೆ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಮೇಲ್ಮನೆಯ ಸದಸ್ಯರಾಗಿದ್ದರು. ಅವರು, "ಸದನ ನಡೆಯುತ್ತಿರುವಾಗ ನೈಸರ್ಗಿಕ ಕರೆ ಬಂದರೂ, ಎದ್ದು ಹೋದರೆ ಆ ಅವಧಿಯಲ್ಲಿ ಮಾತನಾಡುವ ಸದಸ್ಯರ ಮಾತುಗಳು ಕೇಳುವುದು ಮಿಸ್ ಆಗುತ್ತದೆ ಎನ್ನುವ ಭಯ ಆಗುತ್ತಿತ್ತು" ಎಂದು ತಮ್ಮ ಬಳಿ ಹೇಳಿದ್ದನ್ನು ಮೆಲುಕು ಹಾಕಿದರು.

ಸದನದ ಕಲಾಪಗಳಲ್ಲಿ ಇನ್‌ವಾಲ್ವ್ ಆಗಬೇಕಾದರೆ ಹಾಜರಾತಿ ಪ್ರಮುಖವೆಂದು, ಸದನದಲ್ಲಿ ಕುಳಿತುಕೊಂಡಾಗ ಮಾತ್ರ ಇತರ ಸದಸ್ಯರು ತಪ್ಪು ಮಾತನಾಡುತ್ತಿದ್ದಾರೋ ಅಥವಾ ಸರಿಯಾಗಿ ಮಾತನಾಡುತ್ತಿದ್ದಾರೋ ಎನ್ನುವುದು ಅರ್ಥವಾಗುತ್ತದೆ; ಅಥವಾ ನಾವು ಅದಕ್ಕೆ ಎದ್ದು ನಿಂತು ಪ್ರತಿಕ್ರಿಯಿಸಲು ಅನುಕೂಲವಾಗುತ್ತದೆ, ಚರ್ಚೆಗಳು ಆಗುವಾಗ ಆಡಳಿತ ಪಕ್ಷ, ವಿರೋಧ ಪಕ್ಷ ಎನ್ನುವುದನ್ನು ಮರೆತು, ವಿಷಯಾಧಾರಿತ ಚರ್ಚೆಗಳಾದಾಗ ಮಾತ್ರ ಉತ್ತಮ ಫಲಿತಾಂಶ ಬರುತ್ತದೆ ಎಂಬುದನ್ನು ತಿಳಿಸಿಕೊಟ್ಟರು.

ಹಿಂದೆ, ಬೆಲ್ ಆದಮೇಲೆ ಸದಸ್ಯರು ಸದನದ ಒಳಗೆ ಬಂದು, ನಂತರ ಸಭಾಪತಿಗಳು ಕೊನೆಯಲ್ಲಿ, ಸಭೆಯನ್ನು ಮುಂದೂಡಲಾಗಿದೆ ಎಂದು ಹೇಳುವ ತನಕವೂ ಸದನದಲ್ಲೇ ಕುಳಿತುಕೊಂಡಿರುತ್ತಿದ್ದೆವು, ತಮ್ಮಂತೆ ಹೊಸದಾಗಿ ಬಂದಂಥ ಸದಸ್ಯರು ಕ್ರಮೇಣ ಮಾತನಾಡಲು ಕಲಿತರೆಂದು ತಿಳಿಸಿದ ಸನ್ಮಾನ್ಯರು, ಸದನದಲ್ಲಿ ತಮ್ಮ ವಿಷಯ ಮುಗಿದ ತಕ್ಷಣ ಅಲ್ಲಿಂದ ಎದ್ದು ಹೋಗುವ ಪದ್ಧತಿಯನ್ನು ಬಿಟ್ಟು ಹಾಜರಾತಿ ಕಡೆ ಗಮನಕೊಡಬೇಕೆಂದು ಹೇಳಿ ತಮ್ಮ ಮಾತುಗಳನ್ನು ಮುಗಿಸಿದರು.

# ಶಾಸಕರಾಗಿ ಮಾಧ್ಯಮ ನಿರ್ವಹಣೆ

**ಮಾಜಿ ಶಾಸಕರಾದ ಮಾನ್ಯ ಗೋ.ಮಧುಸೂದನ್‌ರವರು** ಮೊದಲನೆಯದಾಗಿ, ಕಾರ್ಯಾಗಾರವನ್ನು ಏರ್ಪಡಿಸಿದ್ದ ಮಾನ್ಯ ಸಭಾಪತಿಯವರಿಗೆ ಮತ್ತು ವಿಧಾನ ಪರಿಷತ್ತಿಗೆ ನೂತನವಾಗಿ ಆಯ್ಕೆಯಾಗಿ ಬಂದಿದ್ದ ಶಾಸಕರುಗಳಿಗೆ ಅಭಿನಂದನೆ ಸಲ್ಲಿಸಿದರು. ತಾವು ವಿಧಾನಪರಿಷತ್ತಿಗೆ ಬರಲು ಟಿಕೆಟ್ ಕೊಡಿಸಿದ್ದು, ಗೆಲ್ಲಿಸಿಕೊಂಡು ಬಂದಿದ್ದು ಸನ್ಮಾನ್ಯ ಡಿ.ಹೆಚ್.ಶಂಕರಮೂರ್ತಿಯವರು ಎಂಬುದನ್ನು ನೆನಪಿಸಿಕೊಂಡರು.

ಕರ್ನಾಟಕದಲ್ಲಿ ದೂರದರ್ಶನ ಪ್ರಾರಂಭವಾದಾಗಿನಿಂದ ಅಲ್ಲಿ ನಡೆಯುವಂತಹ ಚರ್ಚೆಗಳಲ್ಲಿ ಹೆಚ್ಚಾಗಿ ಭಾಗವಹಿಸುತ್ತಿದ್ದವರಲ್ಲಿ ತಾನೂ ಒಬ್ಬನೆಂದು, ಸದನದಲ್ಲಿ ಸುದ್ದಿ ಮಾಡುತ್ತಿದ್ದ ಶಾಸಕರುಗಳ ಪೈಕಿ ಕೂಡ ಒಬ್ಬನಾಗಿರುತ್ತಿದ್ದೆ ಎಂದು ತಿಳಿಸಿದ ಸನ್ಮಾನ್ಯರು, ವಿಧಾನ ಪರಿಷತ್ತು, ವಿಧಾನ ಸಭೆ, ರಾಜ್ಯಸಭೆ ಮತ್ತು ಲೋಕಸಭೆಗಳಲ್ಲಿ ಶಾಸನ ರಚಿಸುವಂಥವರಿಗೆ "ಶಾಸಕರು" ಎಂದು ಕರೆಯುತ್ತಾರೆ ಎನ್ನುವ ವಿಷಯ ತಿಳಿಸಿದರು.

ಒಬ್ಬ ವ್ಯಕ್ತಿ ಜನಪ್ರತಿನಿಧಿಯಾಗಿ ಚುನಾಯಿತನಾದ ಮೇಲೆ ಜನರ ದೃಷ್ಟಿ ಆತನ ಕುರಿತಂತೆ ಭಿನ್ನವಾಗುತ್ತದೆ, ವೈಯಕ್ತಿಕವಾಗಿ, ಸಾಮಾಜಿಕ-ರಾಜಕೀಯ-ಆರ್ಥಿಕ ಮತ್ತು ನೈತಿಕವಾಗಿ ಉತ್ತಮ ನಡವಳಿಕೆಗಳುಳ್ಳವನಾಗಿರಬೇಕೆಂದು ಬಯಸುತ್ತಾರೆ. ನಿಯಮಗಳಲ್ಲಿ ಇಂಥದ್ದೇ ಡ್ರೆಸ್ ಹಾಕಿಕೊಂಡು ಬರಬೇಕು ಎನ್ನುವುದು ಇಲ್ಲದೇ ಇದ್ದರೂ ಸದನದ ಒಳಗೆ ಬರಬೇಕಾದರೆ ಟೀ-ಶರ್ಟ್, ಜೀನ್ಸ್ ಪ್ಯಾಂಟ್ ಹಾಕಿಕೊಳ್ಳದೇ, ಜನರ ಅಪೇಕ್ಷೆಯಂತೆ ಔಪಚಾರಿಕ ವಸ್ತ್ರವನ್ನು ತೊಟ್ಟು ಬರಬೇಕೆಂದು ತಿಳಿಸಿದರು.

ಶಾಸಕರು, ದೇವಸ್ಥಾನ, ಧಾರ್ಮಿಕ ಸಮಾರಂಭ, ಮದುವೆ ಸಮಾರಂಭ ಅಥವಾ ಇತರ ಸಮಾರಂಭಗಳಿಗೆ ಹೋದಾಗ ಸಾಮಾನ್ಯವಾಗಿ ದೂರದರ್ಶನದ ಚಾನೆಲ್‌ಗಳವರು ಅದನ್ನು ಕವರ್ ಮಾಡುತ್ತಿರುತ್ತಾರೆ. ಅಂತಹ ಸಂದರ್ಭಗಳಲ್ಲಿ ತಮ್ಮ ನಡವಳಿಗಳ ಕಡೆ ಗಮನಕೊಟ್ಟು ಯಾವುದೇ ಟೀಕೆಗೆ ಒಳಗಾಗುವ ಪ್ರಸಂಗಗಳನ್ನು ಎದುರಿಸುವಂತಾಗಬಾರದೆಂದು ತಿಳಿಸಿಕೊಟ್ಟರು.

ರಾಜಕೀಯ ನಮ್ಮೆಲ್ಲರ ಜೀವನದ ಅವಿಭಾಜ್ಯ ಅಂಗವಾಗಿದ್ದರೂ, ಅದನ್ನು public toilet ಎನ್ನುತ್ತಾರೆ. ಅದು ಶುದ್ಧವಾಗಿರಬೇಕೆಂದು ಎಲ್ಲರ ಅಪೇಕ್ಷೆಯಾಗಿದ್ದರೂ ಅದನ್ನು ಬಳಸುವವರು ತಮ್ಮ ಕೆಲಸ ಮುಗಿಸಿಕೊಂಡು ಹೋಗುತ್ತಾರೆ, ಅದರ ಸ್ವಚ್ಛತೆಯ ಕಡೆಗೆ ಗಮನ ಕೊಡುವುದಿಲ್ಲ. ರಾಜಕೀಯದ ಸ್ಥಿತಿ ಹೀಗಾಗಬಾರದು, ಅದನ್ನು ಸ್ವಚ್ಛಗೊಳಿಸುವ ಕೆಲಸ ಮಾಡಬೇಕಿದೆ ಎಂದು ಹೇಳಿದರು.

ಶಾಸಕರು ಆರ್ಥಿಕ ಶಿಸ್ತನ್ನು ಬೆಳೆಸಿಕೊಳ್ಳಬೇಕು ಎಂಬುದರ ಬಗ್ಗೆ ಹೇಳುತ್ತಾ, ಒಂದು ವೇಳೆ ಆತನ ಚೆಕ್ ಬೌನ್ಸ್ ಆದರೆ, ರಿಯಲ್ ಎಸ್ಟೇಟ್ ದಂಧೆ ನಡೆಸಿ, ದುಡ್ಡು ಪಡೆದುಕೊಂಡು ನಿವೇಶನ ಕೊಡದೇ ಮೋಸ ಮಾಡಿ, ಆತನನ್ನು ಪೊಲೀಸರು ಅರೆಸ್ಟ್ ಮಾಡುವ ಸಂದರ್ಭ ಬಂದಾಗ, ಪೊಲೀಸರಿಂದ ತಪ್ಪಿಸಿಕೊಳ್ಳುವುದಕ್ಕೆ ಇವರು ರಾಜಕೀಯಕ್ಕೆ ಹೋಗುತ್ತಿದ್ದಾರೆ ಎಂದು ಜನ ಮಾತನಾಡಿಕೊಳ್ಳುವ ಹಾಗಾಗಬಾರದು ಎಂದು, ಹಾಗಾಗಿ ಆರ್ಥಿಕ ಶಿಸ್ತು ಬಹು ಮುಖ್ಯವಾದುದೆಂದು ತಿಳಿಸಿಕೊಟ್ಟರು.

ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗವನ್ನು ಬಿಟ್ಟು, ಯಾವ ಕಾನೂನಿನಲ್ಲಿಯೂ ವಿವರಣೆ ಕೊಡದೇ ಇರುವಂತಹ, ಅಧಿಕಾರವನ್ನು ತನ್ನಷ್ಟಕ್ಕೆ ತಾನೇ ಪಡೆದುಕೊಳ್ಳುವಂತೆ ಇರುವ ಯಾವುದಾದರೂ ಒಂದು ರಂಗವೆಂದರೆ ಅದು ಪತ್ರಿಕಾ ರಂಗ, ದೃಶ್ಯ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳು ಎಂದು ತಿಳಿಸಿ, ಹಿಂದೆ ಸದನಗಳ ಕಲಾಪಗಳನ್ನು ಕವರ್ ಮಾಡಲು ಬರುತ್ತಿದ್ದ ಡಾ: ತೇಜಸ್ವಿನಿಗೌಡ, ಪಬ್ಲಿಕ್ ಟಿ.ವಿ.ರಂಗನಾಥ್, ಶ್ರೀ ಸತ್ಯನ್, ಶ್ರೀ ಶೇಷಣ್ಣ, ಶ್ರೀ ಗರುಡನಗಿರಿ ನಾಗರಾಜ್ ಮತ್ತು ಶ್ರೀಮತಿ ಶೇಷ ಚಂದ್ರಿಕಾ ಅವರುಗಳನ್ನು ನೆನಪಿಸಿಕೊಂಡರು.

ಸದನದಲ್ಲಿ ಕಾರ್ಯಕಲಾಪಗಳು ನಡೆಯುವಾಗ ಶ್ರೀ ಡಿ.ಹೆಚ್. ಶಂಕರಮೂರ್ತಿ, ಡಾ: ಎಂ.ಆರ್.ತಂಗಾ, ಶ್ರೀ ಕೃ.ನರಹರಿ, ಡಾ: ವಿ.ಎಸ್.ಆಚಾರ್ಯ, ಶ್ರೀ ಹಾರನಹಳ್ಳಿ ರಾಮಸ್ವಾಮಿ, ಶ್ರೀ ಎಂ.ಪಿ.ಪ್ರಕಾಶ್, ಶ್ರೀ ಯಂ.ಸಿ.ನಾಣಯ್ಯ, ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಶಿಸ್ತಾಗಿ ಕುಳಿತುಕೊಳ್ಳುತ್ತಿದ್ದರು ಮತ್ತು ವಿವಿಧ ನಿಯಮಗಳ ಅಡಿ ಅಜೆಂಡಾದಲ್ಲಿ ಇರಬಹುದಾದ ವಿಷಯಗಳ ಬಗ್ಗೆ ಮಾತನಾಡಲು ಸಿದ್ಧ ಮಾಡಿಕೊಂಡು ಬರುತ್ತಿದ್ದರು. ಡಾ: ತಂಗಾರವರು ವೃತ್ತಿಯಲ್ಲಿ ಸರ್ಜನ್ ಆಗಿದ್ದರೂ ಅವರಿಗೆ ಕೃಷಿಯ ಬಗ್ಗೆಯೂ, ಅಬಕಾರಿ ಸುಂಕದ ವಿಚಾರಕ್ಕೆ ಸಂಬಂಧಪಟ್ಟಂತೆ ಶ್ರೀ ಯಂ.ಸಿ.ನಾಣಯ್ಯ ಅವರು ಪ್ರಬುದ್ಧತೆಯಿಂದ ಮಾತನಾಡುತ್ತಿದ್ದರೆಂದು ಶಿಬಿರಾರ್ಥಿಗಳಿಗೆ ತಿಳಿಸಿದರು.

ಪ್ರಿಂಟ್ ಮೀಡಿಯಾದ ಪ್ರಾಮುಖ್ಯತೆಯನ್ನು ತಿಳಿಸುತ್ತಾ, ಜನನಾಯಕರಾದವರು ಪ್ರತಿದಿನ ಎರಡು ಪತ್ರಿಕೆಗಳನ್ನು ಓದಬೇಕೆಂದು, ಅದರಲ್ಲೂ ಎಡಿಟೋರಿಯಲ್ ಕಾಲಂ ಓದಲೇಬೇಕೆಂದು, ಅದ್ಭುತವಾಗಿ

ಎಡಿಟೋರಿಯಲ್ ಕಾಲಂ ಬರೆಯುತ್ತಿದ್ದ ಮಾನ್ಯ ಖಾದ್ರಿ ಶಾಮಣ್ಣ ಅವರನ್ನು ಜ್ಞಾಪಿಸಿಕೊಂಡರು. ಸದನದ ಭೋಜನ ವಿರಾಮದ ವೇಳೆಯಲ್ಲಿ ಊಟಮಾಡಲು ಬೇರೆ ಕಡೆ ಹೋಗದೇ, ಲೌಂಜ್‌ನಲ್ಲಿ ಇರುವಂತಹ ಕ್ಯಾಂಟೀನ್‌ಗೆ ಹೋದರೆ, ಅಲ್ಲೇನು ಪತ್ರಕರ್ತರು ಊಟ ಮಾಡುತ್ತಾ ಯಾವ ಯಾವ ಸದಸ್ಯರು ಯಾವ ರೀತಿ ಮಾತನಾಡುತ್ತಾರೆ ಎಂದು ಹೇಳಕೊಳ್ಳುವುದನ್ನು ನಾವು ಕೇಳಬಹುದು. ಅಲ್ಲದೇ ಸದನದಲ್ಲಿ ನಾವು ಕೇಳುವಂತಹ ಪ್ರಶ್ನೆಗೆ ಪೂರಕವಾದ ಅಂಶಗಳನ್ನು ಕೇಳಲು ಪತ್ರಕರ್ತರು ಸಹಾಯ ಮಾಡುತ್ತಾರೆ ಎಂಬುದನ್ನು ತಿಳಿಸಿಕೊಟ್ಟರು.

ದೃಶ್ಯ ಮಾಧ್ಯಮಗಳ ಬಗ್ಗೆ ಮಾತನಾಡುತ್ತಾ, ಟಿ.ವಿ.ಯವರು ನಿಮ್ಮ ಬಳಿ ಮೈಕ್ ತಂದ ತಕ್ಷಣ, ಅನಿವಾರ್ಯವಲ್ಲದಿದ್ದರೂ ಮಾತನಾಡಲೇಬೇಕು ಎನ್ನುವ ಚಟ ಹತ್ತಿಸಿಕೊಳ್ಳಬಾರದೆಂದು, ಕೆಣಕುವ ಸಲುವಾಗಿ ಕೇಳುವ ಪ್ರಶ್ನೆಗೆ ಸ್ಪಷ್ಟವಾದ ಉತ್ತರ ಗೊತ್ತಿದ್ದರೆ ಮಾತ್ರ ಪ್ರತಿಕ್ರಯಿಸಬೇಕೆಂದು ತಿಳಿಸಿದರು. ಶಾಸಕರು ಯಾವುದಾದರೂ ಒಂದು ಕಾರ್ಯಕ್ರಮದಲ್ಲಿ ವೇದಿಕೆಯ ಮೇಲೆ ಕುಳಿತುಕೊಳ್ಳುವ ಪ್ರಸಂಗ ಬಂದಾಗ, ಬೇರೆಯವರು ಬಂದು, ನಾವು ಕುಳಿತುಕೊಂಡಿರುವ ಜಾಗದಿಂದ ಮತ್ತೊಂದು ಕಡೆ ಕುಳಿತುಕೊಳ್ಳಿ ಎಂದು ಹೇಳುವ ಹಾಗೆ ಇರಬಾರದು; ನಾವು ಮಾತನಾಡಿದ ಮೇಲೆ ಅದು ಸುಳ್ಳು ಎಂದು ಹೇಳುವಂಥ ಪರಿಸ್ಥಿತಿಯನ್ನು ತಂದುಕೊಳ್ಳಬಾರದು, ಈ ಎರಡು ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಲು ಸೂಚಿಸಿದರು.

ತಾವು ಹಕ್ಕುಬಾಧ್ಯತಾ ಸಮಿತಿಯ ಅಧ್ಯಕ್ಷರಾಗಿದ್ದಾಗ, ವಕ್ಫ್ ಬೋರ್ಡ್‌ನ 55 ಸಾವಿರ ಎಕರೆ ಜಾಗವನ್ನು ನುಂಗಿದ್ದ ವಿಷಯಕ್ಕೆ ಸಂಬಂಧಪಟ್ಟಂತೆ unanimous resolution ಮಾಡಿಕೊಟ್ಟ ಹಿನ್ನೆಲೆಯಲ್ಲಿ ವಕ್ಫ್ ಬೋರ್ಡ್‌ನ ಮಂತ್ರಿಗಳು ರಾಜೀನಾಮೆ ನೀಡಿದ್ದನ್ನು ಪ್ರಸ್ತಾಪಿಸಿ, ಇಂತಹ ಪ್ರಕರಣಗಳನ್ನು ನಿರ್ವಹಿಸಲು ಸೂಕ್ತ documentary evidence ಇರಬೇಕೆಂದು ತಿಳಿಸಿದರು. ಇಂತಹ ಸಂಗತಿಗಳಲ್ಲಿ ಹಣದ ಆಮಿಷಕ್ಕೆ ಅಥವಾ ಹೆದರಿಕೆಗೆ ಮಣಿಯದೇ ನೈತಿಕತೆಯಿಂದ ನಡೆದುಕೊಳ್ಳಬೇಕೆಂದು ಸಲಹೆ ಕೊಟ್ಟರು.

ದೃಶ್ಯ ಮಾಧ್ಯಮದ ಮುಂದೆ ಹೋಗಬೇಕಾದರೆ ಸಕಲ ತಯಾರಿ ಮಾಡಿಕೊಂಡು ಹೋಗಬೇಕು ಮತ್ತು ಯಾವುದೇ ಕಾರಣಕ್ಕೂ ಮಾಧ್ಯಮವನ್ನು ಟೀಕೆ ಮಾಡುವುದಕ್ಕೆ ಹೋಗಬಾರದು, ಅವಮಾನ ಮಾಡುವುದಕ್ಕೆ ಹೋಗಬಾರದು ಎಂದು ತಿಳಿಸಿದರು.

ದೃಶ್ಯ ಮಾಧ್ಯಮಗಳು ಒಂದು ವೇಳೆ ತಪ್ಪಾಗಿ ಅರ್ಥೈಸಿ ಹೇಳಿದಾಗ ಅಥವಾ ತೋರಿಸಿದಾಗ, ಸಂಬಂಧಪಟ್ಟವರು ಅದರ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆಯನ್ನೋ ಅಥವಾ ಪೋಲೀಸ್ ಠಾಣೆಯಲ್ಲಿ ದೂರನ್ನೋ ಕೊಡಬಹುದು. ಆದರೆ ಸಾಮಾಜಿಕ ಜಾಲತಾಣದವರ ಬಗ್ಗೆ ಆ ರೀತಿ ಮಾಡುವುದಕ್ಕೆ ಆಗುವುದಿಲ್ಲವೆಂದು ಮತ್ತು ಅವರು ಹಿಡೆನ್ ಕ್ಯಾಮೆರಾಗಳಿಂದ ಅಥವಾ ಮೊಬೈಲ್‌ಗಳಿಂದ ಶೂಟ್ ಮಾಡಿ, ಅದನ್ನು ಫಾರ್ವರ್ಡ್ ಮಾಡಿಬಿಡುತ್ತಾರೆ. ಇಂಥದ್ದರಿಂದ ಎಚ್ಚರವಾಗಿರಬೇಕೆಂದು ಸಲಹೆ ನೀಡಿದರು.

ಶಾಸಕರ ಆಪ್ತ ಸಹಾಯಕರು ಮತ್ತು ಅಂಗರಕ್ಷಕರು ಇಡೀ ವಿದ್ಯಮಾನಗಳನ್ನು ಬಹಳ ಹತ್ತಿರದಿಂದ ನೋಡುತ್ತಿರುತ್ತಾರಾದ್ದರಿಂದ ಅವರಿಂದಲೂ ಎಚ್ಚರಿಕೆ ವಹಿಸಬೇಕೆಂದು; ಎಷ್ಟೋ ಪಿ.ಎ.ಗಳು, ಗುರುವಿಗೆ ತಿರುಮಂತ್ರ ಎಂದು ಹೇಳುವ ಹಾಗೆ, ನಂತರದ ದಿನಗಳಲ್ಲಿ ಶಾಸಕರಾಗಿ, ಮಂತ್ರಿಗಳಾಗಿ ಅಥವಾ ರಾಜಕಾರಣಿಯಾಗಿ ಬಂದಿದ್ದಾರೆ ಎನ್ನುವ ಮಾಹಿತಿಯನ್ನು ಕೊಟ್ಟರು. ಶಾಸಕ ಎನಿಸಿಕೊಂಡವನು ಯಾರಿಗೂ ಮೋಸ ಮಾಡುವ ಯೋಚನೆ ಮಾಡಬಾರದು; ಪ್ರಾಮಾಣಿಕನಾಗಿರಬೇಕು; ಶುದ್ಧ ಚಾರಿತ್ರ್ಯವುಳ್ಳವನಾಗಿದ್ದರೆ ಯಾರೂ ಕೂಡ ತಮ್ಮನ್ನು ಹಿಡಿಯುವ ಪ್ರಶ್ನೆ ಬರುವುದಿಲ್ಲ ಎಂಬುದನ್ನು ತಿಳಿಸಿಕೊಟ್ಟರು.

ಜನ ಪ್ರತಿನಿಧಿಗಳಾದವರು ಕಾಯಾ-ವಾಚಾ-ಮನಸಾ ಶುದ್ಧವಾಗಿದ್ದು, ಹೆಣ್ಣಿನ ಬಗ್ಗೆ ಅಗೌರವ ತೋರಿಸುವಂಥ ನಡವಳಿಗಳನ್ನು ಪ್ರದರ್ಶಿಸಬಾರದು; ಈ ದಿಸೆಯಲ್ಲಿ ಎಚ್ಚರಿಕೆಯಿಂದ ಇರಬೇಕೆಂದು ಸೂಚಿಸಿದರು.

ಗೃಹ ಸಚಿವರಾಗಿದ್ದ ಮಾನ್ಯ ವಿ.ಎಸ್.ಆಚಾರ್ಯರವರ ಪ್ರಾಮಾಣಿಕತೆ ಬಗ್ಗೆ ಮಾತನಾಡುತ್ತಾ, ನಾಲ್ಕು ಜನ ಐ.ಎ.ಎಸ್. ಅಧಿಕಾರಿಗಳಿಗೆ ಸಂಬಂಧಪಟ್ಟಂತೆ ಸಹಿ ಬೇಕಾಗಿದ್ದಾಗ ನಾನು ಆ ಕುರಿತು ಮಾನ್ಯ ವಿ.ಎಸ್.ಆಚಾರ್ಯರವರಿಗೆ ತಿಳಿಸಿದೆ. ಅವರು ಒಂದು ದಿನ ಬೆಳಗ್ಗೆ ಬರುವುದಕ್ಕೆ ಹೇಳಿದರು. ನಾನು ಆ ಅಧಿಕಾರಿಗಳ ಸಹಿತ ಅವರ ಹತ್ತಿರ ಹೋಗುವುದಕ್ಕೆ ಮುಂಚೆ ಆ ಅಧಿಕಾರಿಗಳನ್ನು ಹೊರಗೆ ಇರಿಸಿ ನಾನು ಒಳಗೆ ಹೋಗಿ, ಆ ಅಧಿಕಾರಿಗಳು ಹೊರಗೆ ಇದ್ದಾರೆ; ಅವರಿಗೆ ಸಂಬಂಧಪಟ್ಟ ಕಡತ ತಮ್ಮ ಬಳಿ ಇದೆ ಎಂದು ಹೇಳಿದೆ. ಆಗ ಮೊದಲು ಅವರು, ಹೊರಗಡೆ ಇದ್ದ ಅಧಿಕಾರಿಗಳನ್ನು ಒಳಗೆ ಕರೆಸಿ, ಕಾಫಿ ಕೊಟ್ಟು, ಅವರ ಪರ್ಸನಲ್ ರೆಕಾರ್ಡ್ ಚೆನ್ನಾಗಿದೆ ಎಂದು ತಿಳಿದುಕೊಂಡ ತಕ್ಷಣ ಕಡತಕ್ಕೆ ಸಹಿ

ಹಾಕಿದರು. ಬಂದಿದ್ದ ಅಧಿಕಾರಿಗಳಿಗೂ ತುಂಬಾ ಆಶ್ಚರ್ಯವಾಗಿ, ಈ ಕೆಲಸ ಇಷ್ಟು ಸುಲಭವಾಗಿ ಆಗುತ್ತದೆ ಎಂದು ಅಂದುಕೊಂಡಿರಲಿಲ್ಲ ಎಂಬ ಮಾತನ್ನೂ ಹೇಳಿದರು. ಹಾಗಾಗಿ, ಎಲ್ಲರಲ್ಲೂ ಪಾರದರ್ಶಕತೆ ಬಹಳ ಮುಖ್ಯವಾದುದು ಎಂಬುದನ್ನು ಶಿಬಿರಾರ್ಥಿಗಳಿಗೆ ತಿಳಿಸಿದರು.

ಪ್ರಾಮಾಣಿಕ ವ್ಯಕ್ತಿಗಳು ಎಲ್ಲಾ ಪಕ್ಷಗಳಲ್ಲೂ ಇರುತ್ತಾರೆ, ಎಲ್ಲರೂ ಎಲ್ಲಾ ಸಮಯದಲ್ಲಿ ಎಲ್ಲರಿಗೂ ಒಳ್ಳೆಯವರಾಗಿರುವುದಿಲ್ಲ; ಕೆಟ್ಟವರೂ ಆಗಿರುವುದಿಲ್ಲ. ಆದ್ದರಿಂದ ಯಾರ ಬಗ್ಗೆಯೇ ಆಗಲಿ ಶಾಶ್ವತವಾಗಿ ದ್ವೇಷವನ್ನು ಇಟ್ಟುಕೊಳ್ಳಬಾರದು ಎನ್ನುವ ಮಾತುಗಳನ್ನು ಸನ್ಮಾನ್ಯ ಗೋ.ಮಧುಸೂದನ್‌ರವರು ತಿಳಿಸಿಕೊಟ್ಟರು.

ಸಮಾಜದಲ್ಲಿ ಹೋರಾಟ ಮಾಡಿಕೊಂಡು ಹೊಸದಾಗಿ ಆಯ್ಕೆಯಾಗಿ ಬಂದಿರುವ ಜನ ಪ್ರತಿನಿಧಿಗಳು ತಮ್ಮ ಹೆಸರು ಮತ್ತು ಪ್ರತಿಭೆಯನ್ನು ಉಜ್ವಲಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕೆಂದು, ಅಧಿಕಾರ ಮತ್ತು ಹಣ ಶಾಶ್ವತವಲ್ಲವೆಂದ ಸನ್ಮಾನ್ಯರು, ತಾವು ಮಾಡಿದ ಒಳ್ಳೆಯ ಕೆಲಸ ಮಾತ್ರ ಜೊತೆಗಿರುತ್ತದೆ ಎಂಬುದಾಗಿ ತಿಳಿ ಹೇಳಿದರು. ಇದಕ್ಕೆ ಉದಾಹರಣೆ ಎಂಬಂತೆ, ರಾಜ್ಯದಲ್ಲಿ ಅನೇಕ ಮುಖ್ಯಮಂತ್ರಿಗಳು ಮತ್ತು ರಾಜ-ಮಹಾರಾಜರು ಆಳ್ವಿಕೆ ನಡೆಸಿ ಹೋಗಿದ್ದರೂ, ನೆನಪಿಸಿಕೊಳ್ಳುವುದು ಕೇವಲ ಶ್ರೀ ಕೆಂಗಲ್ ಹನುಮಂತಯ್ಯ, ಶ್ರೀ ಸರ್.ಎಂ.ವಿ.ವಿಶ್ವೇಶ್ವರಯ್ಯ, ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರುಗಳ ಹೆಸರುಗಳನ್ನು ಮಾತ್ರ ಎಂದು ತಿಳಿಸಿದರು.

ನಾವುಗಳು ಯಾರಿಗೂ ಕಲಿಸಿಕೊಡಲು ಹೋಗದೇ, ಕಲಿಯಬೇಕಾಗಿರುವುದನ್ನು ಎಲ್ಲರಿಂದಲೂ ಕಲಿಯಬೇಕು, ಅದನ್ನೇ ಆದರ್ಶವಾಗಿ ಇಟ್ಟುಕೊಳ್ಳಬೇಕು ಎಂದು ಹೇಳಿದ ಸನ್ಮಾನ್ಯರು ತಮ್ಮ ಭಾಷಣವನ್ನು ಮುಗಿಸಿದರು.

***(ಕರ್ನಾಟಕ ವಿಧಾನ ಪರಿಷತ್ತಿನ ಅಪರ ಕಾರ್ಯದರ್ಶಿಯವರಾದ ಶ್ರೀಮತಿ ಎಸ್.ನಿರ್ಮಲರವರು ಸನ್ಮಾನ್ಯ ಗೋ.ಮಧುಸೂದನ ಅವರಿಗೆ ಧನ್ಯವಾದಗಳನ್ನು ತಿಳಿಸಿದರು)***

**ವಿಧಾನ ಪರಿಷತ್ತಿನ ಶಾಸಕರಾದ ಶ್ರೀ ಎಂ.ಎಲ್.ಅನಿಲ್‌ಕುಮಾರ್‌ರವರು** ಮಾತನಾಡಿ, ಉಪನ್ಯಾಸ ನೀಡಲು ಬಂದಿದ್ದ ಮಾನ್ಯ ಗೋ.ಮಧುಸೂದನ್ ಮತ್ತು ಮಾನ್ಯ ಡಿ.ಹೆಚ್.ಶಂಕರಮೂರ್ತಿ ಅವರುಗಳು ನೀಡಿದ ಮಾಹಿತಿಗಳು ಬಹಳ ಉಪಯುಕ್ತವಾಗಿತ್ತೆಂದು ತಿಳಿಸಿ, ಶಿಬಿರವನ್ನು ಆಯೋಜನೆ ಮಾಡಿದ ಸನ್ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರಿಗೆ ಧನ್ಯವಾದಗಳನ್ನು ಸಲ್ಲಿಸಿದರು.

ಹೊಸದಾಗಿ ಆಯ್ಕೆಯಾಗಿ ಬಂದಿರುವ 25 ಜನ ಶಾಸಕರು, ತಮ್ಮ ಕರ್ತವ್ಯಗಳೇನು ಎಂದು ತಿಳಿದುಕೊಂಡಿದ್ದಲ್ಲದೇ, ವಿಧಾನ ಮಂಡಲದ ಇತಿಹಾಸದಲ್ಲಿ ಸಾಕಷ್ಟು ಅನುಭವ ಇರುವಂತಹ ಮಹನೀಯರುಗಳನ್ನು ಕರೆಯಿಸಿ ತರಬೇತಿ ಕೊಡಿಸಿದ್ದಕ್ಕೆ ವಿಶೇಷ ಧನ್ಯವಾದಗಳನ್ನು ಅರ್ಪಿಸಿದರು.

ಮಾನ್ಯ ರಾಮಕೃಷ್ಣ ಹೆಗಡೆಯವರ ನಂತರ, 13 ಸಲ ಬಜೆಟ್ ಮಂಡನೆ ಮಾಡಿರುವಂತಹ ಸನ್ಮಾನ್ಯ ಸಿದ್ಧರಾಮಯ್ಯನವರು, ಬಜೆಟ್ ಯಾವರೀತಿ ಇರಬೇಕು; ತೆರಿಗೆಯನ್ನು ಯಾವರೀತಿ ವಸೂಲು ಮಾಡಬೇಕು, ಅದನ್ನು ಯಾವುದಕ್ಕೆ ಖರ್ಚು ಮಾಡಬೇಕು ಎನ್ನುವ ವಿಚಾರವನ್ನು ತಿಳಿಸಿಕೊಟ್ಟಿದ್ದು ಮತ್ತು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಸದಸ್ಯರಾಗಿರತಕ್ಕಂಥವರು ಯಾವರೀತಿ ಕರ್ತವ್ಯ ನಿರ್ವಹಿಸಬೇಕು ಎನ್ನುವುದರ ಬಗ್ಗೆ ಪ್ರಸ್ತಾಪಿಸಿದ ವಿಚಾರ ತುಂಬಾ ಉಪಯುಕ್ತವಾದ ಮಾಹಿತಿಯಾಗಿತ್ತು ಎಂದು ತಿಳಿಸಿದರು.

ಅದೇರೀತಿ, ಮಾಜಿ ಸಭಾಧ್ಯಕ್ಷರಾದ ಮಾನ್ಯ ಕೆ.ಆರ್.ರಮೇಶ್‌ಕುಮಾರ್‌ರವರು, ವಿಧಾನ ಮಂಡಲದ ಸ್ಥಾಯಿ ಸಮಿತಿಗಳ, ಸದನ ಸಮಿತಿಗಳ ಕರ್ತವ್ಯ ಮತ್ತು ಕಾರ್ಯನಿರ್ವಹಣೆ ಬಗ್ಗೆಯೂ, ಡಾ:ಬಿ.ಎಲ್‌ಶಂಕರ್‌ರವರು, ಶೂನ್ಯ ವೇಳೆಯಲ್ಲಿ ಪ್ರಶ್ನೆಗಳನ್ನು ತೆಗೆದುಕೊಳ್ಳುವ ವಿಧಾನ, ಗಮನ ಸೆಳೆಯುವ ಸೂಚನೆ, ಸಾರ್ವಜನಿಕ ಮಹತ್ವದ ವಿಷಯಗಳನ್ನು ಯಾವರೀತಿ ಪ್ರಶ್ನೆ ಮಾಡಬೇಕೆಂಬುದರ ಬಗ್ಗೆಯೂ, ಮಾನ್ಯ ಶ್ರೀ ಕೆ.ಟಿ.ಶ್ರೀಕಂಠೇಗೌಡರವರು, ಸದನದಲ್ಲಿ ಶಾಸಕರ ಜವಾಬ್ದಾರಿ, ಹಕ್ಕುಗಳು ಮತ್ತು ಕರ್ತವ್ಯಗಳು, ಸದನದ ಒಳಗೆ ಇರುವಾಗ ಪಾಲಿಸಬೇಕಾದ ಶಿಸ್ತು, ಪೀಠಕ್ಕೆ ಗೌರವ ಕೊಡುವ ರೀತಿ, ಪದಗಳ ಬಳಕೆ, ಬಾವಿಗೆ ಇಳಿದು ಪ್ರತಿಭಟನೆ ಮಾಡತಕ್ಕದ್ದಲ್ಲ ಎನ್ನುವುದರ ಬಗ್ಗೆ ಹೇಳಿದ ಎಲ್ಲಾ ವಿಚಾರಗಳನ್ನು ತಿಳಿದುಕೊಂಡಿದ್ದು ಒಳ್ಳೆಯ ಅನುಭವವಾಗಿತ್ತು ಎಂದು ತಿಳಿಸಿದರು.

ಸುಮಾರು 30 ವರ್ಷಗಳ ಕಾಲ ಸದನದ ಸದಸ್ಯರಾಗಿ ಮತ್ತು 8 ವರ್ಷಗಳ ಕಾಲ ಸಭಾಪತಿಯವರಾಗಿ ಕಾರ್ಯನಿರ್ವಹಿಸಿದ್ದ ಸನ್ಮಾನ್ಯ ಡಿ.ಹೆಚ್.ಶಂಕರಮೂರ್ತಿಯವರು, ಸದನದಲ್ಲಿ ಸದಸ್ಯರುಗಳ ಹಾಜರಾತಿಯ ಮಹತ್ವವನ್ನು ಮತ್ತು ಆ ಮೂಲಕ ಪರಿಪೂರ್ಣ ಶಾಸಕರಾಗಿ ಕೆಲಸ

ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ತಿಳಿಸಿದ್ದರಿಂದ ಹೊಸ ಶಾಸಕರು ತಮ್ಮ ಮುಂದಿನ ಭವಿಷ್ಯ ರೂಪಿಸಿಕೊಳ್ಳುವುದಕ್ಕೆ ಸಹಾಯವಾಗುತ್ತದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಸನ್ಮಾನ್ಯ ಸಿದ್ಧರಾಮಯ್ಯನವರು 1983ರಿಂದ ಇಲ್ಲಿಯ ತನಕ 8-10 ಬಾರಿ ಮಾತ್ರ ಸದನದ ಕಲಾಪದಲ್ಲಿ ಉಪಸ್ಥಿತನಾಗುವುದಕ್ಕೆ ಸಾಧ್ಯವಾಗಲಿಲ್ಲವೆಂದು, ಯಾವುದೇ ಕ್ಷೇತ್ರದ ವಿಚಾರವಿರಲಿ ಅಥವಾ ತಮಗೆ ಸಂಬಂಧವಿಲ್ಲದ ವಿಷಯ ಚರ್ಚೆ ಆಗುತ್ತಿದ್ದರೂ ಶಾಸಕರು ಸದನದಲ್ಲಿ ಕಡ್ಡಾಯವಾಗಿ ಇರಲೇಬೇಕೆಂದು, ಸನ್ಮಾನ್ಯ ರಮೇಶ್ ಕುಮಾರ್‌ರವರು, ಸದನದ ಬೆಲ್ ಹೊಡೆಯುವುದಕ್ಕೆ 10 ನಿಮಿಷ ಮುಂಚೆ ಉಪಸ್ಥಿತರಿರಬೇಕೆಂದು ಮತ್ತು ಸದನ ಮುಗಿದ ನಂತರವೇ ಎದ್ದು ಹೋಗಬೇಕೆಂದು ಹೇಳಿದ ಮಾತುಗಳು ಪ್ರೋತ್ಸಾಹ ನೀಡುವಂಥದ್ದಾಗಿತ್ತು ಎಂದು ತಿಳಿಸಿದರು.

114 ವರ್ಷಗಳ ಇತಿಹಾಸ ಹೊಂದಿರುವ, ಚಿಂತಕರ ಚಾವಡಿ ಎಂದು ಕರೆಸಿಕೊಳ್ಳುವ ಮೇಲ್ಮನೆಗೆ ಸ್ಥಳೀಯ ಸಂಸ್ಥೆಗಳಿಂದ ಬರುವ 25 ಶಾಸಕರು ಜನ ಪ್ರತಿನಿಧಿಗಳಿಂದ ಆಯ್ಕೆಯಾಗಿ ಬಂದಿರುತ್ತೇವೆ, ಗ್ರಾಮ ಪಂಚಾಯಿತಿ ಸದಸ್ಯರಿಂದ ಹಿಡಿದು ಪಾರ್ಲಿಮೆಂಟ್‌ನ ಸದಸ್ಯರೂ ಸಹ ತಮಗೆ ಮತ ಹಾಕಿರುತ್ತಾರಾದ್ದರಿಂದ ತಮ್ಮ ಮೇಲೆ ವಿಶೇಷ ಜವಾಬ್ದಾರಿಗಳಿರುತ್ತವೆ ಎಂದು ಅಭಿಪ್ರಾಯಪಟ್ಟರು.

ನಮಗೆ ಮತ ಹಾಕಿರುವಂತಹ ಜನ ಪ್ರತಿನಿಧಿಗಳು ಬಹಳ ನಿರೀಕ್ಷೆಗಳನ್ನಿಟ್ಟುಕೊಂಡಿರುತ್ತಾರೆ; ಅದಕ್ಕಾಗಿ ಮುಂದಿನ ದಿವಸಗಳಲ್ಲಿ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಬೇಕೆಂದು ಹೇಳುತ್ತಾ, 2 ದಿವಸಗಳ ತರಬೇತಿ ಶಿಬಿರದಲ್ಲಾದ ಅನುಭವದ ಬಗ್ಗೆ ತಮಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಸಭಾಪತಿಯವರಿಗೆ ವಂದಿಸಿ ಮಾನ್ಯ ಸದಸ್ಯರಾದ ಶ್ರೀ ಎಂ.ಎಲ್.ಅನಿಲ್ ಕುಮಾರ್‌ರವರು ವಿರಮಿಸಿದರು.

ಎರಡೂ ದಿವಸಗಳ ಶಿಬಿರಗಳಿಗೆ ಬಂದು ನಿರ್ದಿಷ್ಟ ವಿಚಾರಗಳ ಬಗ್ಗೆ ಅರಿವು ಮೂಡಿಸಿದಂತಹ ಎಲ್ಲಾ ಮಹನೀಯರುಗಳಿಗೆ ನಮಸ್ಕಾರಗಳನ್ನು ತಿಳಿಸಿ, ಬಹಳ ವರ್ಷಗಳ ಕಾಲ ಉನ್ನತ ಸ್ಥಾನದಲ್ಲಿದ್ದು ಅತ್ಯಂತ ಯಶಸ್ವಿಯಾಗಿ ನಿಭಾಯಿಸಿದ ಅನುಭವಿ ರಾಜಕೀಯ ಮುತ್ಸದ್ದಿಗಳು ಎಂಟು ವಿಷಯಗಳ ಬಗ್ಗೆ ತಿಳಿಸಿಕೊಟ್ಟಿದ್ದು, ಅದರ ಜೊತೆ, ಶಾಸಕರ ಕರ್ತವ್ಯಗಳೇನು, ಅವರ ನಡವಳಿಕೆ ಹೇಗಿರಬೇಕು, ಜನ ಮೆಚ್ಚುವಂತೆ ಮತ್ತು ಸಾಂವಿಧಾನಿಕವಾಗಿ ಹೇಗೆ ವರ್ತಿಸಬೇಕು ಎಂಬುದನ್ನು ತಿಳಿಸಿಕೊಟ್ಟಿದ್ದಕ್ಕಾಗಿ **ಮಾನ್ಯ ಶಾಸಕರಾದ ಶ್ರೀ ಕೆ.ಎಸ್.ನವೀನ್‌ರವರು** ಕೃತಜ್ಞತೆಗಳನ್ನು ತಿಳಿಸಿದರು.

"**ಚುನಾವಣೆಗಾಗಿ ಬೇಕಾದ ಸುಧಾರಣೆಗಳು**" ಎಂಬ ವಿಷಯದ ಬಗ್ಗೆ ಚರ್ಚೆ ಮಾಡಲು ಮಾನ್ಯ ಸಭಾಪತಿಗಳು ಹಾಗೂ ಮಾನ್ಯ ಸಭಾಧ್ಯಕ್ಷರು ಇಚ್ಛಿಸಿರುವುದು ಉತ್ತಮವಾಗಿದೆ ಎಂದು ತಿಳಿಸಿದುದರ ಜೊತೆಗೆ, ಮೇಲ್ಮನೆಗೆ ಮೊದಲನೆ ಸಲ ಸದಸ್ಯನಾಗಿ ಆಯ್ಕೆಗೊಂಡಿರುವ ತಾನು, ಅವಧಿ ಪೂರ್ಣಗೊಳ್ಳುವವರೆಗೂ ಶಿಬಿರದಲ್ಲಿ ಪ್ರಸ್ತಾಪಿಸಿದ ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ ಎಂದು, ಸಂವಿಧಾನಕ್ಕೆ, ಸದನಕ್ಕೆ ಹಾಗೂ ಎಲ್ಲಾ ಸದಸ್ಯರಿಗೆ ಸಂಬಂಧಪಟ್ಟಂತೆ ಗೌರವಯುತವಾಗಿ ನಡೆದುಕೊಳ್ಳುವಂತಹ ಕಟ್ಟುಪಾಡು ಹಾಕಿಕೊಳ್ಳುತ್ತೇನೆ ಎಂದು ಹೇಳಿ ತಮ್ಮ ಮಾತುಗಳನ್ನು ಮುಗಿಸಿದರು.

**ಮಾನ್ಯ ಶಾಸಕರಾದ ಡಾ: ಡಿ.ತಿಮ್ಮಯ್ಯ** ನವರು ತಾವು ಮಾತನಾಡುವ ಮೊದಲು ತಮ್ಮ ಪರಿಚಯ ಮಾಡಿಕೊಳ್ಳುತ್ತಾ, ಮೂಲತಃ ಮೈಸೂರಿನವರಾಗಿದ್ದು, 1973ರಲ್ಲಿ ವೈದ್ಯಾಧಿಕಾರಿಯಾಗಿ ಸರ್ಕಾರಿ ಸೇವೆಯನ್ನು, 1985–1987ರ ಅವಧಿಯಲ್ಲಿ ಕೊಡಗು ಜಿಲ್ಲೆಯ ಜಿಲ್ಲಾ ವೈದ್ಯಾಧಿಕಾರಿಯಾಗಿ, ನಂತರ ಮೈಸೂರು ಜಿಲ್ಲೆಯ ಜಿಲ್ಲಾ ವೈದ್ಯಾಧಿಕಾರಿಯಾಗಿ, ಇಲಾಖೆಯ ಜಂಟಿ ನಿರ್ದೇಶಕನಾಗಿ, ಅಪರ ನಿರ್ದೇಶಕ ಮತ್ತು ನಿರ್ದೇಶಕನಾಗಿ ಸೇವೆ ಸಲ್ಲಿಸಿದ್ದೇನೆಂದು, ಸರ್ಕಾರಿ ಸೇವೆಯ ನಿವೃತ್ತಿಯ ನಂತರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಲಹೆಗಾರನಾಗಿಯೂ ಕೆಲಸ ಮಾಡಿದ್ದೇನೆ; ಮೈಸೂರಿನಲ್ಲಿ ನರ್ಸಿಂಗ್ ಮತ್ತು ಅರೆ ವೈದ್ಯಕೀಯ ಕಾಲೇಜುಗಳನ್ನು ಫ್ಯಾಮಿಲಿ ವೆಲ್‌ಫೇರ್ ಯೂನಿಟ್‌ಗಳನ್ನು ಪ್ರಾರಂಭ ಮಾಡಿದ್ದೇನೆಂಬುದನ್ನು ತಿಳಿಸಿದರು.

ಹಿಂದಿನ ದಿನ ಮಾನ್ಯ ಸಿದ್ಧರಾಮಯ್ಯನವರು ಮಾತನಾಡಿ, ಸಾಮಾಜಿಕ ಚಿಂತನೆ ಬಗ್ಗೆ, ವಿಧೇಯಕಗಳು, ವಿತ್ತೀಯ ಕಾರ್ಯಕಲಾಪಗಳ ಬಗ್ಗೆ ವಿಸ್ತಾರವಾಗಿ ಹೇಳಿದ್ದನ್ನು ಪ್ರಸ್ತಾಪಿಸಿದ ಡಾ:ತಿಮ್ಮಯ್ಯನವರು, ಹೊಸದಾಗಿ ಆಯ್ಕೆಯಾಗಿ ಬಂದಿರುವ ತಮ್ಮಂಥವರಿಗೋಸ್ಕರ ತರಬೇತಿ ಶಿಬಿರವನ್ನು ಇಟ್ಟುಕೊಂಡಂಥ ಸಭಾಪತಿಗಳಿಗೆ ಧನ್ಯವಾದಗಳನ್ನು ಅರ್ಪಿಸಿ ವಿರಮಿಸಿದರು.

ನಂತರ **ಮಾನ್ಯ ಶಾಸಕರಾದ ಶ್ರೀ ಕುಶಾಲಪ್ಪ ಎಂ.ಪಿ(ಸೂಜಾ)ರವರು** ವೇದಿಕೆಗೆ ಆಗಮಿಸಿ, ತರಬೇತಿ ಶಿಬಿರವನ್ನು ಆಯೋಜಿಸಿದ ಮಾನ್ಯ ಸಭಾಪತಿಗಳಗೂ, ಉಪನ್ಯಾಸ ನೀಡಿದ ಮಾನ್ಯ ಡಿ.ಹೆಚ್.ಶಂಕರಮೂರ್ತಿ, ಮಾನ್ಯ ಗೋ.ಮಧುಸೂದನ್ ಅವರುಗಳಿಗೆ ಧನ್ಯವಾದಗಳನ್ನು ಅರ್ಪಿಸಿದರು. ತರಬೇತಿ ಶಿಬಿರದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ ತಾವು ಮೊದಲು ಪಟ್ಟಣ ಪಂಚಾಯಿತಿಯ ಸದಸ್ಯನಾಗಿ, ತಾಲ್ಲೂಕು ಪಂಚಾಯಿತಿಯ ಸದಸ್ಯನಾಗಿ ಕೆಲಸ ಮಾಡಿದ್ದೇನೆಂಬುದನ್ನು ತಿಳಿಸಿಕೊಟ್ಟರು.

ದಿನಾಂಕ 3.2.2022ರಂದು ಮಾನ್ಯ ಸಿದ್ಧರಾಮಯ್ಯನವರು, ಬಜೆಟ್ ಹೇಗಿರಬೇಕು, ಬಜೆಟ್ ಎಂದರೇನು, ಲೆಕ್ಕಪತ್ರ ಪರಿಶೀಲನೆ ಹೇಗಾಗುತ್ತದೆ ಎಂದು ಹೇಳಿದುದರ ಬಗ್ಗೆ ಪ್ರಸ್ತಾಪಿಸಿದ ಮಾನ್ಯ ಎಂ.ಪಿ.ಕುಶಾಲಪ್ಪನವರು; ಸದನದಲ್ಲಿ ಹೇಗೆ ಪ್ರಶ್ನೆ ಮಾಡಬೇಕೆಂಬುದರ ಬಗ್ಗೆ, ಧರಣಿ ಮಾಡಬಾರದು ಎನ್ನುವುದರ ಬಗ್ಗೆ ಹಾಗೂ ಸದನದಲ್ಲಿ ಕಡ್ಡಾಯ ಹಾಜರಾತಿ ಇರಬೇಕು ಎನ್ನುವುದರ ಬಗ್ಗೆ ಶ್ರೀ ಡಿ.ಹೆಚ್.ಶಂಕರಮೂರ್ತಿಯವರ ಮತ್ತು ಹಕ್ಕುಚ್ಯುತಿ ಆದಾಗ ಏನು ಮಾಡಬೇಕು ಎಂದು ತಿಳಿಸಿಕೊಟ್ಟ ಮಾನ್ಯ ಗೋ.ಮಧುಸೂದನ್‌ರವರ ಮಾತುಗಳನ್ನು ಗಮನದಲ್ಲಿಟ್ಟುಕೊಂಡು ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತೇನೆ ಎಂದು ಹೇಳಿ, ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು.

# ಸಮಾರೋಪ ನುಡಿ

ಸಮಾರೋಪ ಸಮಾರಂಭಕ್ಕೆ **ಕರ್ನಾಟಕ ಕಾನೂನು ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ:ಪಿ.ಈಶ್ವರಭಟ್ಟರವರು** ಆಗಮಿಸಿದ್ದರು. ಮೊದಲಿಗೆ, ಸಭಾಪತಿಗಳಿಗೆ, ಉಪನ್ಯಾಸ ನೀಡಲು ಬಂದಿದ್ದವರಿಗೆ ಮತ್ತು ಹೊಸದಾಗಿ ಆಯ್ಕೆಯಾಗಿ ಬಂದಿದ್ದ ಶಾಸಕರಿಗೆ ಅವರು ಅಭಿನಂದಿಸಿದರು ಮತ್ತು ಶುಭಾಶಯಗಳನ್ನು ಕೋರಿದರು.

ಸಂಸತ್ತಿನ ವ್ಯವಹಾರಗಳಲ್ಲಿ ಉನ್ನತ ಗುಣಮಟ್ಟವನ್ನು ಕಾಯ್ದುಕೊಳ್ಳುವ ಕೆಲಸ ವಿಧಾನ ಪರಿಷತ್ತಿನಿಂದ ಆಗಬೇಕೆಂದು, ಈ ನಿಟ್ಟಿನಲ್ಲಿ ನಮ್ಮ ದೇಶದ ಬೇರೆ ರಾಜ್ಯಗಳಲ್ಲಿ ಸಂವಿಧಾನದ ಕುರಿತಾಗಲಿ ಅಥವಾ ಸಂಸದೀಯ ಮೌಲ್ಯಗಳ ಕುರಿತಾಗಿ ದೀರ್ಘವಾಗಿ ಚರ್ಚೆ ಮಾಡಿರುವಂತಹ ಉದಾಹರಣೆಗಳಿಲ್ಲವೆಂದು ತಿಳಿಸಿದರು.

ತರಬೇತಿ ಶಿಬಿರದ ಸಮಾರೋಪ ಸಮಾರಂಭಕ್ಕೆ ತಮ್ಮನ್ನು ಆಹ್ವಾನಿಸಿದ ಮಾನ್ಯ ಸಭಾಪತಿಯವರಿಗೆ ವೈಯಕ್ತಿಕವಾಗಿ ಅಭಿನಂದಿಸಿ, ಇದು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಕ್ಕೆ ನೀಡಿದ ಗೌರವ ಅಥವಾ ಶಿಕ್ಷಣ ಸಮುದಾಯಕ್ಕೆ ನೀಡಿದ ಗೌರವವೆಂದು ತಿಳಿಸಿದರು.

ತರಬೇತಿ ಶಿಬಿರದ ಉದ್ಘಾಟನೆ ಮಾಡಿದ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾದ ಮಾನ್ಯ ಜೆ.ಸಿ.ಮಾಧುಸ್ವಾಮಿಯವರು ತಮ್ಮ ಭಾಷಣದಲ್ಲಿ ನೀಡಿದ ಮಾರ್ಗದರ್ಶನ ಅತ್ಯಂತ ಉಪಯುಕ್ತವಾಗಿತ್ತೆಂದು, 8 ವಿಚಾರಗಳ ಬಗ್ಗೆ ನುರಿತ ವಿದ್ವಾಂಸರು ಮಂಡಿಸಿದ ವಿಚಾರಗಳು, ಮಾನ್ಯ ಸಿದ್ಧರಾಮಯ್ಯನವರು ವಿಧೇಯಕಗಳ, ವಿತ್ತೀಯ ಕಾರ್ಯಕಲಾಪಗಳ ಮತ್ತು ಸಾರ್ವಜನಿಕ ಲೆಕ್ಕಪತ್ರ ಸಮಿತಿಗಳ ಕುರಿತು ನೀಡಿದ ಉಪನ್ಯಾಸ, ಮಾನ್ಯ ಕೆ.ಆರ್.ರಮೇಶಕುಮಾರ್‌ರವರು ವಿಧಾನ ಮಂಡಲದ ಸ್ಥಾಯಿ ಸಮಿತಿಗಳ, ಸದನ ಸಮಿತಿಗಳ ಕಾರ್ಯನಿರ್ವಹಣೆ ಬಗ್ಗೆ ಹೇಳಿದ ವಿಚಾರಗಳು, ಮಾನ್ಯ ಬಿ.ಎಲ್.ಶಂಕರ್‌ರವರು ಅಧಿವೇಶನದ ಕಲಾಪಗಳು, ಪ್ರಶ್ನೋತ್ತರ ವೇಳೆ, ಗಮನ ಸೆಳೆಯುವ ಸೂಚನೆ, ಶೂನ್ಯ ವೇಳೆ, ಸಾರ್ವಜನಿಕ ಮಹತ್ವದ ವಿಷಯಗಳ ಬಗ್ಗೆ ತಿಳಿಸಿ ಕೊಟ್ಟ ಮಾಹಿತಿ, ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರಹೆಗಡೆ ಕಾಗೇರಿಯವರು, ಸಂವಿಧಾನದ ಅಡಿಯಲ್ಲಿ ಜನರ ನಿರೀಕ್ಷೆ ಹಾಗೂ ಶಾಸಕರ ಜವಾಬ್ದಾರಿ ಬಗ್ಗೆ ಹೇಳಿದ ಅಂಶಗಳು, ಮಾನ್ಯ ಶ್ರೀ ಕಂಠೇಗೌಡರವರು ಶಾಸಕರ

ಜವಾಬ್ದಾರಿಗಳು, ಕರ್ತವ್ಯಗಳು ಮತ್ತು ಹಕ್ಕುಗಳು, ಶಾಸನ ಸಭೆಯ ಪರಿಭಾಷೆ, ಪದ ಬಳಕೆ, ಸಕಾರಾತ್ಮಕ ಧೋರಣೆಗಳ ಬಗ್ಗೆ ಹೇಳಿದ ಮಾತುಗಳು, ಮಾನ್ಯ ಡಿ.ಹೆಚ್.ಶಂಕರಮೂರ್ತಿಯವರು ಸದನದಲ್ಲಿ ಕಡ್ಡಾಯ ಉಪಸ್ಥಿತಿ ಇರುವುದಕ್ಕೆ ಸಂಬಂಧಪಟ್ಟಂತೆ ತಿಳಿಸಿದ ವಿಚಾರಗಳು ಮತ್ತು ಮಾನ್ಯ ಗೋ.ಮಧುಸೂದನ್‌ರವರು, ಶಾಸಕರು ಸತ್ಯಸಂಧರಾಗಿದ್ದಾಗ ಮಾಧ್ಯಮ ಸೇರಿದಂತೆ ಯಾರೂ ಕೂಡ ಏನನ್ನು ಮಾಡುವುದಕ್ಕೆ ಆಗುವುದಿಲ್ಲ ಎಂದು ಎಚ್ಚರಿಸಿ ಹೇಳಿದ ಮಾತುಗಳು, ಇವೆಲ್ಲವೂ ಅದ್ಭುತವಾಗಿತ್ತೆಂದು ತಿಳಿಸಿದರು.

ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತಾ, ಜನರ ಆಶೋತ್ತರಗಳನ್ನು ಪ್ರತಿನಿಧಿಸಿ, ಸಾರ್ವಜನಿಕರ ಕಲ್ಯಾಣಕ್ಕೆ ಶ್ರಮಿಸಿ, ಮಾನವ ಹಕ್ಕುಗಳನ್ನು ಕಾಪಾಡಿ, ದುರ್ಬಲ ಮತ್ತು ಅಲ್ಪಸಂಖ್ಯಾತರನ್ನು ಮೇಲೆತ್ತುವ ಹಾಗೂ ಆರ್ಥಿಕ ವಿಕಾಸವನ್ನು ಸಾಧಿಸುತ್ತಾ, ಸಾಮಾಜಿಕ ಹಾಗೂ ಆರ್ಥಿಕ ನ್ಯಾಯವನ್ನು ಒದಗಿಸಿ ಸಮಾಜವನ್ನು ಸುವರ್ಣಗೊಳಿಸುವುದೇ ಉದ್ದೇಶವಾಗಿದ್ದು ಇದು ಸಂಸದೀಯ ವ್ಯವಸ್ಥೆಯ ಮುಖ್ಯ ಕಾರ್ಯವಾಗಿದೆ ಎಂದು ತಿಳಿಸಿದರು.

ಸಂಸದೀಯ ವ್ಯವಸ್ಥೆ ಒಂದು ಸಾಧನವಾಗಿದ್ದು ಅದರ ಮೂಲಕ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಸಾಧಿಸಬಹುದು; ಪ್ರಜಾಪ್ರಭುತ್ವದ ಮೌಲ್ಯಗಳನ್ನು ಸಂಸದೀಯ ವ್ಯವಸ್ಥೆ ಕಾಪಾಡಿಕೊಳ್ಳಬೇಕಾಗುತ್ತದೆ. ಸಾಮಾಜಿಕ ಪರಿವರ್ತನೆಯನ್ನು ತರಬೇಕೆಂಬ ಮೂಲ ಉದ್ದೇಶವು ಭಾರತದ ಸಂವಿಧಾನದಲ್ಲಿದೆ ಮತ್ತು ಒಂದು ಪರಿವರ್ತನೆಯನ್ನು ತರುವಾಗ ಹಿಂದಿನ ಮತ್ತು ಇಂದಿನ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ ಎಂದು ತಿಳಿಸಿದರು. "Role of Parliamentary system in a modern democratic world" ಎನ್ನುವುದರ ಬಗ್ಗೆ Gabrieal Nemotoi ರವರು ಹೇಳಿರುವುದನ್ನು, Walter Bagehot ಎಂಬುವವರು ' First, you must establish a very good Legislature' ಎಂದು ಹೇಳಿರುವುದನ್ನು ಕೋಟ್ ಮಾಡಿ ಹೇಳಿ, democratic values, protection of human rights and social development ಇವುಗಳ ಜೊತೆ ಇರುವಂತಹ commitments ಗಳನ್ನು ಫುಲ್‌ಫಿಲ್ ಮಾಡುವುದರಿಂದ ಶಾಸಕಾಂಗ ಎನ್ನುವುದು ಹೆಚ್ಚು ಯಶಸ್ವಿಯಾಗುತ್ತದೆ ಎಂಬ ಮಾತನ್ನು ಹೇಳಿದರು.

ಒಳ್ಳೆಯ ಪಾರ್ಲಿಮೆಂಟ್ ಎಂದರೆ, ಮಹಿಳೆಯರು, ಹಿಂದುಳಿದ ವರ್ಗದವರು ಅಥವಾ ಅಲ್ಪಸಂಖ್ಯಾತರು ಸಹ ಇದರ ಸದಸ್ಯರುಗಳಾದರೆ, ಬಹು ಸಂಸ್ಕೃತಿಯ ಶಾಸಕಾಂಗವನ್ನು

ಕಾಣಬಹುದಾಗಿದೆ; ಇದರಿಂದ ಅವರೆಲ್ಲರಿಗೂ ಪ್ರಾತಿನಿಧ್ಯ ಕಲ್ಪಿಸಿಕೊಟ್ಟಂತಾಗುತ್ತದೆ ಎಂದು ಪ್ರೊ:ಸಿ.ಈಶ್ವರಭಟ್ ಅವರು ತಿಳಿಸಿಕೊಟ್ಟರು.

ಶಾಸಕರು ನಿರ್ದಿಷ್ಟ ಕ್ಷೇತ್ರದಿಂದ ಆರಿಸಿ ಬಂದರೂ ಅವರು ಎಲ್ಲಾ ಸಮಾಜದ ಪ್ರತಿನಿಧಿಗಳಾಗಿರುತ್ತಾರೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಿದರೆ ಸುಭಿಕ್ಷ ಆಡಳಿತ ನಡೆಸುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಅಲ್ಲಿ ಸಾಮರಸ್ಯ ಇರುತ್ತದೆ ಎಂದು ಶಿಬಿರಾರ್ಥಿಗಳಿಗೆ ತಿಳಿಸಿಕೊಟ್ಟರು.

ದ್ವಿಸದನ ಪದ್ಧತಿಯಲ್ಲಿ ವಿಧಾನ ಪರಿಷತ್ತು 2ನೇ ಸದನವಾಗಿದ್ದು, opposable interest ನ್ನು ಪ್ರತಿನಿಧಿಸಿದರೆ ಆಗ ದ್ವಿರುಕ್ತಿ ಆಗುವುದಿಲ್ಲ. ಇಲ್ಲದಿದ್ದರೆ ಮೊದಲನೆಯ ಸದನಕ್ಕೂ ಎರಡನೆಯ ಸದನಕ್ಕೂ ಯಾವುದೇ ವ್ಯತ್ಯಾಸ ಇಲ್ಲದಂತಾಗುತ್ತದೆ. ಎರಡನೆಯ ಸದನದ ಅವಶ್ಯಕತೆಯೇನು ಎನ್ನುವುದರ ಬಗ್ಗೆ ಚರ್ಚೆಗಳು ನಡೆದಾಗ, opposable interest second chamber ನಲ್ಲಿ ರಿಫ್ಲೆಕ್ಟ್ ಆದಾಗ ಮೊದಲನೆ ಸದನದ dominant views ನ್ನು ಕೌಂಟರ್ ಅಥವಾ ಚಾಲೆಂಜ್ ಮಾಡುವಂತಹ ವಿಚಾರಗಳು ಎರಡನೆಯ ಸದನದಿಂದ ಬರುವುದಕ್ಕೆ ಸಾಧ್ಯವಾಗುತ್ತದೆ, ಎರಡನೆಯ ಸದನ ಯಶಸ್ವಿಯಾಗುವುದು ಈ ರೀತಿಯ diverse interest ಇದ್ದಾಗ ಮಾತ್ರ ಎಂದು ತಿಳಿಸಿದರು.

ಮಾಹಿತಿಯ ಪ್ರಪಂಚಕ್ಕೆ ಜನರನ್ನು ತೆರೆದಿಡುವಂತಹ ಕೆಲಸವನ್ನು ಶಾಸಕಾಂಗ ಮಾಡಬೇಕೆಂದು, ಸಾಂವಿಧಾನಿಕ ಸಂಸ್ಥೆಗಳು ಸಮಾಜದೊಂದಿಗೆ ಒಳ್ಳೆಯ ಸಂಬಂಧ ಇಟ್ಟುಕೊಳ್ಳಬೇಕು ಹಾಗೂ ಶಾಸಕಾಂಗ ಸಭೆಗಳಲ್ಲಿ ಉತ್ತಮ ರೀತಿಯ ಚರ್ಚೆಗಳು ಆದಾಗ ಒಳ್ಳೆಯ ಫಲಿತಾಂಶ ಸಿಗುತ್ತದೆ. ಶಾಸಕರು ಸಂವಿಧಾನದತ್ತವಾದ ಅಧಿಕಾರವನ್ನು ಬಳಸಿ ಅಭ್ಯುದಯದ ಬಗ್ಗೆ ಆಲೋಚನೆ ಮಾಡಬೇಕೆಂದು ತಿಳಿಸಿದರು.

ಲಾಯರ್ಸ್, ಜಡ್ಜ್ ಮತ್ತು ವೈದ್ಯರುಗಳಿಗೆ ಯಾವರೀತಿ ವೃತಿಪರತೆಗೆ ನಿಯಮಗಳನ್ನು ರೂಪಿಸಲಾಗಿದೆಯೋ ಅದೇ ರೀತಿಯಲ್ಲಿ ಶಾಸಕರಿಗೂ ಸಹ ಅನ್ವಯಿಸಬೇಕು. ಸಾರ್ವಜನಿಕರ ಒಳಿತಿಗಾಗಿ ಕಾನೂನುಗಳನ್ನು ಮಾಡಬೇಕೆಂದು, ಅದೇ ರೀತಿ ಸಾರ್ವಜನಿಕರ ಉಪಯೋಗಕ್ಕೆ ಉದ್ದೇಶಿತ ಯೋಜನೆಯಿಂದ ಸಹಾಯವಾಗುತ್ತದೆಯೋ ಇಲ್ಲವೋ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕೆಂದು ತಿಳಿಸಿದರು.

ಸಾಮಾನ್ಯ ಜನರಿಗೆ ಯಾವ ರೀತಿಯ ಕಾನೂನು ಬೇಕು, ಮಹಿಳೆಯ ರಕ್ಷಣೆಗೆ ಅಥವಾ ಅಲ್ಪ ಸಂಖ್ಯಾತರ ರಕ್ಷಣೆಗೆ, ಜೀತ ಪದ್ಧತಿ ನಿರ್ಮೂಲನೆಗೆ ಯಾವ ಕಾನೂನಿನ ಅಗತ್ಯವಿದೆ ಎನ್ನುವುದನ್ನು ಪಾರ್ಲಿಮೆಂಟ್ ಹೇಗೆ ನಿರ್ಣಯ ಮಾಡುತ್ತದೆಯೋ ಅದೇ ರೀತಿ, ಮಾನವ ಹಕ್ಕುಗಳನ್ನು ಯಾವರೀತಿ ರಕ್ಷಣೆ ಮಾಡಬೇಕು ಎನ್ನುವ ನಿಟ್ಟಿನಲ್ಲಿ Magna Carta ನಿಂದ ಮಾನವ ಹಕ್ಕುಗಳ ರಕ್ಷಣಾ ಕಾಯಿದೆ 1998ರವರೆವಿಗೂ ಇಂಗ್ಲೆಂಡ್ ಪಾರ್ಲಿಮೆಂಟ್ ಮಾಡಿರುವಂತಹ ಹಲವಾರು ಕಾನೂನುಗಳ ಮೂಲಕ ಮಾನವ ಹಕ್ಕುಗಳು ಎನ್ನುವುದು ಬೆಳೆದು ಬಂದಿದೆ ಎಂಬ ಅಂಶವನ್ನು ಶಿಬಿರಾರ್ಥಿಗಳಿಗೆ ತಿಳಿಸಿದರು.

ನಮ್ಮ ದೇಶದಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯುವ ನಿಟ್ಟಿನಲ್ಲಿ ಮೊದಲು ಸಭಾ-ಸಮಿತಿ ಎಂದಿದ್ದು, ಹಳ್ಳಿಗಳ ಮಟ್ಟದಲ್ಲಿ, ಗ್ರಾಮಗಳ ಮಟ್ಟದಲ್ಲಿ ಹೆಚ್ಚು ಜನ ಸೇರುತ್ತಿದ್ದರು; ಕ್ರಮೇಣ ಸಂಸದೀಯ ಪದ್ಧತಿ ಬೆಳೆದು ಬಂತು. ಪಂಚಾಯಿತಿಯಂತಹ ವ್ಯವಸ್ಥೆಗಳು ಪಕ್ವವಾದ ನಿರ್ಣಯ ಕೈಗೊಳ್ಳುವಂಥದ್ದು ಮಧ್ಯ ಕಾಲದವರೆಗೆ ಮುಂದುವರೆದು, ವಸಾಹತುಶಾಹಿಯ ಸಂದರ್ಭದಲ್ಲಿ Native Representative System ನಾಶವಾದಾಗ, ಮತ್ತೆ ಜನ ಸಂಸದೀಯ ವ್ಯವಸ್ಥೆ ಬೇಕೆಂದು ಪ್ರತಿಭಟನೆ ಮಾಡಿದಾಗ ಬ್ರಿಟಿಷರು ಕೆಲವು ಕಾನೂನುಗಳ ಮೂಲಕ ಸೀಮಿತ ರೀತಿಯಲ್ಲಿ ಪ್ರಜಾಪ್ರಭುತ್ವದ ಕೆಲವು ಲಕ್ಷಣಗಳನ್ನು ಅಳವಡಿಸುವ ಪ್ರಯತ್ನ ಮಾಡಿದುದನ್ನು ಸನ್ಮಾನ್ಯರು ಶಿಬಿರಾರ್ಥಿಗಳಿಗೆ ತಿಳಿಸಿಕೊಟ್ಟರು.

1861 Charter Act (The Indian Councils Act) ನಲ್ಲಿ ಗವರ್ನರ್ ಜನರಲ್ ಅವರಿಗೆ ಸಲಹೆ ಕೊಡಲು 6 ರಿಂದ 12 ಜನ ಪ್ರತಿನಿಧಿಗಳು ಇದ್ದುದು, 1892ರಲ್ಲಿ ಆ ಸಂಖ್ಯೆಯನ್ನು 10 ರಿಂದ 16ಕ್ಕೆ ಏರಿಸಿದರು; 1909ರಲ್ಲಿ Minto-Morley reforms ನಲ್ಲಿ 60 ಜನರ ಏಕ ಸದನದ ಪದ್ಧತಿಯನ್ನು, 1919ರಲ್ಲಿ ದ್ವಿಸದನ ಪದ್ಧತಿಯನ್ನು ಮೊದಲನೆ ಬಾರಿಗೆ ಪರಿಚಯಿಸಿದರು. 60 ಜನ ಮೇಲ್ಮನೆಯಲ್ಲಿ ಮತ್ತು 160 ಜನ ಕೆಳಮನೆಯಲ್ಲಿದ್ದು, ಇದರಲ್ಲಿ 100 ಜನ ಚುನಾಯಿತರಾಗಿದ್ದು ಮತ್ತು ಇನ್ನು ಕೆಲವರು ಚುನಾಯಿತರಲ್ಲದ Official Members ಗಳಿದ್ದರು. 1935ರಲ್ಲಿ 150 ಸದಸ್ಯರು ಮೇಲ್ಮನೆಯಲ್ಲಿ ಮತ್ತು 250 ಸದಸ್ಯರು ಕೆಳಮನೆಯಲ್ಲಿದ್ದರು. ಹೀಗೆ ರಾಜಕೀಯ ಮುತ್ಸದ್ದಿಗಳಿಗೆ ಸ್ವಾತಂತ್ರ್ಯ ಹೋರಾಟಗಾರರಿಗೆ ಭಾಗವಹಿಸುವುದಕ್ಕೆ ಅವಕಾಶ ಕೊಟ್ಟಿದ್ದರಿಂದ ಕೇಂದ್ರದ ಮತ್ತು ರಾಜ್ಯಗಳ

ಹಂತದಲ್ಲಿ ಬೇರೆ ಬೇರೆ ಕಡೆ ಪ್ರತಿನಿಧಿತ್ವದ ಪದ್ಧತಿ ಬೆಳೆದು ಬರಲು ಕಾರಣವಾಯಿತೆಂಬ ಮಾಹಿತಿಯನ್ನು ಶಿಬಿರಾರ್ಥಿಗಳಿಗೆ ಕೊಟ್ಟರು.

ಡಾ: ಬಿ.ಆರ್. ಅಂಬೇಡ್ಕರ್, ಶ್ರೀ ಜವಾಹರ್‌ಲಾಲ್ ನೆಹರು, ಶ್ರೀ ಕೃಷ್ಣಸ್ವಾಮಿ ಹೀಗೆ ಅನೇಕ ಮುತ್ಸದ್ದಿಗಳು ಸಂವಿಧಾನ ರಚನೆಯ ದೊಡ್ಡ ಕಾರ್ಯದಲ್ಲಿ ಕೈಜೋಡಿಸಿದ್ದರಿಂದ ವಿಶ್ವದಲ್ಲೇ ಮಾದರಿಯಾದ ಸಂವಿಧಾನ ಬರುವುದಕ್ಕೆ, ಸಂಸದೀಯ ಪದ್ಧತಿ ಮೂಲಕ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿಯುವಂತಹ, ಪ್ರಜಾಪ್ರಭುತ್ವಕ್ಕೆ ಬುನಾದಿ ಹಾಕುವಂತಹ ಕೆಲಸವನ್ನು ಸಂಸದೀಯ ವ್ಯವಹಾರಗಳ ಸಂಸ್ಥೆ ಮಾಡುವಂತಾಯಿತು; ಜನರೆಲ್ಲರೂ ಇದಕ್ಕೆ ಕೈಜೋಡಿಸಿದ್ದರಿಂದ ಇದು ಯಶಸ್ವಿಯಾಯಿತೆಂದು ತಿಳಿಸಿದರು.

ಪ್ರಜಾಪ್ರಭುತ್ವ ಅಥವಾ ಸಂಸದೀಯ ವ್ಯವಸ್ಥೆಯಾಗಲಿ ಇದು ಒಂದು ದಿನದ ವ್ಯವಹಾರವಾಗಿರದೇ ನಿರಂತರವಾದ ಕ್ರಿಯೆ; ಸಮಾಜದ ಎಲ್ಲಾ ಜನ ಸೇರಬೇಕು; ಪ್ರತಿದಿನ ಅವರ ಕಮಿಟ್‌ಮೆಂಟ್ ರಿವ್ಯೂ ಮಾಡಬೇಕು. ಮಹಾತ್ಮ ಗಾಂಧೀಯವರು, ಒಂದು ಸೇವೆಯನ್ನು ಮಾಡುವುದಕ್ಕೆ ಅಧಿಕಾರವನ್ನು ಚಲಾಯಿಸುವುದಾರೆ ಅಂತಹ ಸಂದರ್ಭದಲ್ಲಿ ಆ ಅಧಿಕಾರ ಗುಣವರ್ಧಕವಾಗುತ್ತದೆ; ಏಕೆಂದರೆ, ಅದರ ಮೂಲಕ ಒಂದು ಸೇವೆ ಎನ್ನುವುದು ಆಗುತ್ತದೆ, ಆ ಅವಕಾಶವನ್ನು ಪಡೆಯುವುದಕ್ಕಾಗಿ ಮತವನ್ನು ಪಡೆದುಕೊಂಡು ಅಧಿಕಾರ ಹೊಂದುವಂಥದ್ದು it is an apportion of that process ಎಂದು ಹೇಳಿದ್ದ ಮಾತನ್ನು ಶಿಬಿರಾರ್ಥಿಗಳಿಗೆ ತಿಳಿಸಿದರು.

ಕೊನೆಯದಾಗಿ, ಹೊಸ ಸದಸ್ಯರಿಗೆ ಸ್ಫೂರ್ತಿ ಕೊಟ್ಟ, ಕೌಶಲ್ಯವನ್ನು ಹೆಚ್ಚು ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಈ ತರಬೇತಿ ಶಿಬಿರದಲ್ಲಿ ಮಾತನಾಡಲು ಅವಕಾಶ ಕೊಟ್ಟ ಹಾಗೂ ಕಾರ್ಯಕ್ರಮವನ್ನು ಆಯೋಜಿಸಿದ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರಿಗೆ ಧನ್ಯವಾದಗಳನ್ನು ತಿಳಿಸಿ **ಪ್ರೊ. ಪಿ.ಈಶ್ವರಭಟ್ಟ** ವಿರಮಿಸಿದರು.

**(ಈ ಹಂತದಲ್ಲಿ ವಿಧಾನ ಪರಿಷತ್ತಿನ ಅಪರ ಕಾರ್ಯದರ್ಶಿಯವರು ಪ್ರೊ. ಪಿ.ಈಶ್ವರಭಟ್ಟ ಅವರಿಗೆ ವಂದನೆಗಳನ್ನರ್ಪಿಸಿದರು)**

**ಮಾನ್ಯ ಶಾಸಕರಾದ ಶ್ರೀ ಸಿ.ಎನ್..ಮಂಜೇಗೌಡರವರು,** ತಮ್ಮ ಅನಿಸಿಕೆಗಳನ್ನು ಹೇಳಕೊಳ್ಳಲು ಅವಕಾಶ ಮಾಡಿಕೊಟ್ಟ ಮಾನ್ಯ ಸಭಾಪತಿಯವರಿಗೆ ಮತ್ತು ಇತರ ಗಣ್ಯರಿಗೆ ಧನ್ಯವಾದಗಳನ್ನು ತಿಳಸಿದರು. ತಾವು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಎ.ಪಿ.ಎಂ.ಸಿ ಇವೆಲ್ಲದರಲ್ಲೂ ಅಧ್ಯಕ್ಷನಾಗಿ, ಸದಸ್ಯನಾಗಿ ಕೆಲಸ ಮಾಡಿದ್ದರೂ ಅನೇಕ ವಿಚಾರಗಳು ಗೊತ್ತಿರಲಿಲ್ಲವೆಂದು ತಿಳಸಿದರು. ಮಾನ್ಯ ಸಿದ್ಧರಾಮಯ್ಯ ಮತ್ತು ಮಾನ್ಯ ಜೆ.ಸಿ.ಮಾಧುಸ್ವಾಮಿಯವರು ಮಾತನಾಡುವ ಸಂದರ್ಭದಲ್ಲಿ needs and wants ಬಗ್ಗೆ ಮಾತನಾಡಿ, ಸರ್ಕಾರದಲ್ಲಿ ಶಾಸನವನ್ನು ಮಾಡತಕ್ಕಂಥ ಶಕ್ತಿ ಇರುವವರು needs ಬಗ್ಗೆ ಹೆಚ್ಚಿನ ಗಮನ ಕೊಡಬೇಕೆಂದು ತಿಳಸಿದ ವಿಚಾರ ಇದುವರೆಗೂ ತನಗೆ ಗೊತ್ತಿರಲಿಲ್ಲವೆಂದು, ಈ ಶಿಬಿರಕ್ಕೆ ಬಂದ ನಂತರ ಮನವರಿಕೆಯಾಯಿತು ಎಂಬ ಮಾತನ್ನು ಹೇಳದರು.

ಆರೂವರೆ ಕೋಟಿ ಜನಸಂಖ್ಯೆ ಪೈಕಿ 75 ಜನ ಶಾಸಕರು ಎಂ.ಎಲ್.ಸಿ.ಗಳಾಗಿ, 224 ಜನ ಶಾಸಕರು ಎಂ.ಎಲ್.ಎ ಗಳು ವಿಧಾನಸೌಧಕ್ಕೆ ಬರಲು ಪುಣ್ಯ ಮಾಡಿರಬೇಕು ಎಂದು ಹೇಳದ್ದನ್ನು ಕೇಳದೆ. ಈ ಕುರಿತು ಇದುವರೆಗೂ ಯೋಚನೆ ಮಾಡುವ ಸಮಯ ಸಿಕ್ಕಿರಲಿಲ್ಲವೆಂದು, ಈ ಶಿಬಿರದಲ್ಲಿ ಭಾಗವಹಿಸಿ ಪಡೆದುಕೊಂಡ ಅನುಭವ ಬಹಳ ಚೆನ್ನಾಗಿತ್ತೆಂದು ತಿಳಸಿದರು.

ಮಾನ್ಯ ಶ್ರೀ ಡಿ.ಹೆಚ್.ಶಂಕರಮೂರ್ತಿಯವರು ವಿಧಾನ ಪರಿಷತ್ತಿನ ಸದಸ್ಯರಾಗಿ ಬಂದಿದ್ದಾಗ ಶ್ರೀಮತಿ ಗಂಗೂಬಾಯಿ ಹಾನಗಲ್ ಅವರೊಂದಿಗೆ ಆದ ಅನುಭವವನ್ನು ಹಂಚಿಕೊಂಡಿದ್ದು ನೀತಿದಾಯಕವಾಗಿತ್ತು, ಸದನದಲ್ಲಿ ಮಾತನಾಡುವಾಗ ಸಮಯದ ಕಡೆ ಗಮನ ಕೊಡಬೇಕೆಂದು, ಮಾತನಾಡುವ ವಿಷಯದ ಮೇಲೆ ಹಿಡಿತ ಇಟ್ಟುಕೊಳ್ಳಬೇಕೆಂದು, ಯಾವುದೇ ಸಂದರ್ಭದಲ್ಲೂ ಬಾವಿಗೆ ಇಳದು ಧರಣಿ ಮಾಡಬಾರದು ಎಂದು, ಸದನದಲ್ಲಿ ಉಪಸ್ಥಿತಿ ಇರುವುದರ ಕುರಿತು, ಹೀಗೆ ಎಲ್ಲಾ ಹಿರಿಯರು ಹೇಳದ ಮಾತುಗಳನ್ನು ಪಾಲಿಸುತ್ತೇನೆಂದು, ಈ ಶಿಬಿರದಲ್ಲಿ ಕಳೆದ ಸಮಯ ತಮ್ಮ ಜೀವನದ ಅತ್ಯಮೂಲ್ಯ ಸಮಯವೆಂದು ತಿಳಸಿ, ತರಬೇತಿ ಶಿಬಿರದ ಆಯೋಜನೆ ಮಾಡಿದ ಮಾನ್ಯ ಸಭಾಪತಿಗಳಗೆ, ಪಾಠ ಹೇಳಕೊಟ್ಟ ಎಲ್ಲಾ ಹಿರಿಯರಿಗೆ ಧನ್ಯವಾದಗಳನ್ನರ್ಪಿಸಿದರು ಮತ್ತು ನಾಡಿಗೆ ಒಳ್ಳೆಯದಾಗಲಿ ಎಂದು ಹೇಳ ವಿರಮಿಸಿದರು.

# ವಂದನಾರ್ಪಣೆ

ಕರ್ನಾಟಕ ವಿಧಾನ ಪರಿಷತ್ತಿನ **ಅಪರ ಕಾರ್ಯದರ್ಶಿಗಳಾದ ಶ್ರೀಮತಿ ಎಸ್.ನಿರ್ಮಲರವರು,** ಕಾರ್ಯಾಗಾರವನ್ನು ಆಯೋಜಿಸಲು ಪ್ರೇರಕರಾದ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರಿಗೂ, ಭಾರತದ ಸಂವಿಧಾನ ಬಗ್ಗೆ ಉಪನ್ಯಾಸ ನೀಡಿದ ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರಿಗೂ, ಶಿಬಿರವನ್ನು ವಿದ್ಯುಕ್ತವಾಗಿ ಉದ್ಘಾಟಿಸಿ ತಮ್ಮ ಅನುಭವವನ್ನು ಹಂಚಿಕೊಂಡ, ಕಾನೂನು, ಸಂಸದೀಯ ವ್ಯವಹಾರ ಮತ್ತು ಶಾಸನ ರಚನಾ ಇಲಾಖೆ ಹಾಗೂ ಸಣ್ಣ ನೀರಾವರಿ ಇಲಾಖೆ ಸಚಿವರಾದ ಶ್ರೀ ಜೆ.ಸಿ.ಮಾಧುಸ್ವಾಮಿಯವರಿಗೂ, ತರಬೇತಿ ಶಿಬಿರದ ಉದ್ಘಾಟನೆಯ ಸಂದರ್ಭದಲ್ಲಿ ಉಪಸ್ಥಿತರಿದ್ದು, ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾದಂತಹ ಶ್ರೀ ಬಿ.ಕೆ.ಹರಿಪ್ರಸಾದ್‌ರವರಿಗೂ, ಮಾಜಿ ಮುಖ್ಯಮಂತ್ರಿಗಳು ಹಾಗೂ ವಿಧಾನಸಭೆಯ ಪ್ರತಿಪಕ್ಷದ ನಾಯಕರಾದ ಶ್ರೀ ಸಿದ್ಧರಾಮಯ್ಯನವರಿಗೂ, ವಿಧಾನಸಭೆಯ ಮಾಜಿ ಸಭಾಧ್ಯಕ್ಷರಾದ ಶ್ರೀ ಕೆ.ಆರ್.ರಮೇಶ್‌ಕುಮಾರ್ ಅವರಿಗೂ, ವಿಧಾನ ಪರಿಷತ್ತಿನ ಮಾಜಿ ಸಭಾಪತಿಗಳಾದ ಶ್ರೀ ಬಿ.ಎಲ್.ಶಂಕರ್ ಮತ್ತು ಶ್ರೀ ಡಿ.ಹೆಚ್.ಶಂಕರಮೂರ್ತಿಯವರಿಗೂ, ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರವರಿಗೂ, ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಶ್ರೀ ಗೋ.ಮಧುಸೂದನ್ ಅವರಿಗೂ ಮತ್ತು ಸಮಾರೋಪ ನುಡಿಗಳನ್ನು ಆಡಿದಂತಹ ಕರ್ನಾಟಕ ಕಾನೂನು ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಪ್ರೊ.ಪಿ.ಈಶ್ವರಭಟ್ಟ ಇವರುಗಳಿಗೆ ವಂದನೆಗಳನ್ನು ಸಲ್ಲಿಸಿದರು.

ಸದರಿ ಕಾರ್ಯಕ್ರಮವು ವ್ಯವಸ್ಥಿತವಾಗಿ ನಡೆಯಲು ಕಾರಣರಾದ ವಿಧಾನ ಪರಿಷತ್ತಿನ ಕಾರ್ಯದರ್ಶಿಗಳಾದ ಶ್ರೀಮತಿ ಕೆ.ಆರ್.ಮಹಾಲಕ್ಷ್ಮಿ ಅವರಿಗೂ, ಶಿಬಿರದಲ್ಲಿ ಭಾಗವಹಿಸಿದ್ದ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೂ, ಮಾಧ್ಯಮ ಮಿತ್ರರಿಗೂ, ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಪ್ರತಿಯೊಬ್ಬರಿಗೂ ವಂದನೆಗಳನ್ನು ಸಲ್ಲಿಸಲಾಯಿತು.

**ತರಬೇತಿ ಶಿಬಿರವು ಸಂಜೆ 6-00 ಗಂಟೆಗೆ ಮುಕ್ತಾಯವಾಯಿತು.**

<><><>